ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 25 ಮಂಗಳವಾರ 2025

ಸಂಪುಟ: 45 | ಸಂಚಿಕೆ: 308 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಯಾವುದೇ ಹುದ್ದೆಯಲ್ಲಿದ್ದರೂ 2028ರ ವಿಧಾನಸಭೆ ಚುನಾವಣೆಗೆ ನನ್ನದೇ ನಾಯಕತ್ವ: ಡಿಕೆಶಿ


ಬೆಂಗಳೂರು: ನಾನು ಯಾವುದೇ ಹುದ್ದೆಯಲ್ಲಿದ್ದರೂ 2028ರ ವಿಧಾನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುವುದು ನನ್ನ ಕರ್ತವ್ಯ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

2028ರ ಚುನಾವಣೆ ನಿಮ್ಮ ನಾಯಕತ್ವ ದಲ್ಲಿ ನಡೆಯಲಿದೆಯೇ ಎಂಬ ಸುದ್ದಿ ಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಹುದ್ದೆಗಳು ಪಕ್ಷವನ್ನು ಮುನ್ನಡೆಸುವಂತೆ ಮಾಡುವುದಿಲ್ಲ ಎಂದರು. ನಾನು ಏನೇ ಆಗಬಹುದು, ಅದು ಮುಖ್ಯವಲ್ಲ. ಪಕ್ಷ ಕೊಟ್ಟಿರುವ ಶಕ್ತಿಯಿಂದ ನಾವು ನಾಯಕ ರಾಗಿದ್ದು, ಕಾಂಗ್ರೆಸಿಗನಾಗಿ ಪಕ್ಷಕ್ಕೆ ಶಕ್ತಿ ತುಂಬಿ ಮುನ್ನಡೆಸುವುದು ಮುಖ್ಯ ಎಂದರು. 2023ರಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ಪಕ್ಷ ಸೋಲು ಕಂಡಿದ್ದ 86 ಕ್ಷೇತ್ರಗಳ ಪೈಕಿ ಸುಮಾರು 60 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುವ ಸಾಧ್ಯತೆಗಳಿವೆ ಎಂದು ■ 6ನೇ ಪುಟಕ್ಕೆ

ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಉಡುಗೊರೆ

ನಿಗಮ–ಮಂಡಳಿ, ಪ್ರಾಧಿಕಾರಗಳ ಸದಸ್ಯರ ನೇಮಕಾತಿ ಪ್ರಕ್ರಿಯೆಗೆ ಚಾಲನೆ

- ಪಟ್ಟಿ ಸಿದ್ಧಪಡಿಸುತ್ತಿರುವ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿಕೆಶಿ
- ಮುಂದಿನ 10 ದಿನದಲ್ಲಿ ಕಾರ್ಯಕರ್ತರಿಗೆ ಅಧಿಕಾರ ಭಾಗ್ಯ
- ಸಲಹಾ ಸಮಿತಿಗಳಿಗೂ ಇದೇ ವೇಳೆ ನೇಮಕಾತಿ
- ಉಸ್ತುವಾರಿ ಸಚಿವರುಗಳಿಗೆ ಹೊಸ ಟಾಸ್ಕ್ ಕೊಟ್ಟ ಡಿಕೆಶಿ



ಬೆಂಗಳೂರು, ಫೆ 24(ಕೆಎಂಶಿ)– ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಾಗುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಭರ್ಜರಿ ಉಡುಗೊರೆ ನೀಡಲು ಸರ್ಕಾರ ಮುಂದಾಗಿದೆ. ಪಕ್ಷ ಸಂಘಟನೆಗಾಗಿ ದುಡಿದ ಸಾವಿರಾರು ಕಾರ್ಯಕರ್ತರನ್ನು ವಿವಿಧ ನಿಗಮ–ಮಂಡಳಿ ಹಾಗೂ ಪ್ರಾಧಿಕಾರಗಳಲ್ಲಿ ಸದಸ್ಯರನ್ನಾಗಿ ನೇಮಕ ಮಾಡಲಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಒಂದೆಡೆ ಸರ್ಕಾರಿ ನೇಮಕಾತಿ ಜೊತೆಗೆ ಮತ್ತೊಂದೆಡೆ ಪಕ್ಷ ಸಂಘಟನೆಯಲ್ಲೂ ಬಡ್ತಿ ನೀಡಲಾಗುವುದು ಎಂದರು.

ಯಾರಿಗೆ ಯಾವ ಅಧಿಕಾರ ನೀಡಬೇಕೆಂಬ ಬಗ್ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್, ನಮ್ಮ ಪಕ್ಷದ ಶಾಸಕರು ಮತ್ತು ಸೋತ ಅಭ್ಯರ್ಥಿಗಳಿಂದ ಮಾಹಿತಿ ಪಡೆದು ಪಟ್ಟಿ ಸಿದ್ಧಪಡಿಸಿದ್ದಾರೆ. ಆ ಪಟ್ಟಿ ಜೊತೆಗೆ ಇನ್ನೂ ಕೆಲವು ಸರ್ಕಾರದ ಸಲಹಾ ಸಮಿತಿಗಳಿಗೂ ಕಾರ್ಯಕರ್ತರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗುವುದು. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ಮಾಡಿ, ವಾರ ಇಲ್ಲವೆ 10 ದಿನದಲ್ಲಿ ಕಾರ್ಯಕರ್ತರಿಗೆ ಅಧಿಕಾರ ನೀಡಲಾಗುವುದು ಎಂದರು. ಕರ್ನಾಟಕದಲ್ಲಿ ಮತ್ತೆ 2028ರಲ್ಲೂ ಪಕ್ಷವನ್ನು ಅಧಿಕಾರಕ್ಕೆ ತರುವ ಹಿನ್ನೆಲೆಯಲ್ಲಿ ನಾವು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ.

ನನಗೆ ನಾಯಕತ್ವ ಇರಲಿ ಬಿಡಲಿ, ಚುನಾವಣೆಯ ಮುಂಚೂಣಿಯಲ್ಲಿ ನಿಂತು ಪಕ್ಷಕ್ಕಾಗಿ ಹೋರಾಡಿ ಅಧಿಕಾರಕ್ಕೆ ತರುತ್ತೇನೆ. ಚುನಾವಣಾ ಪೂರ್ವಭಾವಿ ಸಿದ್ಧತೆಗಾಗಿಯೇ ಇಂದು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಂಡ ಪಕ್ಷದ ಅಭ್ಯರ್ಥಿಗಳೊಂದಿಗೆ ಚರ್ಚೆ ಮಾಡಿದ್ದೇನೆ.

ನಾವು 86 ಕ್ಷೇತ್ರಗಳಲ್ಲಿ ಪರಾಭವಗೊಂಡಿದ್ದೇವೆ. ಅದರಲ್ಲಿ 60 ಕ್ಷೇತ್ರಗಳಲ್ಲಿ ನಮಗೆ ಗೆಲ್ಲುವ ಅವಕಾಶವಿದೆ, ಇಂತಹ ಕಡೆಗಳಲ್ಲಿ ಗೆಲ್ಲಲು ಏನು ಮಾಡಬೇಕು ಎಂಬುದನ್ನು ಇಂದಿನ ಸಭೆಯಲ್ಲಿ ತಿಳಿಸಿದ್ದೇನೆ. ಇಂದಿನಿಂದ ಒಂದು ವಾರ ಕಾಲ ಸಿದ್ದರಾಮಯ್ಯ ಸಂಪುಟದ ಎಲ್ಲಾ ಸಚಿವರು, ತಮಗೆ ವಹಿಸಿರುವ ಉಸ್ತುವಾರಿ ಜಿಲ್ಲೆಯಲ್ಲಿನ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಕಾರ್ಯಕರ್ತರ ಜೊತೆ ನೇರ ಸಂವಾದ ಮಾಡಬೇಕು. ಸಂವಾದ ನಡೆಸುವುದಷ್ಟೇ ಅಲ್ಲ, ಅವರ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲೇ ಪರಿಹರಿಸಬೇಕು. ಅಲ್ಲದೆ, ಆಯಾ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಕಚೇರಿ ಇಲ್ಲದಿದ್ದರೆ, ಹೊಸ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡುವಂತೆ ಪಕ್ಷದ ಅಧ್ಯಕ್ಷನಾಗಿ ಸಲಹೆ ನೀಡಿದ್ದೇನೆ. ಸ್ವಾತಂತ್ರ್ಯ ಪೂರ್ವದ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಪಕ್ಷದ ಕಚೇರಿ ಇಲ್ಲದ ಕಡೆಗಳಲ್ಲಿ 100 ಕಚೇರಿಗಳ ನಿರ್ಮಾಣಕ್ಕೆ ತೀರ್ಮಾನ ಕೈಗೊಳ್ಳಲಾಗಿದೆ. ಸ್ಥಳೀಯ ಸಂಸ್ಥೆಗಳಿಂದ ಜಾಗ ಪಡೆದುಕೊಂಡು ಕಟ್ಟಡ ನಿರ್ಮಾಣ ಆರಂಭಿಸಿ, ಇಲ್ಲವೇ ಜಾಗ ಖರೀದಿ ಮಾಡಿ ಪಕ್ಷಕ್ಕೆ ಸಣ್ಣ ಕಚೇರಿಯನ್ನಾದರೂ ನಿರ್ಮಿಸಿ ಎಂದು ಪ್ರತಿ ಕ್ಷೇತ್ರದ ಮುಖಂಡರಿಗೂ ಆದೇಶಿಸಿರುವುದಾಗಿ ತಿಳಿಸಿದರು.

ವಿಧಾನಸೌಧದಲ್ಲಿ ಶಾಸಕರಿಗೆ ನಿದ್ದೆ ಭಾಗ್ಯ!



ಬೆಂಗಳೂರು, ಫೆ.24– ವಿಧಾನಸಭೆ ಅಧಿವೇಶನಕ್ಕೆ ಆಗಮಿಸುವ ಶಾಸಕರಿಗೆ ಸ್ಪೀಕರ್ ಯು.ಟಿ.ಖಾದರ್ ಹಲವು ಸೌಲಭ್ಯಗಳನ್ನು ನೀಡಿದ್ದಾರೆ. ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಊಟ, ಬಳಿಕ ಆರೋಗ್ಯ ಕಾಪಾಡಲು ಫ್ರೂಟ್ಸ್ ಅಷ್ಟೇ ಅಲ್ಲ, ಅಗತ್ಯ ಬಿದ್ದಾಗ ಟೀ, ಕಾಫಿ, ತಿಂಡಿ ಉಚಿತವಾಗಿ ಸಿಗುತ್ತಿದೆ. ಇದೀಗ ಇದರ ಪಾಲಿಗೆ ಮತ್ತೊಂದು ಸೇರ್ಪಡೆ ಆಗುತ್ತಿದೆ. ಮಧ್ಯಾಹ್ನದ ಊಟ ಮಾಡಿ ಮಲಗೋ ಅಭ್ಯಾಸ ಇರುವ ಶಾಸಕರಿಗೆ ಅನುಕೂಲ ಆಗಲಿ ಎಂದು ಈ ಬಾರಿಯ ಅಧಿವೇಶನದಲ್ಲಿ 15 ರಿಕ್ಲೈನರ್ ಬಾಡಿಗೆ ಪಡೆದುಕೊಳ್ಳಲು ನಿರ್ಧಾರ ಮಾಡಲಾಗಿದೆ.

ಈ ಕುರಿತು ಸ್ವತಃ ಸ್ಪೀಕರ್ ಯು.ಟಿ. ಖಾದರ್ ಮಾಹಿತಿ ನೀಡಿದ್ದು, 10 ರಿಂದ 15 ರಿಕ್ಲೈನರ್‌ಗಳನ್ನು ಖರೀದಿ ಮಾಡುವ ಬದಲಾಗಿ ಬಾಡಿಗೆಗೆ ಪಡೆದು ಕೊಳ್ಳಲು ತೀರ್ಮಾನ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಶಾಸಕರು ಊಟ ಮಾಡಿದ ಬಳಿಕ ನಿದ್ದೆಯ ಅಭ್ಯಾಸ ಇದ್ದರೆ ತಮ್ಮ ರೂಂಗೆ ಹೋಗಿ ಮಲಗುವ ಬದಲಾಗಿ ಸದನದ ಸಮಯ ಉಳಿಸುವ ನಿಟ್ಟಿನಲ್ಲಿ ಈ ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂದು ತಿಳಿಸಿದರು.

ಕಳೆದ ವಿಧಾನಸಭೆ ಅಧಿವೇಶನದಲ್ಲಿ ಎರಡು ರಿಕ್ಲೈನರ್‌ಗಳನ್ನು ಖರೀದಿ ಮಾಡಲಾಗಿತ್ತು. ಪ್ರಾಯೋಗಿಕವಾಗಿ ವಿಧಾನಸಭೆ ಮೊಗಸಾಲೆಯಲ್ಲಿ ಇದನ್ನು ಇಡಲಾಗಿತ್ತು. ಅಧಿವೇಶನಕ್ಕೆ ಆಗಮಿಸುವ ಶಾಸಕರು ಮಧ್ಯಾಹ್ನ ಊಟ ಮಾಡಿದ ಬಳಿಕ ಕೆಲಕಾಲ ವಿಶ್ರಾಂತಿ ಪಡೆಯುವ ನಿಟ್ಟಿನಲ್ಲಿ ಇಲ್ಲಿ ಮಲಗಿದ್ದರು. ಹೆಚ್ಚಿನ ಶಾಸಕರಿಗೆ ಆರಾಮದಾಯಕ ನಿದ್ದೆ ಮಾಡಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇದೀಗ 10ರಿಂದ 15 ರಿಕ್ಲೈನರ್‌ಗಳನ್ನು ಬಾಡಿಗೆಗೆ ಪಡೆದುಕೊಳ್ಳಲು ನಿರ್ಧಾರ ಮಾಡಲಾಗಿದೆ ಎಂದರು.

ಸಾಲಬಾಧೆ, ಕೌಟುಂಬಿಕ ಕಲಹ

ವಿಶ್ವೇಶ್ವರಯ್ಯ ನಾಲೆಗೆ ಹಾರಿ ಮಗಳೊಂದಿಗೆ ದಂಪತಿ ಆತ್ಮಹತ್ಯೆ


ನಂಜನಗೂಡು ಬಳಿ ಈಜಲು ಹೋದ ಯುವಕ ಜಲಸಮಾಧಿ



ಮಾಸ್ತಯ್ಯ



ರತ್ನಮ್ಮ



ಲಕ್ಷ್ಮೀ

ಮಂಡ್ಯ, ಫೆ.24–ಸಾಲಬಾಧೆ ಹಾಗೂ ಕೌಟುಂಬಿಕ ಕಲಹದಿಂದಾಗಿ ಒಂದೇ ಕುಟುಂಬದ ಮೂವರು ವಿಶ್ವೇಶ್ವರಯ್ಯ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಡ್ಯ ತಾಲೂಕಿ ಚಂದಗಾಲು ಬಳಿ ಸೋಮವಾರ ನಡೆದಿದೆ.

ಶ್ರೀರಂಗಪಟ್ಟಣದ ಗಂಜಾಂ ನಿವಾಸಿಗಳಾದ ಆಟೋ ಚಾಲಕ ಮಾಸ್ತಯ್ಯ (52), ಈತನ ಪತ್ನಿ ರತ್ನಮ್ಮ(40), ಪುತ್ರಿ ಲಕ್ಷ್ಮೀ (14) ಮೃತರು. ಮಾಸ್ತಯ್ಯ ಅವರು ಕುಟುಂಬ ನಿರ್ವಹಣೆ ಹಾಗೂ ಇತರ ಖರ್ಚಿಗಾಗಿ ಹಲವು ಮಂದಿಯಿಂದ ಸುಮಾರು 12 ಲಕ್ಷ ರೂ. ಕೈಸಾಲ ಪಡೆದು ಕೊಂಡಿದ್ದರು ಎನ್ನಲಾಗಿದ್ದು, ಸಾಲ ತೀರಿಸಲು ಜಮೀನು ಮಾರಾಟ ಮಾಡಲು ಯತ್ನಿಸಿದಾಗ ಅವರ ಸಹೋದರ ಶಂಕರ್ ನಾಯಕ್ ತಕರಾರು ತೆಗೆದಿದ್ದರು ಎಂದು ಹೇಳಲಾಗಿದ್ದು, ಈ ಕಾರಣದಿಂದಾಗಿಯೇ ಈ ಕುಟುಂಬ ಆತ್ಮಹತ್ಯೆಗೆ ಶರಣಾಗಿದೆ ಎಂದು ಮಾಸ್ತಯ್ಯ ಷಡ್ಡಕ ಅಶೋಕ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

> ಮಾಸ್ತಯ್ಯ 12 ಲಕ್ಷ ಸಾಲ ಮಾಡಿಕೊಂಡಿದ್ದೇನೆ ಎಂದು ಹೇಳಿದ್ದರು. ಯಾಕೆ ಅಷ್ಟು ಸಾಲ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ಜಮೀನು ಮಾರಬೇಕೆಂದು ಕೇಳಿದ್ದರು. ಆದರೆ ಅದು ನಮ್ಮ ತಂದೆಯ ಹೆಸರಿನಲ್ಲಿರುವ ದರ್ಖಾಸ್ತು ಭೂಮಿಯಾಗಿದ್ದು, ನಮ್ಮ ಹೆಸರಿನಲ್ಲಿ ಯಾವುದೇ ದಾಖಲೆ ಇಲ್ಲ. ದಾಖಲೆಗಾಗಿ ರೆವಿನ್ಯೂ ಇನ್ಸ್‌ಪೆಕ್ಟರ್ ಬಳಿ ಹೋಗಿ ಕೇಳಿದ್ದೆವು. ಅವರು 15 ದಿನ ಕಾಯುವಂತೆ ಹೇಳಿದ್ದರು. ಮಾಸ್ತಯ್ಯನಿಗೆ ಮೊದಲನೇ ಹೆಂಡತಿ, ಮಗನೂ ಇದ್ದಾರೆ. ಈಗ ಸಾವಿಗೀಡಾಗಿರುವುದು ಅವರ ಎರಡನೇ ಹೆಂಡತಿ ಮತ್ತು ಮಗಳು. ನನ್ನ ಮತ್ತು ಅಣ್ಣನ ಮಧ್ಯೆ ಯಾವುದೇ ಮನಸ್ತಾಪಗಳಿಲ್ಲ. ನಾನೂ ಆಟೋ ಚಾಲಕನಾಗಿದ್ದು, ಅವರಿಗೆ ಆರ್ಥಿಕ ಸಹಾಯ ಮಾಡುವಂತಹ ಶಕ್ತಿ ನನಗಿಲ್ಲ.
> –ಶಂಕರ್, ಮಾಸ್ತಯ್ಯ ಸಹೋದರ.



ಸಲ್ಮಾನ್

ವಿವರ: ಸೋಮವಾರ ಬೆಳಗ್ಗೆ ತಮ್ಮದೇ ಆಟೋದಲ್ಲಿ ಗಂಜಾಂನಿಂದ ಪತ್ನಿ ಮತ್ತು ಪುತ್ರಿಯೊಂದಿಗೆ ಮಂಡ್ಯ ತಾಲೂಕು ಚಂದಗಾಲು ಬಳಿಯ ವಿಶ್ವೇಶ್ವರಯ್ಯ ನಾಲೆಯ ಬಳಿ ಬಂದು, ಏರಿ ಮೇಲೆ ಆಟೋ ನಿಲ್ಲಿಸಿ, ಮೂವರೂ ನಾಲೆಗೆ ಹಾರಿದ್ದಾರೆ. ಇದನ್ನು ಗಮನಿಸಿದ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದವರು ನಾಲೆಗೆ ಜಿಗಿದು ಅವರನ್ನು ರಕ್ಷಿಸುವ ಪ್ರಯತ್ನ ಮಾಡಿದ್ದಾರೆ. ಆದರೆ, ತುಂಬಿ ಹರಿಯುತ್ತಿದ್ದ ನಾಲೆಯ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದು, ಶವಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ.

ಈಜುಗಾರರು ನಾಲೆಯಲ್ಲೇ ಈಜುತ್ತಾ ಹುಡುಕಾಟ ನಡೆಸಿದ್ದಾರೆ. ಕಡೆಗೆ ಘಟನೆ ಸ್ಥಳದಿಂದ ಸುಮಾರು ■ 6ನೇ ಪುಟಕ್ಕೆ

> ಚಂದಗಾಲು ಬಳಿ ವಿಶ್ವೇಶ್ವರಯ್ಯ ನಾಲೆಗೆ ಹಾರಿ ಆಟೋ ಚಾಲಕ, ಆತನ ಪತ್ನಿ ಮತ್ತು ಪುತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾಸ್ತಯ್ಯ ಮತ್ತು ಪತ್ನಿ ರತ್ನಮ್ಮ ದೇಹಗಳು ದೊರೆತಿದ್ದು, ಲಕ್ಷ್ಮೀ ದೇಹಕ್ಕಾಗಿ ಹುಡುಕಾಟ ನಡೆಯುತ್ತಿದೆ. ಮಾಸ್ತಯ್ಯ 12 ಲಕ್ಷ ಸಾಲ ಮಾಡಿಕೊಂಡಿದ್ದರು ಎಂಬ ಮಾಹಿತಿ ಇದೆ. ಜೊತೆಗೆ ಅವರಿಗೆ ಕೌಟುಂಬಿಕ ಸಮಸ್ಯೆಗಳೂ ಇತ್ತು ಎಂದು ಹೇಳಲಾಗುತ್ತಿದೆ. ಈಗ ಮಾಸ್ತಯ್ಯ ಷಡ್ಡ ಹುಣಸೂರಿನ ಅಶೋಕ್ ಎಂಬುವವರು ಸಲ್ಲಿಸಿರುವ ದೂರನ್ನು ದಾಖಲಿಸಿಕೊಳ್ಳಲಾಗಿದೆ. ಇವರು ಡೆತ್‌ನೋಟ್ ಬರೆದಿಟ್ಟಿದ್ದಾರೆ ಎಂದು ಹೇಳಲಾಗುತ್ತಿದ್ದು, ಅದಕ್ಕಾಗಿ ಗಂಜಾಂನಲ್ಲಿರುವ ಅವರ ಮನೆಯಲ್ಲಿ ಶೋಧನೆ ಮಾಡಲಾಗುವುದು. ಈ ಪ್ರಕರಣದಲ್ಲಿ ಮೂವರು ಆತ್ಮಹತ್ಯೆ ಮಾಡಿಕೊಳ್ಳಲು ಯಾರದಾದರೂ ಕಿರುಕುಳ ಅಥವಾ ಪ್ರಚೋದನೆ ಇತ್ತೇ ಎಂಬುದರ ಬಗ್ಗೆ ತನಿಖೆ ನಡೆಸಲಾಗುವುದು. ಒಂದು ವೇಳೆ ಕಿರುಕುಳ ಅಥವಾ ಪ್ರಚೋದನೆ ಇದ್ದದ್ದು ಕಂಡು ಬಂದರೆ ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.
> – ಮಲ್ಲಿಕಾರ್ಜುನ ಬಾಲದಂಡಿ, ಮಂಡ್ಯ ಎಸ್ಪಿ



ಗೃಹಲಕ್ಷ್ಮಿಯರಿಗೆ ಹಣ ನೀಡಲು ಪರದಾಟ; ಖಾಲಿ ಖಜಾನೆ ತುಂಬಲು 'ಬಿ' ಖಾತಾ ಮೊರೆ

ಮೈಸೂರಿನಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಲೇವಡಿ

- ಆರ್ಥಿಕ ಶಕ್ತಿ ತುಂಬಲು ಅಗತ್ಯ ವಸ್ತುಗಳ ಬೆಲೆ ಏರಿಕೆ
- ಸತ್ಯ ಹೇಳಿದ್ದಕ್ಕೆ ನನ್ನ ಟಾರ್ಗೆಟ್; ಸಿದ್ದರಾಮಯ್ಯ ಹರಿಶ್ಚಂದ್ರರೆ



ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸೋಮವಾರ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಫೆ24(ಬಿಎಲ್‌ಯು)– ಆರ್ಥಿಕ ಸಂಕಷ್ಟದಿಂದ ಖಾಲಿಯಾಗಿರುವ ಖಜಾನೆ ತುಂಬಿಸಿಕೊಳ್ಳಲು ರಾಜ್ಯ ಕಾಂಗ್ರೆಸ್ ಸರ್ಕಾರ ಅಕ್ರಮ ಬಡಾವಣೆಗಳ ನಿವೇಶನ, ಮನೆಗಳನ್ನು ಸಕ್ರಮಗೊಳಿಸಲು ತೀರ್ಮಾನಿಸಿ, ಬಿ ಖಾತಾ ನೀಡುತ್ತಿದೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಕ್ರಮ ನಿವೇಶನ ಹಾಗೂ ಮನೆಗಳಿಗೆ ಬಿ ಖಾತಾ ನೀಡುವ ಬಗ್ಗೆ ಇಷ್ಟು ದಿನ ಇಲ್ಲದ ಚಿಂತನೆ ಈಗೇಕೆ ಬಂದಿದೆ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ರಾಜ್ಯದ ಖಜಾನೆ ತುಂಬಿಸಿಕೊಳ್ಳಲು ತರಾತುರಿಯಲ್ಲಿ ಇ ಖಾತಾ ನೀಡುತ್ತಿದೆ ಎಂದು ಆಪಾದಿಸಿದರು. ಗೃಹಲಕ್ಷ್ಮಿ ಯೋಜನೆಯಲ್ಲಿ ಮಹಿಳೆಯರಿಗೆ ಎರಡು ■ 6ನೇ ಪುಟಕ್ಕೆ

ಜಿ.ಟಿ.ದೇವೇಗೌಡರ ಮುನಿಸಿಗೆ ನಾನು ಕಾರಣನಲ್ಲ!

ಶಾಸಕ ಜಿ.ಟಿ.ದೇವೇಗೌಡರು ಮುನಿಸಿಕೊಳ್ಳಲು ನಾನೇನು ಕಾರಣನಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು. ನನಗೆ ಯಾರ ಮೇಲೂ ದ್ವೇಷವಿಲ್ಲ. ನಮ್ಮ ಹಾಗೂ ಶಾಸಕ ಜಿ.ಟಿ.ದೇವೇಗೌಡರ ಮುನಿಸು ಗಂಡ ಹೆಂಡತಿ ಜಗಳ ಇದ್ದಂತೆ ಎಂದು ನಾನೇ ಹೇಳಿದ್ದೆ. ಆದರೆ ಇತ್ತೀಚಿಗೆ ಗಂಡ–ಹೆಂಡತಿ ಜಗಳ ಯಾವ ರೀತಿ ನಡೆಯುತ್ತಿದೆ, ಯಾವ ರೀತಿ ಸಮನ್ವಯದ ಕೊರತೆ ಇದೆ ಎಂದು ನೀವೇ ಮಾಧ್ಯಮಗಳಲ್ಲಿ ತೋರಿಸುತ್ತಿದ್ದೀರಲ್ಲ ಎಂದು ಹೇಳಿದರು.

ಲೋಕಾಯುಕ್ತವನ್ನು ದೇವರೇ ಕಾಪಾಡಬೇಕು

ಮುಡಾ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರು ನಿರ್ದೋಷಿಗಳೆಂದು ನ್ಯಾಯಾಲಯದಲ್ಲಿ ಬಿ ರಿಪೋರ್ಟ್ ಸಲ್ಲಿಸಿರುವ ಲೋಕಾಯುಕ್ತವನ್ನು ದೇವರೆ ಕಾಪಾಡಬೇಕು ಎಂದು ಕುಮಾರಸ್ವಾಮಿ ಲೇವಡಿ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಭಾವ ಬೀರಿ ತಮಗೆ ಇಷ್ಟ ಬಂದಂತೆ ಲೋಕಾಯುಕ್ತ ವರದಿ ಬರೆಸಿಕೊಂಡಿದ್ದಾರೆ. ಇದರಿಂದ ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಪ್ರತಿ ಹಂತದ ತನಿಖೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿದೆ. ಇದರ ವಾಸ್ತವತೆ ಬಗ್ಗೆ ಹೇಳಿದರೆ, ನಾವು ಅವರಿಗೆ ಕಿರುಕುಳ ನೀಡುತ್ತಿದ್ದೇವೆ ಎಂದು ನಮ್ಮ ವಿರುದ್ಧವೇ ಆಧಾರರಹಿತ ಆರೋಪ ಮಾಡುತ್ತಾರೆ ಎಂದು ಕಿಡಿಕಾರಿದರು. ರಾಜ್ಯ ಕಾಂಗ್ರೆಸ್ ಸರ್ಕಾರದ ಈ ಧೋರಣೆಯಿಂದ ಲೂಟಿ ಮಾಡುವವರು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಆದರೆ ಜನಸಾಮಾನ್ಯರು ಸಣ್ಣ ತಪ್ಪು ಮಾಡಿದರೂ ಸಂಕಷ್ಟ ಅನುಭವಿಸುವಂತಾಗಿದೆ ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಮುಂದೊಂದು ದಿನ ಪೊಲೀಸರ ಮನೆಗೆ ನುಗ್ಗಿ ಹೊಡೆಯುತ್ತಾರೆ

ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಮಾಡಿದವರಿಗೆ ರಕ್ಷಣೆ ನೀಡಿದರೆ ಮುಂದೊಂದು ದಿನ ಪೊಲೀಸರ ಮನೆಗೆ ನುಗ್ಗುತ್ತಾರೆ ಎಂದು ಹೆಚ್.ಡಿ.ಕುಮಾರಸ್ವಾಮಿ ಎಚ್ಚರಿಸಿದರು. ಪೊಲೀಸ್ ಠಾಣೆ ಹಾಗೂ ಪೊಲೀಸ್ ವಾಹನಗಳ ಮೇಲೆ ಕಲ್ಲು ತೂರಾಟ ಮಾಡಿದ್ದಾರೆ ಎಂದರೆ ನಮ್ಮ ರಾಜ್ಯದ ಶಾಂತಿ ಸುವ್ಯವಸ್ಥೆ ಎಲ್ಲಿಗೆ ಬಂದು ನಿಂತಿದೆ ಎಂಬುದನ್ನು ಗಮನಿಸಬೇಕು. ಮೂಟೆಗಳಲ್ಲಿ ಕಲ್ಲು ತುಂಬಿಕೊಂಡು ಬಂದು ಪೊಲೀಸ್ ಠಾಣೆ ಮೇಲೆ ದಾಳಿ ಮಾಡುತ್ತಾರೆ ಎಂದರೆ ಕಾನೂನಿನ ಬಗ್ಗೆ ಅವರಿಗಿರುವ ಅಗೌರವವನ್ನು ಇದು ತೋರಿಸುತ್ತದೆ. ಉದಯಗಿರಿ ಗಲಾಟೆ ಸಂದರ್ಭದಲ್ಲಿ ಯಾರೇ ತಪ್ಪು ಮಾಡಿದ್ದರೂ ಅವರನ್ನು ನಿರ್ದಯವಾಗಿ ಶಿಕ್ಷೆಗೆ ಗುರಿ ಮಾಡಬೇಕು ಎಂದು ಅಭಿಪ್ರಾಯಪಟ್ಟರು. ರಾಷ್ಟ್ರಕವಿ ಕುವೆಂಪು ಹೇಳುವಂತೆ ಸರ್ವ ಜನಾಂಗದ ಶಾಂತಿಯ ತೋಟವಾಗಬೇಕು. ನಮ್ಮ ಸಮಾಜ ರಕ್ಷಣೆಗೆ ಬಿಜೆಪಿ ನಾಯಕರು ಹೋಗುತ್ತಾರೆ. ಆದರೆ ನಿಮ್ಮ ಒಳ್ಳೆಯ ಉದ್ದೇಶವನ್ನು ಅವರು ದುರುಪಯೋಗ ಮಾಡಿಕೊಂಡು ಮತ್ತಷ್ಟು ಭದ್ರರಾಗುತ್ತಾ ಹೋಗುತ್ತಾರೆ ಎಂದು ಒಂದು ಸಮುದಾಯವನ್ನು ಉಲ್ಲೇಖಿಸಿ ಮಾರ್ಮಿಕವಾಗಿ ನುಡಿದರು. ಬಹಳಷ್ಟು ಜ್ವಲಂತ ಸಮಸ್ಯೆಗಳಿವೆ. ಇದರ ಪರಿಹಾರಕ್ಕೆ ಮುಂದಾಗಿ. ಶಾಂತಿ, ನೆಮ್ಮದಿಗೆ ಭಂಗ ತರುವ ಗಲಭೆಕೋರ ಶಕ್ತಿಗಳನ್ನು ಮಟ್ಟ ಹಾಕಿ. ಈ ಮೂಲಕ ಬೆಂಕಿ ಇಟ್ಟವರು ಬಲಿಯಾಗಬೇಕು ಎಂದು ಸಲಹೆ ನೀಡಿದರು.

ಮಂಡ್ಯದಲ್ಲಿ ಪುಡಿ ರೌಡಿಗಳಿಂದ ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ

ಲಾಂಗು ಹಿಡಿದು ಹಲ್ಲೆ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಪುಂಡರು



ಮಂಡ್ಯ,ಫೆ.24– ಪುಡಿರೌಡಿಗಳ ತಂಡವೊಂದು ಲಾಂಗ್, ಇನ್ನಿತರೆ ಮಾರಕಾಸ್ತ್ರಗಳಿಂದ ಯುವಕನೊಬ್ಬನ ಮೇಲೆ ಮನಬಂದಂತೆ ಹಲ್ಲೆ ನಡೆಸಿ, ಆ ದೃಶ್ಯವನ್ನು ಫೇಸ್‌ಬುಕ್‌ನಲ್ಲಿ ಲೈವ್ ಮಾಡಿರುವ ಘಟನೆ ಮಂಡ್ಯದಲ್ಲಿ ನಡೆದಿದೆ.

ಮಂಡ್ಯದ ಸ್ಮಶಾನವೊಂದರಲ್ಲಿ ಯುವಕರ ಗುಂಪೊಂದು ಯುವಕನ ಮೇಲೆ ಈ ರೀತಿ ಲಾಂಗು–ಮಚ್ಚುಗಳಿಂದ ಮನಬಂದಂತೆ ಹಲ್ಲೆ ನಡೆಸಿದ್ದು, ಆತ ಕಾಲಿಗೆ ಬಿದ್ದರೂ ಬಿಡದೇ, ಸೈಕೋಗಳಂತೆ ಮಚ್ಚುಗಳನ್ನು ಉಲ್ಟಾ ಹಿಡಿದು ಮನಬಂದಂತೆ ಥಳಿಸಿದ್ದಾರೆ. ಬಳಿಕ ಸುಮಾರು ಆರೇಳು ನಿಮಿಷದ ವೀಡಿಯೋವನ್ನು ■ 6ನೇ ಪುಟಕ್ಕೆ

ಮೈಸೂರು ಮಿತ್ರ ಮಂಗಳವಾರ 25 ಫೆಬ್ರವರಿ 2025

ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಮಹಾಶಿವರಾತ್ರಿ ಪೂಜೆ





ಮೈಸೂರು, ಫೆ. 24– ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಹಾಶಿವ ರಾತ್ರಿಯ ಪ್ರಯುಕ್ತ ಫೆ.25ರಂದು ಮಹಾ ಗಣಪತಿ ಹೋಮ, ಫೆ. 26ರ ಮಹಾಶಿವ ರಾತ್ರಿಯಂದು ಪಂಚಾಮೃತ ಪುರಸ್ಸರ ರುದ್ರಾಭಿಷೇಕ, 108 ಪಾರ್ಥಿವ ಲಿಂಗ ಪೂಜೆ, ಸಂಜೆ ಪ್ರದೋಷಕಾಲ ಪೂಜೆ, ರಾತ್ರಿ 9 ಗಂಟೆಗೆ ರಾಶಿಪೂಜೆ, ರಂಗ ಪೂಜೆ, ಮಹಾಕೈಲಾಸ ಶಿಖರ ದೀಪಾ ರಾಧನೆ, ನಾಲ್ಕು ಜಾವದ ರುದ್ರಾಭಿಷೇಕ ನೆರವೇರುತ್ತದೆ. ಫೆ. 27 ರಂದು ರುದ್ರ ಹೋಮ ಹಾಗೂ ಶನೈಶ್ಚರ ಜಯಂತಿ, ಫೆ. 28ರಂದು ಶಿವರಾತ್ರಿ ಅಮಾ ವಾಸ್ಯೆಯ ಪ್ರಯುಕ್ತ ಕಾಳಸರ್ಪಶಾಂತಿ, ಶನಿಶಾಂತಿ, ಮೃತ್ಯುಂಜಯ ಹೋಮ, ಮಾಂಗಲ್ಯ ಮಂಗಳ ಚಂಡಿಕಾ ಹೋಮ, ಸ್ವಯಂವರ ಪಾರ್ವತಿ ಹೋಮ, ದಕ್ಷಿಣಾಮೂರ್ತಿ ಹಾಗೂ ಧನ್ವಂತರಿ ಹೋಮ, ಸುಬ್ರಹ್ಮಣ್ಯ ಕುಜ ಶಾಂತಿ ಹೋಮ, ನವಗ್ರಹ ಹೋಮ ನೆರವೇರುತ್ತದೆ. ಹೆಚ್ಚಿನ ಮಾಹಿತಿಗೆ ಪ್ರಧಾನ ಅರ್ಚಕರಾದ ಸೋಮಶೇಖರ ಭಟ್ ಅವರನ್ನು ಮೊ. 9535413361 ಮೂಲಕ ಸಂಪರ್ಕಿಸಬಹುದು.

ಮಹಾಶಿವರಾತ್ರಿ ಅಂಗವಾಗಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಸಪ್ತರ್ಷಿ ಸರೋವರದಲ್ಲಿ ಉಚಿತ ತೀರ್ಥಸ್ನಾನ




ಮೈಸೂರು, ಫೆ. 24– ಮಹಾ ಶಿವ ರಾತ್ರಿಯ ಪರ್ವ ದಿನದಂದು ಶ್ರೀ ಗಣ ಪತಿ ಸಚ್ಚಿದಾನಂದ ಆಶ್ರಮದ ಸಪ್ತರ್ಷಿ ಸರೋವರದಲ್ಲಿ ಉಚಿತವಾಗಿ ತೀರ್ಥ ಸ್ನಾನ ಏರ್ಪಡಿಸಲಾಗಿದೆ. ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ತ್ರಿವೇಣಿ ಸಂಗಮದ ಕುಂಭಮೇಳಕ್ಕೆ ಹೋಗಲಾಗ ದವರು ಈ ತೀರ್ಥ ಸ್ನಾನದ ಅವಕಾಶ ವನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ಆಶ್ರಮದ ಸಪ್ತರ್ಷಿ ಸರೋವರದಲ್ಲಿ ಪ್ರಯಾಗ್‌ರಾಜ್‌ನಿಂದ ಪೂಜ್ಯ ಸ್ವಾಮೀಜಿ ಯವರು ಫೆಬ್ರವರಿ 18ರಂದು ಪುಣ್ಯ ಸ್ನಾನ ಆಚರಿಸಿದಾಗ ತಂದಿರುವ ತ್ರಿವೇಣಿ ಪವಿತ್ರ ಜಲ, ಭಾರತದ ಪವಿತ್ರ ನದಿಗಳ ಜಲವನ್ನು ಮಿಶ್ರಣ ಮಾಡಲಾಗಿದೆ.

ಫೆ. 26ರಂದು ಬೆಳಿಗ್ಗೆ 7ಘಂಟೆಯಿಂದ ಮಧ್ಯಾಹ್ನ 12 ಘಂಟೆಯವರೆಗೆ ಈ ಸ್ನಾನದ ವ್ಯವಸ್ಥೆ ಮಾಡಲಾಗಿದೆ.

ಮಹಾ ಶಿವರಾತ್ರಿ ಪ್ರಯುಕ್ತ ಫೆ.26ರ ಸಂಜೆ ಭಕ್ತ ಜನರೇ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ಸ್ವಯಂ ಅಭಿಷೇಕ ಮಾಡುವ ವ್ಯವಸ್ಥೆ ಇದೆ. ರಾತ್ರಿಯಿಡೀ ಜಾಗರಣೆಯಲ್ಲಿ ಶಿವಪೂಜೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಸುತ್ತೂರು ಶ್ರೀಕ್ಷೇತ್ರದಲ್ಲಿ ಮಹಾಶಿವರಾತ್ರಿ



ಮೈಸೂರು, ಫೆ.24–ಸುತ್ತೂರು ಶ್ರೀ ಕ್ಷೇತ್ರದಲ್ಲಿ ಫೆ.26 ಬುಧವಾರದಂದು ಮಹಾಶಿವರಾತ್ರಿಯ ವಿಶೇಷ ಕಾರ್ಯ ಕ್ರಮಗಳನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಶಿವರಾತ್ರೀಶ್ವರ ಶಿವಯೋಗಿಗಳ ವವರ ಕರ್ತೃಗದ್ದುಗೆಯಲ್ಲಿ ಬುಧವಾರ ಬೆಳಗ್ಗೆ 6 ಹಾಗೂ ಸಂಜೆ 6ರಿಂದ ಗುರುವಾರ ಬೆಳಗ್ಗೆ 6ರವರೆಗೆ ನಾಲ್ಕು ಜಾವ ಗಳಲ್ಲಿಯೂ ವಿಶೇಷ ಪೂಜೆಗಳು ನಡೆಯುತ್ತವೆ. 26ರ ಸಂಜೆ 7ಕ್ಕೆ ಶಿವದೀಕ್ಷೆ ಮತ್ತು ರಾತ್ರಿ 9.30ಕ್ಕೆ ಬೆಳ್ಳಿರಥ ಪ್ರಾಕಾ ರೋತ್ಸವವಿರುತ್ತದೆ. ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳ ಲ್ಲಿಯೂ ವಿಶೇಷ ಪೂಜೆ ಇರುತ್ತದೆ.

ಗದ್ದುಗೆಯ ಆವರಣದಲ್ಲಿ 26ರ ಸಂಜೆ 5.30ಕ್ಕೆ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು, ರಾತ್ರಿ 8ಕ್ಕೆ ಮೈಸೂರಿನ ಶ್ರೀರಾಂಪುರದ ಶ್ರೀಮತಿ ರೇವತಿ ಶರ್ಮ ಮತ್ತು ತಂಡದವರಿಂದ ಭಕ್ತಿಗಾಯನ, ರಾತ್ರಿ 10ಕ್ಕೆ ಶ್ರೀ ಎಸ್.ಆರ್. ಲಕ್ಷ್ಮೀನರ ಸಿಂಹನ್ ಅವರಿಂದ ಶಿವಕಥಾ ಸಂಕೀರ್ತನೆ, ರಾತ್ರಿ 1ಕ್ಕೆ ಮೈಸೂರಿನ ಲಿಂಗರಾಜು ಮತ್ತು ತಂಡದವರಿಂದ ಜನಪದ ಭಕ್ತಿ ಗೀತೆಗಳು, ರಾತ್ರಿ 3ಕ್ಕೆ ಚಾಮರಾಜನಗರ ಜಿಲ್ಲೆಯ ಬ್ಯಾಡಮೂಡ್ಲು ಗ್ರಾಮದ ಶ್ರೀ ಮಲೆ ಮಹದೇಶ್ವರ ಕಂಸಾಳೆ ಮತ್ತು ಸಾಂಸ್ಕೃತಿಕ ಕಲಾ ಟ್ರಸ್ಟ್‌ನವರಿಂದ ನೀಲ ಗಾರರ ಮೇಳ, ಪ್ರಾತಃಕಾಲ 5ಕ್ಕೆ ಹೊರಳ ವಾಡಿಯ ಶ್ರೀ ಬಸವೇಶ್ವರ ಭಜನಾ ತಂಡದವರಿಂದ ಭಜನೆ ಕಾರ್ಯಕ್ರಮ ಗಳು ನಡೆಯಲಿವೆ. ಶ್ರೀಮಠ ಮತ್ತು ಕರ್ತೃಗದ್ದುಗೆಯಲ್ಲಿ ಬುಧವಾರ ಬೆಳಗ್ಗೆ 6 ರಿಂದ ಗುರುವಾರ ಬೆಳಗ್ಗೆ 6 ರವರೆಗೆ ವಿವಿಧ ಭಜನಾ ತಂಡಗಳಿಂದ ಅಖಂಡ ಭಜನೆ ಇರುತ್ತದೆ. ಫೆ. 28 ರಂದು ಅಮಾ ವಾಸ್ಯೆ ವಿಶೇಷ ಪೂಜೆ ನೆರವೇರುತ್ತದೆ. ವಿಶೇಷ ಪೂಜೆ ಇತ್ಯಾದಿ ಸೇವಾರ್ಥ ನೆರವೇರಿಸುವವರು 8896964242 ಮೊಬೈಲ್‌ನಲ್ಲಿ ಸಂಪರ್ಕಿಸಬಹುದಾಗಿದೆ.

ಉಮಾಮಹೇಶ್ವರಿ ದೇವಸ್ಥಾನದಲ್ಲಿ ಅದ್ಧೂರಿ ಮಹಾಶಿವರಾತ್ರಿ ಆಚರಣೆ

ಮೈಸೂರು, ಫೆ. 24– ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಕುವೆಂಪು ನಗರ 2ನೇ ಹಂತ, ಕೆಹೆಚ್‌ಬಿ ಕಾಲೋನಿ ಯಲ್ಲಿರುವ ಶ್ರೀ ಉಮಾಮಹೇಶ್ವರಿ ದೇವಸ್ಥಾನದಲ್ಲಿ ಶಿವರಾತ್ರಿ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಗುತ್ತಿದೆ. ಅಂದು ಬೆಳಗ್ಗೆ 6 ರಿಂದ ರುದ್ರಾಭಿಷೇಕ ಆರಂಭಗೊಂಡು, ನಂತರ ಮಹಾ ಮಂಗಳಾರತಿ ನಡೆಯಲಿದೆ. ಸಂಜೆ 6 ಗಂಟೆಯಿಂದ ಮೊದಲನೇ ಜಾವದ ಪೂಜೆ, ರಾತ್ರಿ 9 ಗಂಟೆಗೆ ಎರಡನೇ ಜಾವದ ಪೂಜೆ, ಮಧ್ಯರಾತ್ರಿ 12 ಗಂಟೆಗೆ ಮೂರನೇ ಜಾವದ ಪೂಜೆ ಹಾಗೂ ಬೆಳಗ್ಗೆ 4 ಗಂಟೆಗೆ ನಾಲ್ಕನೇ ಜಾವದ ಪೂಜೆ ನಡೆಯಲಿದ್ದು, ನಿಯತಕಾಲಕ್ಕೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗವಿರುತ್ತದೆ. ಅಲ್ಲದೆ ರಾತ್ರಿ ಭಜನೆ ಹಾಗೂ ನೃತ್ಯ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಸ್ಥಾನದ ಅಧ್ಯಕ್ಷರಾದ ಎನ್. ಪ್ರಕಾಶ್ (ಮೊ. 94480–92818) ತಿಳಿಸಿದ್ದಾರೆ.

ಶ್ರೀಮಹದೇವ ದೇಶಿಕೇಂದ್ರ ಸ್ವಾಮೀಜಿ ನಿಧನ



ಮೈಸೂರು, ಫೆ. 24–ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ನಮಃ ಶಿವಾಯ ಮಠದ ಅಧ್ಯಕ್ಷರು ಮತ್ತು ಶ್ರೀ ನಟರಾಜ ವಿದ್ಯಾಸಂಸ್ಥೆ ಕಾರ್ಯ ದರ್ಶಿಯಾದ ಶ್ರೀ ಮಹದೇವ ದೇಶಿಕೇಂದ್ರ ಸ್ವಾಮೀಜಿ (72) ಸೋಮವಾರ ಬೆಳಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೂಲತಃ ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲೂಕು ಗೂಳೀಪುರ ಗ್ರಾಮದ ದಿವಂಗತ ಮಹದೇವಪ್ಪ ಮತ್ತು ದಿವಂಗತ ಲಲಿತಮ್ಮ ದಂಪತಿ ಪುತ್ರರಾದ ಇವರು ಓರ್ವ ಸಹೋದರ ಮತ್ತು ಮೂವರು ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಜಿ.ಪ್ರಕಾಶ್



ಮೈಸೂರು, ಫೆ.24–ಮೈಸೂರು ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಅನುವಾದಕರಾದ ಕೆ.ಜಿ.ಪ್ರಕಾಶ್(74) ಸೋಮವಾರ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರು ಕೆ.ಜಿ. ಸತೀಶ್, ಗ್ರಾಜುಯೇಟ್ಸ್ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ; ಓರ್ವ ಸಹೋದರಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜ್ಞಾನಿಗಳಿಗೆ ಸಾಹಿತ್ಯ, ಸಾಹಿತಿಗಳಿಗೆ ವೈಜ್ಞಾನಿಕ ಸಂಸ್ಕೃತಿ ಅರಿವು ಇಲ್ಲದಿರುವುದೇ ಅಭಿವೃದ್ಧಿ ಕುಂಠಿತಗೊಳ್ಳಲು ಕಾರಣ

ಬಹುಮುಖಿ ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಅಭಿಮತ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನದಲ್ಲಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಚಿಂತಕ ಡಾ.ನರಹಳ್ಳಿ ಬಾಲಸುಬ್ರಮಣ್ಯ ಉದ್ಘಾಟಿಸಿದರು.

ಮೈಸೂರು, ಫೆ. 24– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು ಸಹಯೋಗ ದಲ್ಲಿ 'ಕನ್ನಡವೆಂದರೆ ಬರಿನುಡಿಯಲ್ಲ, ಅದಕಿದೆ ವಿಜ್ಞಾನದ ಸ್ಪರ್ಶ' ವಿಷಯ ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ವಿವೇಕಾನಂದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸಂಕಿರಣವನ್ನು ಉದ್ಘಾಟಿಸಿದ ಬೆಂಗ ಳೂರಿನ ಬಹುಮುಖಿ ಚಿಂತಕ ಡಾ. ನರಹಳ್ಳಿ ಬಾಲಸುಬ್ರಮಣ್ಯ ಮಾತನಾಡಿ, ನಾವು ಬದುಕುತ್ತಿರುವುದೇ ಜಾಗತೀ ಕರಣ ಹಾಗೂ ತಂತ್ರಜ್ಞಾನದ ಯುಗ ದಲ್ಲಿ. ಇವುಗಳ ಪರಿಣಾಮವೆಂದರೆ ಇವುಗಳೊಟ್ಟಿಗೆ ಬರುವ ಎಲ್ಲ ವಲಯ ಗಳ ಪಲ್ಲಟಗಳನ್ನೂ ನಾವು ಅನಿವಾರ್ಯ ವಾಗಿ ಒಪ್ಪಿಕೊಳ್ಳಲೇಬೇಕು. ಅರ್ಥವ್ಯವಸ್ಥೆ ಯಲ್ಲಾಗುವ ಅಲ್ಲೋಲ–ಕಲ್ಲೋಲ, ಜೀವನಶೈಲಿಯಲ್ಲಾಗುವ ಬದಲಾವಣೆ, ರೂಢಿಯ ನಂಬಿಕೆಗಳನ್ನು ಅಸ್ತವ್ಯಸ್ತ ಗೊಳಿಸುವ ಆಧುನಿಕ ಪ್ರಗತಿಯ ವಿದ್ಯ ಮಾನಗಳು, ಪ್ರಕೃತಿಯ ಮೇಲಾಗುತ್ತಿ ರುವ ಹಲ್ಲೆ, ಮಾನವ ಸಂಬಂಧಗಳ ಮೇಲಾಗುತ್ತಿರುವ ಆಘಾತಗಳು–ಇವೆ ಲ್ಲವೂ ನಮ್ಮ ಬದುಕಿನ ಸಹಜ ಲಯ ವನ್ನು ಅಸ್ತವ್ಯಸ್ತಗೊಳಿಸುತ್ತಿವೆ. ರಸೆಲ್ ಹೇಳುವಂತೆ ನಮ್ಮ ಕಾಲದಲ್ಲಿ ತಂತ್ರಜ್ಞಾನ ಸ್ವತಂತ್ರ ಅಸ್ತಿತ್ವ ಪಡೆದ ಶಾಸ್ತ್ರವಲ್ಲ; ಅದು ಜನರ ಮೇಲೆ ಸವಾರಿ ಮಾಡುತ್ತಿರುವ ಯಜಮಾನಿಕೆಯ ಶಕ್ತಿ. ಈ ಹೊತ್ತಿನಲ್ಲಿ ತಂತ್ರಜ್ಞಾನದ ಅನುಕೂಲ ಹಾಗೂ ಅಪಾಯ ಗಳನ್ನು ಚರ್ಚಿಸುವುದು ನಮ್ಮ ಕಾಲದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜವಾ ಬ್ದಾರಿಯೂ ಹೌದು ಎಂದು ತಿಳಿಸಿದರು.

ಭಾರತೀಯ ಜ್ಞಾನ ಪರಂಪರೆಯನ್ನು ಗಮನಿಸಿದರೆ ಸಾಹಿತ್ಯಕ್ಕೆ ಇದ್ದಷ್ಟೇ ಪ್ರಾಶಸ್ತ್ಯ ವಿಜ್ಞಾನಕ್ಕೂ ಇದ್ದಿತು. ಗಣಿತ, ಖಗೋಳ ವಿಜ್ಞಾನ, ಆಯುರ್ವೇದ ಮುಂತಾದ ಜ್ಞಾನ ಶಾಖೆಗಳನ್ನು ನಾವು ನಿದರ್ಶ ನಕ್ಕಾಗಿ ಗಮನಿಸಬಹುದು. ಅದರಲ್ಲೂ ದಶಮೂಲ ಪದ್ಧತಿ ಜಗತ್ತಿಗೆ ಭಾರತ ನೀಡಿದ ಬಹುದೊಡ್ಡ ಕೊಡುಗೆ ಅಂತೆಯೇ ಸೊನ್ನೆಯ ಪರಿಕಲ್ಪನೆ. ನಮ್ಮ ಅಧ್ಯಯನ ಕ್ರಮದಲ್ಲಿ ಒಂದು ರೀತಿಯ ಸಮಗ್ರತೆ ಇತ್ತು. ಆದರೆ, ಬರಬರುತ್ತಾ ನಮ್ಮ ಅಧ್ಯ ಯನದ ಕ್ರಮ ಬಿಡಿಯಾದ ನೆಲೆಯಲ್ಲಿ ನಡೆಯುತ್ತಿದೆಯೇ ಹೊರತು, ಇಂಡಿ ಯಾದ ಪರಿಕಲ್ಪನೆಯಿಂದ ದೂರ ಸರಿದಂತೆ ಕಾಣುತ್ತದೆ. ವಿಶೇಷ ನೈಪುಣ್ಯತೆಯ ನೆಲೆಯಲ್ಲಿ ಆಳಕ್ಕೆ ಇಳಿಯುತ್ತಾ ಹೋಗಿ ವಿಸ್ತಾರವನ್ನು ಕಳೆದುಕೊಂಡಿತೇ, ಅನ್ಯ ಜ್ಞಾನ ಶಿಸ್ತುಗಳ ಜೊತೆ ಅನುಸಂಧಾನ ಕಡಿಮೆಯಾಯಿತೇ, ಇಂದು ಮಾನವ ಸಂಬಂಧಗಳಂತೆಯೇ ಜ್ಞಾನ ಶಾಖೆ ಗಳೂ ದ್ವೀಪಗಳಾಗುತ್ತಿವೆಯೇ, ಇಂತಹ ಪ್ರಶ್ನೆಗಳಿಗೆ ನಾವು ಮುಖಾಮುಖಿಯಾಗ ಬೇಕಾಗಿದೆ ಎಂದು ಕರೆಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯ ದರ್ಶಿ ಡಾ.ಟಿ.ವಿಜಯಲಕ್ಷ್ಮಿ ವಹಿಸಿದ್ದರು.

ಪ್ರಾಂಶುಪಾಲರಾದ ಡಾ.ಬಿ.ಆರ್ ಜಯಕುಮಾರಿ, ಬೆಂಗಳೂರಿನ ಅಭಿನವದ ನ.ರವಿಕುಮಾರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹ ಕನ್ನಡ ಪ್ರಾಧ್ಯಾಪಕ ಡಾ.ವಿನೋದಮ್ಮ, ಕಾಲೇಜಿನ ಸಿಇಒ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ. ಸಿ.ಕೆ. ರೇಣುಕಾರ್ಯ, ಕನ್ನಡ ವಿಭಾಗದ ಪ್ರಾಧ್ಯಾಪಕರು ಇನ್ನಿತರರು ಉಪಸ್ಥಿತರಿದ್ದರು.

25ನೇ ದಿನಕ್ಕೆ ಕಾಲಿಡುತ್ತಿರುವ ಭಗೀರಥ ಚಿತ್ರ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಟ ಜಯಪ್ರಕಾಶ್(ಜೆಪಿ) ಮಾತನಾಡಿದರು.

ಮೈಸೂರು, ಫೆ. 24(ಜಿಎ)– ಭಗೀರಥ ಚಿತ್ರವು ಉತ್ತಮ ಪ್ರದರ್ಶ ನಗೊಂಡು ಯಶಸ್ವಿಯಾಗಿ 25ನೇ ದಿನಕ್ಕೆ ಕಾಲಿಡುತ್ತಿದೆ ಎಂದು ನಟ ಜಯಪ್ರಕಾಶ್(ಜೆಪಿ) ತಿಳಿಸಿದರು

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಫೆ.7ರಂದು ತೆರೆಕಂಡ ಚಿತ್ರವು ಉತ್ತಮ ಕಥೆ, ನಿರ್ದೇಶನ ಹಾಗೂ ಅದ್ಧೂರಿ ನಿರ್ಮಾಣದಿಂದ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿ ಯಶಸ್ವಿ ಯಾಗಿ 25ನೇ ದಿನಕ್ಕೆ ಕಾಲಿಡುತ್ತಿದೆ. ಕೆಲವರು ಉತ್ತರ ಕರ್ನಾಟಕ, ಚಾಮ ರಾಜನಗರ ಜಿಲ್ಲೆಯಿಂದ ಕರೆ ಮಾಡಿ ಇಲ್ಲಿ ಚಿತ್ರ ಬಿಡುಗಡೆ ಮಾಡಿ ಎಂದು ಒತ್ತಾಯಿಸುತ್ತಿದ್ದಾರೆ ಎಂದರು.

ಬಹುತೇಕ ಚಿತ್ರದ ಚಿತ್ರೀಕರಣ ಮೈಸೂ ರಲ್ಲಿ ನಡೆದಿದ್ದು, ಮೈಸೂರಲ್ಲಿ ತೆರೆಕಂಡು ಮೈಸೂರಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಮಹಿಳೆಯರು ಕುಟುಂಬ ಸಮೇತ ಬಂದು ಚಿತ್ರವನ್ನು ವೀಕ್ಷಿಸುತ್ತಿ ದ್ದಾರೆ. ಕೆಲ ಸಿನಿಮಾ ವಿಶ್ಲೇಷಕರು ಚಿತ್ರದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ, ಅದ್ಧೂರಿ ಜೊತೆ ಚಿತ್ರವು ಉತ್ತಮ ಸಂದೇಶದಿಂದ ಕೂಡಿರುವುದರಿಂದ ಬೇರೆ ಭಾಷೆ ಅವರಿಗೆ ಹಕ್ಕು ನೀಡಬೇಡಿ, ನೀವೇ ಬೇರೆ ಭಾಷೆ ಗಳಿಗೂ ಡಬ್ ಮಾಡಿ ಎಂದು ಸಲಹೆ ನೀಡುತ್ತಿದ್ದಾರೆ. ಸದ್ಯದಲ್ಲಿಯೇ ಹಿಂದಿ, ತಮಿಳು, ತೆಲುಗು ಸೇರಿದಂತೆ ವಿವಿಧ ಭಾಷೆ ಗಳಲ್ಲಿ ಡಬ್ ಆಗಲಿದೆ ಎಂದು ತಿಳಿಸಿದರು.

ಚಿತ್ರ ನಿರ್ಮಾಪಕ ಚೇತನ್ ರಮೇಶ್ ಮಾತನಾಡಿ, ಡಾ.ರಾಜ್‌ಕುಮಾರ್ ಅವರು ಹೇಳಿರುವಂತೆ ಅಭಿಮಾನಿಗಳು ನಿಜವಾಗಿಯೂ ದೇವರು. ನಮ್ಮ ಚಿತ್ರವನ್ನು ಅಭಿಮಾನಿಗಳು ಗೆಲ್ಲಿಸಿದ್ದಾರೆ. ಭಗೀರಥ ಚಿತ್ರ ಬಿಡುಗಡೆಯಾದ ಸಂದರ್ಭದಲ್ಲಿ 32ಕ್ಕೂ ಹೆಚ್ಚು ಚಿತ್ರಗಳು ಬಿಡುಗಡೆಯಾ ದವು. ಭಗೀರಥ ತನ್ನ ಓಟವನ್ನು ಮುಂದು ವರೆಸಿ 25ನೇ ದಿನಕ್ಕೆ ತಲುಪಿದ್ದಾನೆ ಎಂದರು. ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ರಾಮ್ ಜನಾರ್ದನ್, ನಿರ್ಮಾಪಕ ಬಿ.ಭೈರಪ್ಪ ಮತ್ತಿತರರು ಉಪಸ್ಥಿತರಿದ್ದರು.


ಫೆ.27ರಿಂದ ವಿಧಾನಸೌಧದ ಆವರಣದಲ್ಲಿ ನಾಲ್ಕು ದಿನಗಳ ಪುಸ್ತಕ ಮೇಳ



ಬೆಂಗಳೂರು, ಫೆ.24– ಇತಿಹಾಸದಲ್ಲಿ ಮೊದಲ ಬಾರಿಗೆ ವಿಧಾನಸೌಧದ ಆವರಣದಲ್ಲಿ 4 ದಿನಗಳ ಪುಸ್ತಕ ಮೇಳ ನಡೆಯುತ್ತಿದೆ ಎಂದು ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ತಿಳಿಸಿದರು. ಪುಸ್ತಕಮೇಳ ಕುರಿತು ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.27ರಿಂದ ಮಾ.2 ರವರೆಗೆ ವಿಧಾನಸೌಧದಲ್ಲಿ ಪುಸ್ತಕಮೇಳ ನಡೆಯಲಿದೆ. ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿದೆ. ಮಾ.2 ರಂದು ಸಾಧುಕೋಕಿಲ ನೇತೃತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಕವಿಗೋಷ್ಠಿಗಳು ನಡೆಯಲಿವೆ ಎಂದರು.

ಲೇಖಕರು ಪುಸ್ತಕ ಬಿಡುಗಡೆ ಮಾಡುತ್ತಾರೆ. ಸರ್ಕಾರದ ಎಲ್ಲಾ ಭಾಷಾ ಅಕಾಡೆಮಿಗಳಿಗೆ ಒಂದೊಂದು ಸ್ಟಾಲ್ ಮೀಸಲು ಕೊಡುತ್ತಿದ್ದೇವೆ. ಸಾರ್ವಜನಿಕರಿಗೆ ಮುಕ್ತ ಅವಕಾಶ ಇರಲಿದೆ. 15 ವಿಷಯಗಳಲ್ಲಿ ಸಂವಾದ ಕಾರ್ಯಕ್ರಮ ಇರಲಿದೆ. ನಿತ್ಯ 4 ವಿಷಯಗಳ ಮೇಲೆ ಸಂವಾದಗಳು ನಡೆಯಲಿವೆ. ಸಂವಿಧಾನ, ಕ್ರೀಡೆ, ಕನ್ನಡ ಸಾಹಿತ್ಯ, ಮಕ್ಕಳ ಸಾಹಿತ್ಯ, ಚಲನಚಿತ್ರ ಸೇರಿ ಹಲವು ವಿಷಯಗಳ ಬಗ್ಗೆ ಸಂವಾದ ನಡೆಯಲಿದೆ. ವಿವಿಧ ಶಾಲೆಗಳಿಂದ ಬರುವ ಮಕ್ಕಳಿಗೆ ಅಸೆಂಬ್ಲಿ ಹಾಲ್ ನೋಡಲು ಅವಕಾಶ ಕೊಡುತ್ತಿದ್ದೇವೆ. ಶಾಸಕರ ಕ್ಷೇತ್ರಗಳ ಹಾಗೂ ಶಾಲಾ ಗ್ರಂಥಾಲಯಗಳಿಗೆ ಬುಕ್ ಖರೀದಿಗೆ 2 ಲಕ್ಷ ರೂ. ಹಣ ಕೊಡಲಾಗುತ್ತದೆ ಎಂದು ಹೇಳಿದರು. 5 ಜನರಿಗೆ ಪ್ರತಿಭಾ ಪುರಸ್ಕಾರ ನೀಡುತ್ತೇವೆ. 5 ಜನರ ಆಯ್ಕೆಗೆ ಸಮಿತಿ ಮಾಡಲಿದೆ. ಮಾ.2 ರವರೆಗೆ ಮಾತ್ರ ಸಾರ್ವಜನಿಕರಿಗೆ ಅವಕಾಶ ನೀಡಲಾಗುವುದು. ಮಾ.3 ರಂದು ಶಾಸಕರಿಗೆ ಪುಸ್ತಕ ಮೇಳ ಇರಲಿದೆ. ಪುಸ್ತಕ ಮೇಳಕ್ಕೆ ರಾಜ್ಯಪಾಲರಿಗೂ ಆಹ್ವಾನ ನೀಡಿದ್ದೇವೆ ಎಂದು ಮಾಹಿತಿ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.02.2025 ಮಂಗಳವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಹಸಿರಂಬುವಿನ ಗಾಯಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಮಹಾಶಿವರಾತ್ರಿ ಕಾರ್ಯಕ್ರಮಗಳು, ಬೆಳಗ್ಗೆ 9ಕ್ಕೆ ಶ್ರೀ ಚಕ್ರಪೂಜೆ, 11ಕ್ಕೆ ಗಿರಿಜಾ ಕಲ್ಯಾಣ, ಸಂಜೆ 6ಕ್ಕೆ ವಯೋಲಿನ್‌ನಲ್ಲಿ 10 ದೇವಿ ಭಜನೆಗಳ ವಿಡಿಯೋ ಆಲ್ಬಂ ಬಿಡುಗಡೆ, ಶ್ರೀ ಸ್ವಾಮೀಜಿಯವರ ಭಜನೆಗಳ ವಯೋಲಿನ್ ವಾದನ – 9 ವರ್ಷದ ಜಿತಿನ್ ಗುಡಿಪುಡಿ ಮತ್ತು ಜೆಸ್ವಿನ್ ಗುಡಿಪುಡಿ ಅವಳಿ ಸೋದರರಿಂದ, ಸಂಜೆ 6.30ಕ್ಕೆ ಶ್ರೀ ವೆಂಕಟಮಖಿನ್ ಸಂಸ್ಮರಣೆ ಮತ್ತು ತ್ಯಾಗರಾಜ ಸ್ವಾಮಿ ಆರಾಧನಾ– ಹಲವು ಸಂಗೀತಗಾರರಿಂದ ತ್ಯಾಗರಾಜ ಪಂಚರತ್ನ ಕೀರ್ತನೆಗಳ ಹಾಡುಗಾರಿಕೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ.

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು:** 'ಕನ್ನಡವೆಂದರೆ ಬರಿ ನುಡಿಯಲ್ಲ ಅದಕ್ಕಿದೆ ವಿಜ್ಞಾನದ ಸ್ಪರ್ಶ' ಕುರಿತು ಎರಡು ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾಸಂಸ್ಥೆ, ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಸುಯೋಗ್ ಆಸ್ಪತ್ರೆ :** ಮಧುಮೇಹ ಉಚಿತ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಮಹಿಳೆಯರ ಆರೋಗ್ಯ ಮತ್ತು ನೈರ್ಮಲ್ಯ ಕುರಿತು ಕಾರ್ಯಾಗಾರ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ದಾವಣಗೆರೆ ವಿವಿ ವಿಶ್ರಾಂತ ಕುಲಪತಿ ಡಾ.ಎಸ್.ಇಂಧುಮತಿ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ, ಡಾ.ಸಿ.ಶರತ್‌ಕುಮಾರ್, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ದಲಿತ ಸಾಹಿತ್ಯ ಪರಿಷತ್, ಜಿಲ್ಲಾ ಘಟಕ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ :** ಡಾ. ಡಿ. ರವಿಕುಮಾರ್ ಇಂದ್ವಾಡಿ ಅವರ ದೇವರಾಜ ಇಂಗಳೆ, ಸೋಸಲೆ ಸಿದ್ದಪ್ಪ ಡಿ. ಗೋವಿಂದದಾಸ್ : ಬದುಕು ಬರಹ ಹಾಗೂ ಕಾರುಣ್ಯ ಬಿತ್ತನೆ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ, ಉದ್ಘಾಟನೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಕೃತಿಗಳ ಲೋಕಾರ್ಪಣೆ : ಸಂಸ್ಕೃತಿ ಚಿಂತಕ ಪ್ರೊ. ರೆಹಮತ್ ತರೀಕೆರೆ, ಕೃತಿ ಕುರಿತು : ಪ್ರಾಧ್ಯಾಪಕರಾದ ಡಾ. ತ್ರಿವೇಣಿ, ಅಧ್ಯಕ್ಷತೆ : ಮೈಸೂರು ವಿವಿ ಡೀನರು ಕಲಾನಿಕಾಯ ಪ್ರೊ. ಎಂ.ಎಸ್. ಶೇಖರ್, ಉಪಸ್ಥಿತರು : ಕವಿ ಪ್ರೊ. ಮಹಾದೇವ ಶಂಕನಪುರ, ಡಾ. ಚಂದ್ರಗುಪ್ತ, ಯು.ಎಸ್. ಮಹೇಶ್, ಡಾ. ಡಿ. ರವಿಕುಮಾರ್ ಇಂದ್ವಾಡಿ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಸ್ವಾಮಿ ವಿವೇಕಾನಂದ ಅಧ್ಯಯನ ಪೀಠ:** ಯುವ ಜನತೆಗೆ ಸ್ವಾಮಿ ವಿವೇಕಾನಂದರ ಸಂದೇಶ: ವಿಶೇಷ ಉಪನ್ಯಾಸ ಕಾರ್ಯಕ್ರಮ, ಉಪನ್ಯಾಸಕಾರರು: ಅಖಿಲ ಭಾರತೀಯ ಸಂಘಟನಾ ಮಂತ್ರಿ, ಭಾರತೀಯ ಶಿಕ್ಷಣ ಮಂಡಲ ಬಿ.ಆರ್. ಶಂಕರಾನಂದಜೀ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ

■ **ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ, ಸಂಗೀತ ವಿವಿ :** ಚಕೋರ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಲ್.ಎನ್. ಮುಕುಂದರಾವ್, ಉದ್ಘಾಟನೆ : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ ಬೆಟ್ಟಕೋಟೆ, ಪ್ರಾಧ್ಯಾಪಕ ಪ್ರೊ. ಪಿ. ಬೆಟ್ಟೇಗೌಡ ಅವರಿಂದ ಕುವೆಂಪು ನಾಟಕಗಳು : ರಂಗ ಪ್ರಯೋಗ ಕುರಿತು ಉಪನ್ಯಾಸ, ಉಪಸ್ಥಿತರು : ಕುಲಸಚಿವರಾದ ಎನ್.ಕರಿಯಪ್ಪ, ಶ್ರೀಮತಿ ಕೆ.ಎಸ್. ರೇಖಾ, ಪ್ರೊ. ಎಂ.ಜಿ. ಮಂಜುನಾಥ್, ಪ್ರಾಸ್ತಾವನೆ : ಅಕಾಡೆಮಿ ಸಂಚಾಲಕ ಪ್ರೊ. ಎಸ್. ಚಂದ್ರಕಿರಣ್ ಕುಳವಾಡಿ, ಸ್ಥಳ: ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಸಭಾಂಗಣ, ಬೆಳಗ್ಗೆ 11ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಸಂದರ್ಶಕ ಪ್ರಾಧ್ಯಾಪಕ ಪ್ರೊ. ರಹಮತ್ ತರೀಕೆರೆ ಅವರಿಂದ ವರ್ತಮಾನಕ್ಕೆ ಬೇಕಾದ ಅಂಬೇಡ್ಕರ್ ಮತ್ತು ಕುವೆಂಪು ಕುರಿತು ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ಪುಟ್ಟರಾಜ, ಉಪಸ್ಥಿತರು : ಹಿರಿಯ ಪ್ರಾಧ್ಯಾಪಕ ಡಾ. ಜೆ. ಸೋಮಶೇಖರ್, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮಧ್ಯಾಹ್ನ 12ಕ್ಕೆ.

■ **ಚಾರ್ವಾಕ, ದೇವರತ್ನ ಫೌಂಡೇಶನ್ :** ಸಂವಿಧಾನ ಉತ್ಸವ, 75ನೇ ವರ್ಷಗಳ ವಜ್ರ ಮಹೋತ್ಸವದ ಸಮಾರೋಪ ಸಮಾರಂಭ, ಗಿರೀಶ್ ಮಾಚಳ್ಳಿಯವರ ರಚನೆ ಮತ್ತು ನಿರ್ದೇಶನದ ಮನುಸ್ಮೃತಿ V/s ಭಾರತ ಸಂವಿಧಾನ ನಾಟಕ ಪ್ರದರ್ಶನ, ಉದ್ಘಾಟನೆ : ಮಾಜಿ ಸಚಿವ ಹೆಚ್. ಆಂಜನೇಯ, ಅಧ್ಯಕ್ಷತೆ: ಮಾಜಿ ಮೇಯರ್ ನಾರಾಯಣ, ಮುಖ್ಯ ಅತಿಥಿಗಳು : ಮುಖ್ಯ ಮಂತ್ರಿಗಳ ವಿಶೇಷ ಅಧಿಕಾರಿ ಆರ್. ಮಹದೇವ, ಪತ್ರಕರ್ತ ಸ್ವಾಮಿ ಆನಂದ, ವಕೀಲ ಶಿವಪ್ರಸಾದ್ ಎಂ.ಸಿ. ಹುಂಡಿ, ಚೆಲುವಾಂಬ ಆಸ್ಪತ್ರೆ ಆರ್‌ಎಂಓ ಡಾ. ಶಿವರಾಮಕೃಷ್ಣ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 4ಕ್ಕೆ.

■ **ಸೇಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು :** ಜೋ ಫೆಸ್ಟ್–2025 ಸಮಾರೋಪ ಸಮಾರಂಭ, ಅಧ್ಯಕ್ಷತೆ : ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಟರ್ ಡಾ.ಬರ್ನಾರ್ಡ್ ಮೊರಾಸ್, ಉಪಸ್ಥಿತರು : ರೆ. ಆಲ್ಫರೆಡ್ ಜಾನ್ ಮೆಂಡೋನ್ಕ, ರೆ. ಎಡ್ವರ್ಡ್ ವಿಲಿಯಂ ಸಾಲ್ಡಾನಾ, ರೆ. ಎ. ನವೀನ್ ಕುಮಾರ್, ಶಿಕ್ಷಣ ತಜ್ಞ ಎ.ಹೆಚ್. ಸಾಗರ್, ಹಿನ್ನೆಲೆ ಗಾಯಕಿ ಐಶ್ವರ್ಯ ರಂಗರಾಜನ್, ಸಿಇಓ ಸೆಬಿ ಮಾವೆಲಿ, ಸ್ಥಳ: ಸೇಂಟ್ ಜೋಸೆಫ್ ಸ್ಕೂಲ್ ಮೈದಾನ, ಜಯಲಕ್ಷ್ಮಿಪುರಂ, ಸಂಜೆ 6ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು:** ತ್ರಿಮೂರ್ತಿ ಶಿವಜಯಂತಿ ಮಹೋತ್ಸವದ ಪ್ರಯುಕ್ತ ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ, ಸಂಜೆ 6.15 ರಿಂದ ಗಾಯತ್ರಿಪುರಂ ವೀಣಾ ಅವರಿಂದ ಪರಮಾತ್ಮ ಪ್ರೀತಿ ಕುರಿತು ಚಿಂತನ ಕಾರ್ಯಕ್ರಮ, ಸಂಜೆ 6.45 ರಿಂದ ಪ್ರೇರಣಾ ಆಸ್ಪತ್ರೆ ನಿರ್ದೇಶಕ ಡಾ. ಅಭಿಜಿತ್ ಹೆಚ್.ಆರ್. ಅವರಿಂದ ಉಪನ್ಯಾಸ, ವಿಷಯ: ಆಧ್ಯಾತ್ಮ ಮತ್ತು ಮಾನಸಿಕ ಆರೋಗ್ಯ; ಸಂಜೆ 7.45 ರಿಂದ ಡಾ.ಶಿಲ್ಪಾ ಹೆಗ್ಡೆ ಮತ್ತು ತಂಡದಿಂದ ಸುಗಮ ಸಂಗೀತ, ಪರಮೇಶ್ವರ ಹೆಗ್ಡೆ–ತಬಲಾ; ಸ್ಥಳ: ಭಾರತೀಯ ವಿದ್ಯಾಭವನದ ಮುಂಭಾಗದ ನಿವೇಶನ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎಸ್. ಸ್ನೇಹಾ, ಎಂ.ಎ. ಶೋಭಾ, ವ್ಯಾಖ್ಯಾನ –ಡಾ. ಜಿ.ಆರ್.ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.05 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ: ಪ್ರಾಯೋಜಕರು–Indian Cancer Society, Karnataka Chapter, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಗೀತಾ. ವೈಪುಟ್ಟಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್. ಎಂ.ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ – ಆಕಾಶವಾಣಿ ಮೈಸೂರು ಕೇಂದ್ರದ 90ನೇ ವರ್ಷಾಚರಣೆ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಆಯೋಜಿಸಲಾಗಿದ್ದ ಜಾನಪದ ಸಂಭ್ರಮದಲ್ಲಿ ಡಾ. ಕೃಷ್ಣಮೂರ್ತಿ ಹನೂರು ಅವರು ಮಾಡಿದ್ದ ಭಾಷಣದ ಆಯ್ದ ಭಾಗಗಳು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–Indian Cancer Society, Karnataka Chapter, 1.25 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಚಿಂತನಪಲ್ಲಿ ರಾಮಚಂದ್ರರಾವ್– ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಶಿವರಾತ್ರಿ ಮಹಾತ್ಮೆ, ಪ್ರಸ್ತುತಿ: ವಿದ್ವಾನ್. ಭದ್ರಗಿರಿ ಅಚ್ಯುತದಾಸರು, 5.00 ಅಪೋಲೋ–ಬಿಜಿಎಸ್ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ ಪ್ರಸಾರವಾಗಲಿದೆ. ಈ ಕಾರ್ಯಕ್ರಮದಲ್ಲಿ ಜೀರ್ಣಾಂಗ ವ್ಯೂಹದ ಕ್ಯಾನ್ಸರ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಮೆಡಿಕಲ್ ಆಂಕಾಲಜಿಸ್ಟ್ ಡಾ. ನವೀನ್ ಜಯರಾಂ ಅನ್ವೇಕರ್, ಪ್ರಾಯೋಜಕರು : ಅಪೋಲೊ ಬಿಜಿಎಸ್ ಆಸ್ಪತ್ರೆ, ಕುವೆಂಪುನಗರ, ಮೈಸೂರು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಾವಯವ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ –ಮೈಸೂರು ತಾಲೂಕು ಕೂಡನಹಳ್ಳಿಯ ಹರೀಶ್ ಆಚಾರ್ಯ ಮತ್ತು ಶಿಂಡೇನಹಳ್ಳಿಯ ಜಿ. ಕೆ. ನಟೇಶ್, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಉಸ್ತಾದ್ ಬಿಸ್ಮಿಲ್ಲಾ ಖಾನ್–ಶಹನಾಯ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಟಿ.ಎನ್.ಅಶೋಕ್–ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ



ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 19ನೇ ಕಂತನ್ನು ಪ್ರಧಾನಿ ಮೋದಿ ಸೋಮವಾರ ಬಿಡುಗಡೆ ಮಾಡಿದರು.

ಪಿಎಂ ಕಿಸಾನ್ ಸಮ್ಮಾನ್ ಕಂತು ಬಿಡುಗಡೆ; 9.8 ಕೋಟಿ ರೈತರ ಖಾತೆಗಳಿಗೆ 22,000 ಕೋಟಿ ವರ್ಗಾವಣೆ

ಭಾಗಲ್ಪುರ: ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 19ನೇ ಕಂತನ್ನು ಸೋಮವಾರ ಬಿಡುಗಡೆ ಮಾಡಿದ್ದು, ದೇಶಾದ್ಯಂತ 9.8 ಕೋಟಿ ರೈತರ ಬ್ಯಾಂಕ್ ಖಾತೆಗಳಿಗೆ 22,000 ಕೋಟಿ ಹೆಚ್ಚು ಹಣ ವರ್ಗಾವಣೆಯಾಗಿದೆ.

ಇಂದು ಬಿಹಾರದಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದ ಪ್ರಧಾನಿ ಮೋದಿ, ಪಿಎಂ ಕಿಸಾನ್ ಸಮ್ಮಾನ್ ಕಂತು ಸಹ ಬಿಡುಗಡೆ ಮಾಡಿದರು. ಈ ವೇಳೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸಹ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ, ಭಾರತದ 'ಅನ್ನದಾತರು' (ರೈತರು) ಬಗ್ಗೆ ಸರ್ಕಾರ ಹೆಮ್ಮೆಪಡುತ್ತದೆ ಮತ್ತು ಅವರ ಜೀವನವನ್ನು ಸುಧಾರಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದರು. ಪಿಎಂ ಕಿಸಾನ್ ಯೋಜನೆಯಡಿ ಅರ್ಹ ರೈತರು ಪ್ರತಿ 4 ತಿಂಗಳಿಗೊಮ್ಮೆ 2,000 ರೂ.ಗಳನ್ನು ಪಡೆಯುತ್ತಾರೆ. ಅಂದರೆ ವರ್ಷಕ್ಕೆ 6,000 ರೂ. ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗುವ ಹಣವನ್ನು ಪ್ರತಿ ವರ್ಷ 3 ಕಂತುಗಳಲ್ಲಿ ನೀಡಲಾಗುತ್ತದೆ.

ಅನ್ನಭಾಗ್ಯ ಯೋಜನೆ: ಫೆಬ್ರವರಿ–ಮಾರ್ಚ್ ತಿಂಗಳ ಅಕ್ಕಿ ಏಕಕಾಲದಲ್ಲಿ ವಿತರಣೆ



ಮುನಿಯಪ್ಪ

ಕೋಲಾರ: ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಅನ್ನಭಾಗ್ಯ ಯೋಜನೆಯಡಿ ಅಕ್ಕಿಯನ್ನು ಫಲಾನುಭವಿಗಳಿಗೆ ಒಟ್ಟಿಗೆ ವಿತರಿಸಲಾಗುವುದು. ಈ ನಿಟ್ಟಿನಲ್ಲಿ ವಿತರಕರಿಗೆ ಈಗಾಗಲೇ ಸೂಚನೆಗಳನ್ನು ರವಾನಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದ್ದಾರೆ.

ಕೇಂದ್ರ ಸರ್ಕಾರ ರಾಜ್ಯಕ್ಕೆ ಅಕ್ಕಿ ಮಾರಾಟ ಮಾಡಲು ಒಪ್ಪಿಕೊಂಡಿದ. ಆದ್ದರಿಂದ ಕರ್ನಾಟಕವು ಪ್ರತಿ ಕೆಜಿಗೆ 22.5 ರೂ. ಪಾವತಿಸುತ್ತದೆ, ಸಾಗಣೆ ವೆಚ್ಚ ಪ್ರತಿ ಕೆಜಿಗೆ 2.50 ರೂ. ಖರ್ಚು ತಗಲುತ್ತದೆ. ಹೀಗಾಗಿ ಪ್ರತಿ ಕೆಜಿ ಅಕ್ಕಿಗೆ ರಾಜ್ಯಕ್ಕೆ 25 ರೂ. ವೆಚ್ಚವಾಗುತ್ತದೆ ಎಂದು ತಿಳಿಸಿ ದ್ದಾರೆ. ಈ ಯೋಜನೆಯಡಿ ಪ್ರತಿ ತಿಂಗಳು 2.10 ಲಕ್ಷ ಟನ್ ಅಕ್ಕಿ ಅಗತ್ಯವಿದೆ ಎಂದು ಮುನಿಯಪ್ಪ ಹೇಳಿದರು, ಇದು 4 ಕೋಟಿ ಜನರಿಗೆ ಪ್ರಯೋಜನ ನೀಡುತ್ತದೆ.

ಐದು ಖಾತರಿ ಯೋಜನೆಗಳು ಮತ್ತು ರಾಜ್ಯಾದ್ಯಂತ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾರ್ಯಗಳು ಜನರಿಗೆ ವರದಾನವಾಗಿ ಬದಲಾಗುತ್ತಿವೆ. ಐದು ಖಾತರಿಗಳಿಗೆ ಸಂಪೂರ್ಣ ಹಣ ಹೋಗುತ್ತಿರುವುದರಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಯಾವುದೇ ಹಣವಿಲ್ಲ ಎಂದು ವಿರೋಧ ಪಕ್ಷಗಳು ಗದ್ದಲ ಎಬ್ಬಿಸುತ್ತಿವೆ ಎಂದು ಆರೋಪಿಸಿದರು. ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ನೋಡಿ ವಿರೋಧ ಪಕ್ಷಗಳು ಈಗ ಮೌನವಾಗಿವೆ. ಅವರು ಯಾವುದೇ ಹೇಳಿಕೆಗಳನ್ನು ನೀಡುತ್ತಿಲ್ಲ ಎಂದರು.

ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳ ಕುರಿತು ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ತುಂಬಾ ಬಲಿಷ್ಠವಾಗಿದೆ ಮತ್ತು ಜನರು ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸುತ್ತಾರೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಶಾಸಕರ ಮಕ್ಕಳ ವಿವಾಹ; ಪ್ರಶಂಸೆ ಸುರಿಮಳೆ

ರಾಯಚೂರು: ತುರ್ವಿಹಾಳದಲ್ಲಿ ಅಮೋಘ ಸಿದ್ದೇಶ್ವರ ಮಠದಿಂದ ಭಾನುವಾರ ನಡೆದ ಸಾಮೂಹಿಕ ವಿವಾಹದಲ್ಲಿ 75 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಮಸ್ಕಿ ಶಾಸಕ ಬಸನಗೌಡ ತುರುವಿಹಾಳ ಪುತ್ರ ಮತ್ತು ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಸಹೋದರರ ಪುತ್ರಿಯ ಮದುವೆ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನೆರವೇರಿತು.

ಮಸ್ಕಿ ಶಾಸಕರ ಪುತ್ರ ಸತೀಶ್, ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಸಹೋದರ ಪುತ್ರಿ ಐಶ್ವರ್ಯ ವಿವಾಹ ತುರುವಿಹಾಳದ ಅಮೋಘ ಸಿದ್ದೇಶ್ವರ ಮಠದಲ್ಲಿ ನಡೆಯಿತು. ಅವರ ಜೊತೆ 75 ಜೋಡಿಗಳು ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಕಾರ್ಯಕ್ರಮದಲ್ಲಿ ಮಾತನಾಡಿದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಐದು ಖಾತರಿ ಯೋಜನೆಗಳ ಲಾಭವನ್ನು ಪಡೆದುಕೊಳ್ಳುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಅಮೋಘ ಸಿದ್ದೇಶ್ವರ ಮಠದ ಸೇವೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಮೋಘ ಸಿದ್ದೇಶ್ವರ ಮಠದ ಮಾದಯ್ಯ ಗುರುವಿನ್, ವಿವಿಧ ಮಠಗಳ ಸ್ವಾಮೀಜಿ, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಸಂಸದ ರಾಜಶೇಖರ್ ಹಿಟ್ನಾಳ್, ಶಾಸಕರಾದ ಬಸನಗೌಡ ದದ್ದಲ್, ಆರ್.ಬಸನಗೌಡ ದದ್ದಲ್, ಆರ್.ಬಸನಗೌಡ ತುರ್ವಿಹಾಳ, ಜಿ.ಹಂಪಯ್ಯ ನಾಯಕ್, ಮಾಜಿ ಸಂಸದರಾದ ಕೆ.ವಿ.ನಾ.ಗೌಡ, ಮಾಜಿ ಸಂಸದರಾದ ಕೆ.ವಿ. ಹಾಗೂ ಕೆ ಶಿವನಗೌಡ ನಾಯಕ್ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ 800 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಬಸವೇಶ್ವರರ ವಿಚಾರಧಾರೆ ಜನರಿಗೆ ತಲುಪಿಸಲು ಸರ್ಕಾರದಿಂದ ಎಲ್ಲಾ ರೀತಿ ನೆರವು

● ಮಠಾಧೀಶರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ● ಬಸವಣ್ಣನವರ ವಿಚಾರಗಳ ಪ್ರಸಾರಕ್ಕೆ ಪ್ರತಿ ಬಜೆಟ್‌ನಲ್ಲಿ ನೆರವಿಗೆ ಮಠಾಧೀಶರ ಮನವಿ



ಬೆಂಗಳೂರಲ್ಲಿ ಸೋಮವಾರ ಅಧಿಕೃತ ನಿವಾಸ ಕಾವೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಬೇಡಿಕೆಗಳ ಮನವಿಪತ್ರ ಸಲ್ಲಿಸಿದ ಲಿಂಗಾಯತ ಸಮುದಾಯದ ಸ್ವಾಮೀಜಿಗಳು.

ಬೆಂಗಳೂರು, ಫೆ. 24(ಕೆಎಂಶಿ)– ಸಾಮಾಜಿಕ ಕ್ರಾಂತಿಕಾರಿ ಬಸವೇಶ್ವರರ ತತ್ವ, ವಚನ ಸಂಸ್ಕೃತಿ, ಶರಣರ ಹೋರಾಟ ಕುರಿತು ಜನಮಾನಸಕ್ಕೆ ತಲುಪಿಸುವ ಸಂಬಂಧ ಸ್ವಾಮೀಜಿಗಳ ಬೇಡಿಕೆಗಳಲ್ಲಿ ಸಾಧ್ಯವಿರುವ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದ್ದಾರೆ.

ಅಧಿಕೃತ ನಿವಾಸ ಕಾವೇರಿಯಲ್ಲಿ ತಮ್ಮನ್ನು ಭೇಟಿ ಮಾಡಿ, ಬೇಡಿಕೆಗಳ ಮನವಿಪತ್ರ ಸಲ್ಲಿಸಿದ ಲಿಂಗಾಯತ ಸಮುದಾಯದ ಸ್ವಾಮೀಜಿಗಳು, ಸಚಿವರು, ಶಾಸಕರು ಹಾಗೂ ಸಮಾಜದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂಬುದಾಗಿ ಘೋಷಿಸಿದ್ದು ಕಾಂಗ್ರೆಸ್ ಸರ್ಕಾರ ಎಂದು ಪ್ರತಿಪಾದಿಸಿದರು.

ತಾವು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಬಸವ ಜಯಂತಿಯಂದೇ ಪ್ರಮಾಣವಚನ ಸ್ವೀಕರಿಸಿದ್ದು, ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಕಡ್ಡಾಯಗೊಳಿಸಿದ್ದು ಕಾಂಗ್ರೆಸ್ ಸರ್ಕಾರ.

ಬಸವಣ್ಣನವರ ವಿಚಾರ ಮತ್ತು ಹೋರಾಟ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಪೂರಕ. ಜಾತಿವಾದಿ ಪಟ್ಟಭದ್ರರಿಗೆ ಬಸವಣ್ಣನವರ ವಿಚಾರಗಳು ಹಿಡಿಸಲ್ಲ, ಪಟ್ಟಭದ್ರರು ಬಹಿರಂಗವಾಗಿ ಬಸವಣ್ಣನ ವಿರೋಧಿಸಲು ಸಾಧ್ಯವಿಲ್ಲ. ಅದಕ್ಕೇ ಆಂತರಿಕವಾಗಿ ವಿರೋಧಿಸುತ್ತಿದ್ದಾರೆ.

ಜಾತಿ ವ್ಯವಸ್ಥೆ ಬಹಳ ಗಟ್ಟಿಯಾಗಿ ಬೇರೂರಿದೆ. ಇದಕ್ಕೆ ಪಟ್ಟಭದ್ರರು ನೀರು, ಗೊಬ್ಬರ ಹಾಕುತ್ತಿದ್ದಾರೆ. ಜಾತ್ಯತೀತ, ಸಮಸಮಾಜ ನಿರ್ಮಾಣ ಮಾಡಲು ಬಸವಣ್ಣನವರ ಹೋರಾಟ ಪೂರಕ. ನಮ್ಮ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ, ಜಾತಿ ಜಡತ್ವ, ಆರ್ಥಿಕ ಜಡತ್ವ ಇರುವ ಸಮಾಜದಲ್ಲಿ ಚಲನೆ ಸಾಧ್ಯವಿಲ್ಲ. ಬಸವಣ್ಣನವರ ವಿಚಾರಗಳೇ ಡಾ.ಅಂಬೇಡ್ಕರ್ ವಿಚಾರಗಳಾಗಿದ್ದು ಇವೆಲ್ಲವೂ ಸಂವಿಧಾನದಲ್ಲಿ ಅಡಕವಾಗಿವೆ. ಗೊರುಚ ಅಧ್ಯಕ್ಷತೆಯಲ್ಲಿ ಅನುಭವ ಮಂಟಪ ಪುನರುಜ್ಜೀವನಕ್ಕೆ ಮುಂದಾಗಿದ್ದು ನಾವು. ಅನುಭವ ಮಂಟಪ ಮೊದಲ ಪ್ರಜಾಪ್ರಭುತ್ವದ ವೇದಿಕೆ. ಯಾರ ಒತ್ತಾಯವೂ ಇಲ್ಲದ ವೇಳೆಯಲ್ಲೇ ನಮ್ಮ ಸರ್ಕಾರ ಅನುಭವ ಮಂಟಪ ಪುನರುಜ್ಜೀವನಕ್ಕೆ ಮುಂದಾಗಿತ್ತು ಎಂದರು.

ಬಸವೇಶ್ವರರ ವಿಚಾರಧಾರೆ ಪ್ರಸಾರ: ಇದಕ್ಕೂ ಮುನ್ನ ಬಾಲ್ಕಿ ಮಠದ ಬಸವಲಿಂಗ ಪಟ್ಟದೇವರು ಸ್ವಾಮೀಜಿ ಮಾತನಾಡಿ, ನಾಡಿನ ಸಾಂಸ್ಕೃತಿಕ ನಾಯಕ, ವಿಶ್ವ ಗುರು ಬಸವೇಶ್ವರರ ವಿಚಾರಧಾರೆಯನ್ನು ಪರಿಣಾಮಕಾರಿಯಾಗಿ ಜನ ಮಾನಸಕ್ಕೆ ತಲುಪಿಸುವಲ್ಲಿ ಮುಂಬರುವ ಬಜೆಟ್‌ನಲ್ಲಿ 100 ಕೋಟಿ ರೂ. ನೀಡಬೇಕಲ್ಲದೆ, ಮುಂದಿನ ನಾಲ್ಕು ವರ್ಷಗಳಲ್ಲೂ ಬಜೆಟ್‌ನಲ್ಲಿ ತಲಾ 100 ಕೋಟಿ ರೂ.ನಂತೆ ಒಟ್ಟು 500 ಕೋಟಿ ರೂ. ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

ಯುವ ಪೀಳಿಗೆಗೆ ಬಸವಣ್ಣನವರನ್ನು ಪರಿಚಯಿಸುವಲ್ಲಿ ಸರ್ಕಾರ ಕೆಲವು ಮಹತ್ವದ ಕ್ರಮ ಕೈಗೊಳ್ಳಬೇಕೆಂಬುದಾಗಿ ಇತ್ತೀಚೆಗೆ ಚಿತ್ರದುರ್ಗದಲ್ಲಿ ನಡೆದ 13ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಬಸವಣ್ಣನ ಬೃಹತ್ ಪ್ರತಿಮೆ ಪ್ರತಿಷ್ಠಾಪಿಸಬೇಕು. ಬೆಂಗಳೂರಿನಲ್ಲಿ 25 ಎಕರೆ ಪ್ರದೇಶದಲ್ಲಿ ಅಕ್ಷರಧಾಮ ಮಾದರಿ ಬೃಹತ್ 'ಶರಣ ದರ್ಶನ' ಕೇಂದ್ರ ಸ್ಥಾಪಿಸಿ, ಅದರಲ್ಲಿ ಉದ್ಯಾನ, ಗ್ರಂಥಾಲಯ, ಅತಿಥಿ ಕೇಂದ್ರ, ದಾಸೋಹ ಭವನ, ಸಭಾಂಗಣ ನಿರ್ಮಿಸಿ ಪ್ರವಾಸಿ ತಾಣವನ್ನಾಗಿಸಬೇಕು. ಎಲ್ಲ ಶರಣರ ಜನ್ಮಸ್ಥಳ, ಐಕ್ಯಸ್ಥಳ ಹಾಗೂ ಇತರ ಸ್ಮಾರಕಗಳ ರಕ್ಷಣೆಗೆ 'ಪ್ರತ್ಯೇಕ ಶರಣ ಸ್ಮಾರಕ ರಕ್ಷಣೆ ಪ್ರಾಧಿಕಾರ' ರಚಿಸಬೇಕು.

ಬಸವಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಅನುಭವ ಮಂಟಪ ಸದ್ಬಳಕೆಗೆ ಅಲ್ಲಿಯೇ 'ವಚನ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ' ಆರಂಭಿಸಬೇಕು. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 'ಬಸವ ಭವನ' ನಿರ್ಮಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬೇಕು.

ವಚನ ಸಾಹಿತ್ಯ ಸಂಗ್ರಹ, ಪ್ರಕಟಣೆ, ಮರು ಪ್ರಕಟಣೆ, ಹಸ್ತಪ್ರತಿಗಳ ದಾಖಲೀಕರಣ, ಶರಣ ಕ್ಷೇತ್ರಗಳ ಅಧ್ಯಯನ ಮತ್ತು ದಾಖಲೀಕರಣ, ವಿಚಾರಸಂಕಿರಣ, ಸಮ್ಮೇಳನಗಳು, ವಚನಾಧಾರಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ಚಟುವಟಿಕೆ ನಡೆಸಲು ಶರಣ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರಕ್ಕಾಗಿಯೇ ಇರುವ ಸಂಸ್ಥೆಗಳಿಗೆ ಅನುದಾನ ಒದಗಿಸಬೇಕು ಎಂದರು.

ಎಂಎಲ್‌ಎ ಕಪ್ ಕ್ರಿಕೆಟ್ ಪಂದ್ಯಾವಳಿ ಮೈಸೂರಿನ ಕೆ.ಆರ್.ಕ್ಷೇತ್ರಕ್ಕೆ ಗೆಲುವು



ಮೈಸೂರಿನಲ್ಲಿ ನಡೆದ ಎಂಎಲ್‌ಎ ಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೆ.ಆರ್.ಕ್ಷೇತ್ರ ಟ್ರೋಫಿ ಪಡೆಯಿತು.

ಮೈಸೂರು, ಫೆ.24(ಬಿಎಲ್‌ಯು)– ನಮ್ಮ ಟಿವಿ ಮೈಸೂರು ಆಯೋಜಿಸಿದ್ದ ಎಂಎಲ್‌ಎ ಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರ ಗೆಲುವು ಸಾಧಿಸಿ ಟ್ರೋಫಿ ಪಡೆದಿದೆ.

ಲೀಗ್ ಹಂತದ ಎರಡು ಪಂದ್ಯಗಳ ನಂತರ ಸೆಮಿಫೈನಲ್‌ನಲ್ಲಿ ಕೆ.ಆರ್.ಕ್ಷೇತ್ರ ತಂಡ ಹಾಗೂ ಹೆಚ್.ಡಿ.ಕೋಟೆ ತಂಡ ಮುಖಾಮುಖಿಯಾದವು.

ಟಾಸ್ ಗೆದ್ದ ಕೆ.ಆರ್.ಕ್ಷೇತ್ರ 6 ಓವರ್‌ಗಳಲ್ಲಿ 67 ರನ್ ಗಳಿಸಿತು. ತರುವಾಯ ಗೆಲುವಿನ ನಗೆ ಬೀರಿ ಫೀಲ್ಡ್ ಗೆ ಇಳಿದ ಹೆಚ್.ಡಿ.ಕೋಟೆ ತಂಡ ಆರು ಓವರ್‌ಗಳಲ್ಲಿ 65 ರನ್ ಗಳಿಸಿ ಔಟಾಯಿತು.

ಫೈನಲ್ ಪ್ರವೇಶಿಸಿದ ಕೆ.ಆರ್.ಕ್ಷೇತ್ರ ಬ್ಯಾಟಿಂಗ್ ಆಯ್ದುಕೊಂಡು ನಂಜನಗೂಡು ತಂಡದ ವಿರುದ್ಧ 6 ಓವರ್‌ಗಳಲ್ಲಿ 80 ರನ್ ಗಳಿಸಿತು. ತರುವಾಯ ಫೀಲ್ಡ್‌ಗೆ ಇಳಿದ ನಂಜನಗೂಡು ತಂಡ ಆರು ಓವರ್‌ಗಳಲ್ಲಿ 58 ರನ್ ಗಳಿಸಲು ಸಾಧ್ಯವಾಯಿತು. ಎಂಎಲ್‌ಎ ಕಪ್ ಜೊತೆಗೆ ಒಂದು ಲಕ್ಷ ರೂಪಾಯಿ ಬಹುಮಾನವನ್ನು ಕೆ.ಆರ್.ಕ್ಷೇತ್ರ ಪಡೆಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಸಾರಥ್ಯದಲ್ಲಿ ನಡೆದ ಕ್ರಿಕೆಟ್‌ನಲ್ಲಿ ಕೆ.ಆರ್.ಕ್ಷೇತ್ರ ನಗುವಿನ ನಗೆ ಬೀರಿತು. ಈ ವೇಳೆ ಶಾಸಕರಾದ ಕೆ. ಹರೀಶ್‌ಗೌಡ ಹಾಗೂ ದರ್ಶನ್ ಧ್ರುವನಾರಾಯಣ್ ಅವರು ಶಾಸಕ ಟಿ.ಎಸ್. ಶ್ರೀವತ್ಸ ಅವರಿಗೆ ಟ್ರೋಫಿ ವಿತರಿಸಿದರು.

ಕೆ.ಆರ್.ಕ್ಷೇತ್ರದಲ್ಲಿ ಶ್ರೀವತ್ಸ ಜೊತೆಗೆ ಹೇಮಂತ್, ಕೀರ್ತಿ, ವಿನಯ, ಪೃಥ್ವಿ, ಚಂದ್ರು, ಮಧುಚಂದ್ರು, ಹರೀಶ್, ಪ್ರೀತಂ, ಶಾಂತಿ, ಅಲೋಕ್, ಗೌರವ್, ಶರಣ್ ಟೀಂನಲ್ಲಿದ್ದರು. ಬಿಜೆಪಿ ಕೆ.ಆರ್.ಕ್ಷೇತ್ರದ ಶಾಸಕ ಗೋಪಾಲ ರಾಜೇ ಅರಸ್, ಜಯರಾಮ್, ಪ್ರದೀಪ್ ಕುಮಾರ್, ಕೆ.ಜೆ.ರಮೇಶ್, ರಾಕೇಶ್ ಗೌಡ, ಜೋಗಿ ಮಂಜು, ಚೇತನ್, ಖಂಡೇಶ್, ಮಧುಸೂದನ್, ಮಾಯಾ ಜಗದೀಶ್, ರಾಜೇಶ್, ಕಿಶೋರ್, ಗಿರೀಶ್ ಗೌಡ, ನಿಶಾಂತ್ ಈ ವೇಳೆ ಹಾಜರಿದ್ದರು.

ಕೃಷಿ, ತೋಟಗಾರಿಕೆ ವಿಶ್ವವಿದ್ಯಾಲಯ ಪುನರ್‌ವಿಂಗಡಣೆಗೆ ಸಮಿತಿ ರಚನೆ



ಚಲುವರಾಯಸ್ವಾಮಿ

ಬೆಂಗಳೂರು, ಫೆ. 24(ಕೆಎಂಶಿ)– ರೈತರ ಅಭ್ಯುದಯವೇ ಕೃಷಿ ವಿಶ್ವವಿದ್ಯಾಲಯಗಳ ಮೂಲ ಆಶಯವಾಗಿದ್ದು, ಇದಕ್ಕೆ ಪೂರಕವಾಗಿ ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸುವಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಇಂದಿಲ್ಲಿ ಸೂಚಿಸಿದ್ದಾರೆ.

ವಿವಿಧ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಹಾಗೂ ಇಲಾಖಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸ್ವಹಿತಾಸಕ್ತಿ ಬದಿಗೊತ್ತಿ ಸಾರ್ವಜನಿಕ ಪ್ರಾಮುಖ್ಯತೆಗೆ ಆದ್ಯತೆ ನೀಡಬೇಕು ಎಂದರು. ವಿದ್ಯಾರ್ಥಿಗಳು, ರೈತರು ಹಾಗೂ ಕೃಷಿ ವಿಶ್ವವಿದ್ಯಾಲಯಗಳ ಹಿತದೃಷ್ಟಿಯಿಂದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಪುನರ್ ವಿಂಗಡಣೆ ಬಗ್ಗೆ ಚಿಂತನೆ ನಡೆಸಿ, ಸಮಿತಿ ರಚಿಸಲಾಗಿದೆ. ಆ ವರದಿ ಆಧರಿಸಿ ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಿ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ.

ಎಲ್ಲಾ ಜಿಲ್ಲೆಗಳು ಮತ್ತು ವಿಶ್ವವಿದ್ಯಾಲಯಗಳ ಹಿತಾಸಕ್ತಿಗೆ ಗಮನಹರಿಸಿ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ. ಕೃಷಿ ವಿಶ್ವವಿದ್ಯಾಲಯಗಳು ಸಂಶೋಧನೆ ಮತ್ತು ಪ್ರಾತ್ಯಕ್ಷಿಕೆಗಳಿಗೆ ಹೆಚ್ಚು ಆದ್ಯತೆ ನೀಡಬೇಕು, ರೈತರನ್ನು ತಾಂತ್ರಿಕವಾಗಿ ಸಶಕ್ತರನ್ನಾಗಿಸಿ ಕೃಷಿ ಕ್ಷೇತ್ರ ಸದೃಢಗೊಳಿಸಬೇಕು, ನಿಶ್ಚಿತ ಲಾಭದಾಯಕ ಉದ್ಯಮವನ್ನಾಗಿ ಪರಿವರ್ತಿಸಬೇಕು.

ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ತಾಂತ್ರಿಕ, ಆಡಳಿತಾತ್ಮಕ ಮತ್ತು ಆರ್ಥಿಕ ಸಮಸ್ಯೆ ಹಾಗೂ ಸವಾಲುಗಳ ಕುರಿತು ಆದ್ಯತೆ ಮೇರೆಗೆ ಪಟ್ಟಿ ಮಾಡಿ ಪ್ರಸ್ತಾವನೆ ಸಿದ್ಧಪಡಿಸಿದರೆ, ಮಾರ್ಚ್ ನಂತರ ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟವರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು. ಮಂಡ್ಯ ವಿ.ಸಿ.ಫಾರಂನಲ್ಲಿ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಸಮಗ್ರ ವಿಶ್ವವಿದ್ಯಾಲಯ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಕಾರ್ಯಾರಂಭ ಮಾಡಲಿದೆ. ಅದಕ್ಕಾಗಿ ಈಗಾಗಲೇ ಎಲ್ಲಾ ತಯಾರಿ ನಡೆಯುತ್ತಿದೆ, ಇದೇ ರೀತಿ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳನ್ನು ಬಲಪಡಿಸುವುದು ಸರ್ಕಾರದ ಉದ್ದೇಶವಾಗಿದೆ. ಅದಕ್ಕಾಗಿ ತಜ್ಞರ ಸಮಿತಿ ರಚಿಸಲಾಗುತ್ತಿದೆ ಎಂದರು.

ಗಣಿಗಾರಿಕೆ ವಿರುದ್ಧ 'ಗಣಿಧಣಿ' ಜನಾರ್ಧನರೆಡ್ಡಿ ಪ್ರತಿಭಟನೆ!



ಕೊಪ್ಪಳ: 'ಗಣಿಧಣಿ' ಎಂದೇ ಖ್ಯಾತಿ ಪಡೆದಿರುವ ಮಾಜಿ ಸಚಿವ ಗಾಲಿ ಜನಾರ್ಧನ ರೆಡ್ಡಿ ಕೊಪ್ಪಳ ಗಣಿಗಾರಿಕೆಗೆ ವಿರುದ್ಧ ಪ್ರತಿಭಟನೆ ನಡೆಸುವ ಮೂಲಕ ಸುದ್ದಿಗೆ ಗ್ರಾಸವಾಗಿದ್ದಾರೆ.

ಕೊಪ್ಪಳ ಪಟ್ಟಣದಲ್ಲಿ ನಡೆಯುತ್ತಿರುವ ಗಣಿಗಾರಿಕೆ ವಿರುದ್ಧ ಜನಾರ್ಧನ ರೆಡ್ಡಿ ಪ್ರತಿಭಟನೆ ನಡೆಸಿದ್ದು, ಅವರ ಜೊತೆ ಸ್ಥಳೀಯ ಕಾಂಗ್ರೆಸ್ ಶಾಸಕ ರಾಘವೇಂದ್ರ ಹಿಟ್ನಾಳ್ ಕೂಡ ಸಾಥ್ ನೀಡಿದ್ದಾರೆ ಎನ್ನಲಾಗಿದೆ. ಕೊಪ್ಪಳದಲ್ಲಿ ಉಕ್ಕು ಕಾರ್ಖಾನೆ ವಿರೋಧಿಸಿ ವ್ಯಾಪಕ ಪ್ರತಿಭಟನೆ ನಡೆಯುತ್ತಿದ್ದು, MSPL-BSPL ಕಾರ್ಖಾನೆ ವಿಸ್ತರಣೆಯ ವಿರೋಧಿಸಿ ಕೊಪ್ಪಳ ಬಂದ್‌ಗೆ ಕರೆ ನೀಡಲಾಗಿತ್ತು. ಈ ಪ್ರತಿಭಟನೆಗೆ ಕೊಪ್ಪಳದ ಮಠಾಧೀಶರು ಬೆಂಬಲ ವ್ಯಕ್ತಪಡಿಸಿದ್ದರು.

ಶಾಸಕ ಗಾಲಿ ಜನಾರ್ಧನ ರೆಡ್ಡಿ ಕೂಡ ಉಕ್ಕು ಕಾರ್ಖಾನೆ ಮತ್ತು ಗಣಿಗಾರಿಕೆ ವಿರೋಧಿಸಿ ಪ್ರತಿಭಟನೆ ನಡೆಸಿದ್ದಾರೆ.

ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ಸ್ಪೀಕರ್‌ಗೆ ಸಲ್ಲಿಕೆ

ಬಜೆಟ್ ಅಧಿವೇಶನದಲ್ಲೇ ಮಂಡನೆ ಸಾಧ್ಯತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯನ್ನು ಮತ್ತಷ್ಟು ಹೆಚ್ಚಿಸುವ ಮತ್ತು 7 ಹೊಸ ಮಹಾನಗರ ಪಾಲಿಕೆ ರಚಿಸುವ ಮೂಲಕ ರಾಜಧಾನಿಯ ಆಡಳಿತಕ್ಕೆ ಹೊಸ ಆಕಾರ ನೀಡುವ ಗ್ರೇಟರ್ ಬೆಂಗಳೂರು ಆಡಳಿತ(ಜಿಬಿಎ) ಮಸೂದೆಯ ಪರಿಶೀಲನಾ ವರದಿಯನ್ನು ಸೋಮವಾರ ವಿಧಾನಸಭೆ ಸ್ಪೀಕರ್ ಯುಟಿ ಖಾದರ್ ಅವರಿಗೆ ಅಧಿಕೃತವಾಗಿ ಸಲ್ಲಿಸಲಾಗಿದ್ದು, ಇದೇ ಬಜೆಟ್ ಅಧಿವೇಶನದಲ್ಲೇ ಮಸೂದೆ ಮಂಡಿಸುವ ಸಾಧ್ಯತೆ ಇದೆ.

ಗ್ರೇಟರ್ ಬೆಂಗಳೂರು ಮಸೂದೆಗೆ ಸಂಬಂಧಿಸಿದ ವರದಿಯನ್ನು ಇಂದು ವಿಧಾನಸೌಧದಲ್ಲಿ ವಿಧಾನಸಭೆಯ ಜಂಟಿ ಪರಿಶೀಲನಾ ಸಮಿತಿಯ ಅಧ್ಯಕ್ಷ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ಸ್ಪೀಕರ್ ಯು.ಟಿ. ಖಾದರ್ ಅವರಿಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ, ಸಮಿತಿ ಸದಸ್ಯರಾದ ಎಸ್.ಟಿ. ಸೋಮಶೇಖರ್, ಎ.ಸಿ. ಶ್ರೀನಿವಾಸ್ ಮತ್ತು ಇತರರು ಹಾಜರಿದ್ದರು. ಪರಿಶೀಲನಾ ಸಮಿತಿಯು ಈಗಾಗಲೇ ನಗರ ಶಾಸಕರ ಅಭಿಪ್ರಾಯಗಳನ್ನು ಸಂಗ್ರಹಿಸಿದೆ. ಇದಲ್ಲದೆ, ಕಳೆದ ವಾರ, ನಾಗರಿಕರಿಂದ ಸಲಹೆಗಳನ್ನು ಸಹ ಸಂಗ್ರಹಿಸಿದೆ.

ಈಗ, ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಸ್ಪೀಕರ್‌ಗೆ ಸಲ್ಲಿಸಿದ ನಂತರ, ಮಾರ್ಚ್ 3 ರಿಂದ ಪ್ರಾರಂಭವಾಗುವ ವಿಧಾನಸಭೆಯ ಬಜೆಟ್ ಅಧಿವೇಶನದಲ್ಲಿ ಪರಿಷ್ಕೃತ ಮಸೂದೆಯನ್ನು ಮಂಡಿಸುವ ಸಾಧ್ಯತೆಯಿದೆ. ಪ್ರತಿಪಕ್ಷಗಳು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರೆ, ಚರ್ಚೆಯ ಸ್ವರೂಪವನ್ನು ಆಧರಿಸಿ ಮುಂದಿನ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ.

ಕಳೆದ ವರ್ಷ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದಾಗ, ವಿರೋಧ ಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾದ ನಂತರ, ಸ್ಪೀಕರ್ ಮಸೂದೆಯ ಸಾಧಕ–ಬಾಧಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸಮಿತಿ ರಚಿಸಿದ್ದರು. ಆಡಳಿತ ಪಕ್ಷದ ಶಾಸಕ ರಿಜ್ವಾನ್ ಅರ್ಷದ್ ಸಮಿತಿಯ ನೇತೃತ್ವ ವಹಿಸಿದ್ದಾರೆ ಮತ್ತು ಈಗಾಗಲೇ ಹಲವಾರು ಸುತ್ತಿನ ಸಭೆಗಳನ್ನು ನಡೆಸಲಾಗಿದೆ ಮತ್ತು ಮಸೂದೆಯಲ್ಲಿ ಕೆಲವು ಶಿಫಾರಸುಗಳನ್ನು ಮಾಡಲಾಗಿದೆ.

ಈ ಶಿಫಾರಸುಗಳಲ್ಲಿ ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಣೆ ಮಾಡುವುದು ಸೇರಿದೆ ಎಂದು ಹೇಳಲಾಗುತ್ತದೆ. ಟೆಕ್ ಕಾರಿಡಾರ್‌ನ ಪ್ರಮುಖ ಕೇಂದ್ರವಾಗಿರುವ ಎಲೆಕ್ಟ್ರಾನಿಕ್ ಸಿಟಿ ಪ್ರದೇಶ, ಕುಂಬಳಗೋಡು ಪಟ್ಟಣ ಪುರಸಭೆ ಮತ್ತು ಪಾಲಿಕೆ ಗಡಿಯ ಪಕ್ಕದಲ್ಲಿರುವ ಕೆಲವು ಭಾಗಗಳನ್ನು ಸೇರಿಸಲಾಗುತ್ತಿದೆ.

ಒಬ್ಬ ಮೇಯರ್ ಮತ್ತು ಆಯುಕ್ತರು ಪ್ರಸ್ತುತ ಬಿಬಿಎಂಪಿ ಆಡಳಿತ ನಡೆಸಲು ಸಾಧ್ಯವಿಲ್ಲ ಎಂದು ಎಲ್ಲಾ ಪಕ್ಷಗಳಿಂದ ಹೇಳಲಾಗಿದೆ. ಇದರ ಆಧಾರದ ಮೇಲೆ, ಕಾಂಗ್ರೆಸ್ ಸರ್ಕಾರ ಸಣ್ಣ ಪಾಲಿಕೆಗಳನ್ನು ರಚಿಸಲು ಮತ್ತು ಆಡಳಿತದಲ್ಲಿ ಪ್ರಮುಖ ಬದಲಾವಣೆ ಮಾಡಲು ಯೋಜಿಸುತ್ತಿದೆ.

ಬಿಬಿಎಂಪಿ ಚುನಾವಣೆಗಳು ಆಗಸ್ಟ್ ಒಳಗೆ ಆಗಬೇಕು. ಜೂನ್ 30ರ ಒಳಗೆ ವಾರ್ಡ್‌ಗಳ ಗಡಿಗಳನ್ನು ನಿರ್ಧಾರ ಮಾಡಬೇಕು ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿ ಸಲ್ಲಿಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ರಿಜ್ವಾನ್ ಹರ್ಷದ್, ಬಿಬಿಎಂಪಿಯನ್ನು 7 ಸಣ್ಣ ಸಣ್ಣ ಪಾಲಿಕೆಯನ್ನಾಗಿ ವಿಭಜನೆ ಮಾಡಲು ಅವಕಾಶ ಕಲ್ಪಿಸಿ ಶಿಫಾರಸ್ಸು ಮಾಡಲಾಗಿದೆ. ಎಷ್ಟು ಪಾಲಿಕೆ ರಚನೆ ಮಾಡಬೇಕು ಎಂಬುದನ್ನು ಸರ್ಕಾರದ ನಿರ್ಧಾರಕ್ಕೆ ಬಿಡಲಾಗಿದೆ ಎಂದರು.

ಸಾಲಬಾಧೆ: ರೈತ ಆತ್ಮಹತ್ಯೆ



ಮೈಸೂರು, ಫೆ.24(ಎಸ್‌ಬಿಡಿ)– ಸಾಲ ತೀರಿಸಲಾಗದೆ ಮನನೊಂದಿದ್ದ ರೈತರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಿಳಿಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮೈಸೂರು ತಾಲೂಕು ಯಾಚೇಗೌಡನಹಳ್ಳಿಯ ರೈತ ದಶರಥ (37) ಆತ್ಮಹತ್ಯೆ ಮಾಡಿಕೊಂಡವರು. ಇವರು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಬೆಳೆ ಸಾಲ ಮಾಡಿದ್ದರು. ಅಲ್ಲದೆ ಕೈಸಾಲ ಹಾಗೂ ಸಹಕಾರ ಸಂಸ್ಥೆಗಳಿಂದಲೂ ಸಾಲ ಪಡೆದಿದ್ದರು. ಆದರೆ ಕೃಷಿಯಿಂದ ಆದಾಯ ಬಾರದ ಕಾರಣದಿಂದ ಸಾಲ ತೀರಿಸಲು ಸಾಧ್ಯವಾಗಿರಲಿಲ್ಲ. ಈ ಬಗ್ಗೆ ಮನೆಯವರ ಬಳಿಯೂ ಹೇಳಿಕೊಂಡಿದ್ದರು. ಆಗ ಮನೆ ಸದಸ್ಯರು ಎಲ್ಲವೂ ಸರಿಹೋಗುತ್ತದೆ ಎಂದು ಅವರನ್ನು ಸಮಾಧಾನಪಡಿಸಿದ್ದರು.

ಆದರೆ ಫೆ.20ರಂದು ಬಿಳಿಕೆರೆ ಆಸ್ಪತ್ರೆಗೆಂದು ಬೈಕ್‌ನಲ್ಲಿ ಹೋಗಿದ್ದ ದಶರಥ ಅವರು ರಾತ್ರಿಯಾದರೂ ವಾಪಸ್ಸಾಗಿರಲಿಲ್ಲ. ಮರುದಿನ ಬಿಳಿಕೆರೆ ಗ್ರಾಮಸ್ಥರೊಬ್ಬರ ಜಮೀನಿನ ಮರದ ಕೆಳಗೆ ದಶರಥ ಅವರು ಸಾವನ್ನಪ್ಪಿರುವ ವಿಷಯವನ್ನು ಪರಿಚಿತರೊಬ್ಬರು ಕರೆ ಮಾಡಿ ತಿಳಿಸಿದ್ದು, ಅವರ ಮನೆಯವರು ಕೂಡಲೇ ಸ್ಥಳಕ್ಕೆ ತೆರಳಿದ್ದಾರೆ. ಅಲ್ಲಿಯೇ ನಿಲ್ಲಿಸಿದ್ದ ಬೈಕ್‌ನಲ್ಲಿ ಕ್ರಿಮಿನಾಶಕದ ಮಾತ್ರೆಗಳು ಪತ್ತೆಯಾಗಿವೆ. ಈ ಸಂಬಂಧ ದಶರಥ ಅವರ ಭಾವ ರಾಕೇಶ್ ನೀಡಿದ ದೂರಿನನ್ವಯ ಬಿಳಿಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇನ್ಮುಂದೆ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ 24 ಗಂಟೆಯೂ ವೈದ್ಯಕೀಯ ಸೇವೆ

ಬೆಂಗಳೂರು, ಫೆ 24– ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವೈದ್ಯಕೀಯ ಸೇವೆಗಳಿಗಾಗಿ ಬೆಂಗಳೂರು ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಲಿಮಿಟೆಡ್ ಜೊತೆ ಮಣಿಪಾಲ್ ಹಾಸ್ಪಿಟಲ್ಸ್ ಪಾಲುದಾರಿಕೆ ಮಾಡಿಕೊಂಡಿದೆ ಆ ಮೂಲಕ ಬಿಎಲ್‌ಆರ್ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಸೇರಿದಂತೆ ಸಿಬ್ಬಂದಿಗಳಿಗೆ 24 ಗಂಟೆ ವೈದ್ಯಕೀಯ ಸೇವೆಗಳನ್ನು ಒದಗಿಸಲು ಮುಂದಾಗಿದೆ. ವಿಮಾನ ನಿಲ್ದಾಣ ವೈದ್ಯಕೀಯ ಕೇಂದ್ರವು ಅತ್ಯಾಧುನಿಕ ಸೌಲಭ್ಯಗಳೊಂದಿಗೆ 24/7 ಕಾರ್ಯನಿರ್ವಹಿಸಲಿವೆ. ಒಪಿಡಿ, ಪ್ರಥಮ ಚಿಕಿತ್ಸೆ, ಎಕ್ಸ್ ರೇ ಸೇರಿದಂತೆ ತ್ವರಿತ ಮತ್ತು ಪರಿಣಾಮಕಾರಿ ವೈದ್ಯಕೀಯ ಸೇವೆಗಳನ್ನು ಒದಗಿಸಲಾಗುತ್ತಿದೆ. ಜೊತೆಗೆ ಹೃದಯ ಸ್ತಂಭನ, ಪಾರ್ಶ್ವವಾಯು ಮತ್ತು ಹಠಾತ್ ವೈದ್ಯಕೀಯ ತೊಂದರೆ ಸೇರಿದಂತೆ ತುರ್ತು ಪರಿಸ್ಥಿತಿಗಳ ಬಗ್ಗೆ ಜಾಗೃತಿ ಕೂಡ ಮೂಡಿಸಲಾಗುತ್ತಿದೆ ಆ ಮೂಲಕ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎಲ್ಲಾ ರೀತಿಯ ವೈದ್ಯಕೀಯ ಸೇವೆಗಳನ್ನು ಒದಗಿಸಲು ಮಣಿಪಾಲ್ ಹಾಸ್ಪಿಟಲ್ಸ್ ಮುಂದಾಗುತ್ತಿದೆ

ನಕ್ಕರೆ ಅದೇ ಸ್ವರ್ಗ

ಫೇಸ್‌ಬುಕ್ ಎಂಬುದು
ಒಲೆ ಮೇಲೆ ಇಟ್ಟ ಹಾಲಿನಂತೆ.
ಆಗಾಗ ಬಂದು ನೋಡದಿದ್ದರೆ
ಸಮಾಧಾನವೇ ಇರುವುದಿಲ್ಲ...!

ಮೈಸೂರು ಮಿತ್ರ

ಮಂಗಳವಾರ, 25 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಸುಳ್ಳಿನಿಂದ ಪಡೆದ ಸ್ಥಾನ, ದರ್ಪದಿಂದ ಸಂಪಾದಿಸಿದ ಗೌರವ,
ಮೋಸದಿಂದ ಗಳಿಸಿದ ಹಣ ಎಂದೂ ಶಾಶ್ವತವಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹತ್ತೋಕೆ ಮೊದಲು ಕುದುರೆ ನೋಡು, ಬಿತ್ತೋಕೆ ಮೊದಲು ಭೂಮಿ ನೋಡು

ನಿಮ್ಮ ಪತ್ರಗಳು

ಪೊಲೀಸರ ಹಿತದೃಷ್ಟಿಯಿಂದ.....!

ಮಾನ್ಯರೆ,

ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯ ಮೇಲೆ ಕಲ್ಲು ತೂರಾಟ ನಡೆಸಿದ ಪ್ರಕರಣದ ಆರೋಪಿಯ ಗಡಿಪಾರಿಗೆ ಸಿದ್ಧತೆ ಮಾಡಿಕೊಂಡಿರುವ ಪೊಲೀಸರು ಸತೀಶ್ ಅಲಿಯಾಸ್ ಪಾಂಡುರಂಗ ಅವರಿಗೆ ನೋಟಿಸ್ ನೀಡಿದ್ದಾರೆ. ಸತೀಶ್ ಹಾಗೂ ಅವರ ಕುಟುಂಬದ ಹಿತದೃಷ್ಟಿಯ ಜೊತೆಗೆ ಸತೀಶ್ ಅವರ ಆಸ್ತಿ–ಪಾಸ್ತಿ ರಕ್ಷಣೆ ಉದ್ದೇಶದಿಂದಲೂ ಗಡಿಪಾರು ಮಾಡಲು ಚಿಂತನೆ ನಡೆಸಲಾಗಿದೆ ಎಂದು ನೋಟೀಸಿನಲ್ಲಿ ತಿಳಿಸಲಾಗಿದೆ.

ಉದಯಗಿರಿ ಗಲಭೆ ಪ್ರಕರಣದ ಆರೋಪಿ ಸತೀಶ್ ಅಲಿಯಾಸ್ ಪಾಂಡುರಂಗನನ್ನು ಗಡಿಪಾರು ಮಾಡುವುದೇ ಸರಿಯಾದ ಕ್ರಮ ಎಂದು ಪೊಲೀಸರಿಗೆ ಮನವರಿಕೆಯಾದರೆ ಹಾಗೆಯೇ ಮಾಡಲಿ.

ಅಂತೆಯೇ ಉದಯಗಿರಿ ಪೊಲೀಸರ ಹಿತದೃಷ್ಟಿಯ ಜೊತೆಗೆ ಪೊಲೀಸ್ ಠಾಣೆಯ ಆಸ್ತಿ–ಪಾಸ್ತಿ ರಕ್ಷಣೆ ಹಾಗೂ ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ಕಾನೂನು–ಸುವ್ಯವಸ್ಥೆ ಹಾಗೂ ಶಾಂತಿ ಸ್ಥಾಪನೆಯ ದೃಷ್ಟಿಯಿಂದ ಈ ಪ್ರಕರಣದ ಸಹಸ್ರ ಆರೋಪಿಗಳು ಹಾಗೂ ಈ ಗಲಭೆಗೆ ಪ್ರಚೋದನೆ ನೀಡಿದ್ದ ಮೌಲ್ವಿಯವರನ್ನೂ ಸಹ ಗಡಿಪಾರು ಮಾಡಲು ಪೊಲೀಸರು ಗಡಿಪಾರಿನ ನೋಟೀಸು ನೀಡಬೇಕಾಗಿದೆ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಬಟ್ಟೆ ಕಳ್ಳರ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರು ನಗರದ ಹೃದಯ ಭಾಗದಲ್ಲಿರುವ ವೀರನಗೆರೆಯಲ್ಲಿ ಬಟ್ಟೆ ಕಳ್ಳತನ ಸಾಮಾನ್ಯವಾಗಿ ಬಿಟ್ಟಿದೆ. ರಾತ್ರಿ ವೇಳೆಯಲ್ಲಿ ಮನೆ ಬಳಿ ಒಣಗಿ ಹಾಕಿರುವ ಬಟ್ಟೆಗಳನ್ನು ಕಳ್ಳತನ ಮಾಡುತ್ತಿದ್ದಾರೆ. ಮನೆ ಹತ್ತಿರವಲ್ಲದೆ ಮನೆಯ ಗೇಟುಗಳನ್ನು ತೆಗೆದು ಮಹಡಿ ಮೇಲೆ ಒಣಗಿ ಹಾಕಿರೋ ಬಟ್ಟೆಗಳನ್ನು ಸಹ ದೋಚುತಿದ್ದಾರೆ. ಇವರು ಹೊಸ ಬಟ್ಟೆಗಳನ್ನು, ಸೀರೆ, ಕಂಬಳಿಗಳನ್ನು ಬಿಡುತ್ತಿಲ್ಲ. ಇದರಿಂದ ಹಗಲಿನಲ್ಲಿಯೇ ಬಟ್ಟೆಗಳನ್ನು ಹೊರಗೆ ಒಣ ಹಾಕಲು ನಿವಾಸಿಗಳು ಭಯ ಪಡುತ್ತಿದ್ದಾರೆ. ಈ ಕಳ್ಳತನ ಮಾಡುತ್ತಿರುವವರ ಈ ನಡತೆಯು ನಿಜಕ್ಕೂ ವಿಪರ್ಯಾಸವೆನಿಸುತ್ತದೆ. ಆದ್ದರಿಂದ ಸಂಬಂಧಪಟ್ಟ ಪೊಲೀಸ್ ಠಾಣೆಯ ಸಿಬ್ಬಂದಿಗಳು ರಾತ್ರಿ ಪಾಳಿಯಲ್ಲಿ ಹೆಚ್ಚು ಗಮನ ಹರಿಸಿ ಕಳ್ಳರನ್ನು ಹಿಡಿಯಬೇಕಿದೆ.

–ಶ್ರೀನಿಧಿ ಎಂ.ಎನ್, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು

ಲೋಕಾಯುಕ್ತ ವರದಿ ನಿರೀಕ್ಷಿತವೇ?

ಮಾನ್ಯರೆ,

ಮುಡಾ ಹಗರಣದಲ್ಲಿ ಸಿಎಂ ಪಾತ್ರವೇನೂ ಇಲ್ಲ. (ಮೈಸೂರು ಮಿತ್ರ,14.2.25. ವರದಿ) ಎಲ್ಲಾ ಅಧಿಕಾರಿಗಳದ್ದೇ ಲೋಪ! 550 ಪುಟಗಳ ಲೋಕಾಯುಕ್ತ ವರದಿಯಲ್ಲಿ ಅಚ್ಚರಿಪಡುವುದೇನೂ ಇಲ್ಲ. ಲೋಕಾಯುಕ್ತ ರಾಜ್ಯ ಸರ್ಕಾರದ ಪರವಾದರೆ, ಸಿಬಿಐ ಕೇಂದ್ರ ಸರ್ಕಾರದ ಪರವೇ? ಎಂದು ಸರ್ಕಾರದ ಪರ ವಾದಿಸಿದ ವಕೀಲರ ವಾದ ಮಂಡನೆಯಲ್ಲಿ ಸತ್ಯ ಅಡಗಿದೆ. ಹಾಗೆಯೇ ಸತ್ಯ ಅಡಗಿಸಲು ಇವು ಕಾರಣವಾಗುತ್ತಿವೆ ಕೂಡ.

ಅಧಿಕಾರಿಗಳು ಏಕೆ ಲೋಪ ಮಾಡಿದರು. ಅಂತಹ ಲೋಪದ ವ್ಯವಹಾರವನ್ನು ಇವರು ಹೇಗೆ ಒಪ್ಪಿಕೊಂಡು ಸುಮ್ಮನಾದರು? ಹಾಗಾದರೆ ಅಕ್ರಮವಾಗಿ ಅಧಿಕಾರಿಗಳು ಮಂಜೂರು ಮಾಡಿದರೆ ಅಂತಹ ಅಕ್ರಮವನ್ನು ಒಂದು ಜವಾಬ್ದಾರಿಯುತ ಉನ್ನತ ಸ್ಥಾನದಲ್ಲಿರುವವರು ಹೇಗೆ ಸ್ವೀಕರಿಸಿದರು?

ಅದು ಅಕ್ರಮವಾಗಿ ಅಧಿಕಾರಿಗಳಿಂದ ಮಂಜೂರು ಆದ ಮೇಲೆ, ಇಲ್ಲ ಅದು ಅಕ್ರಮವಲ್ಲ ಎಂದು ವಾದ ಮಾಡಿದ್ದೇಕೆ? 64 ಕೋಟಿ ಹಣ ನೀಡಿದರೆ ಬಿಟ್ಟು ಕೊಡುವುದಾಗಿ ಹೇಳಿದ್ದೇಕೆ? ಒಂದು ವೇಳೆ ಅದು ಅಧಿಕಾರಿಗಳ ಲೋಪದಿಂದ ಆಗಿದ್ದರೆ ವಿವಾದ ಹೋರಾಟದ ಸ್ವರೂಪ ಪಡೆಯುವ ಮೊದಲೇ, ಪ್ರಕರಣ ಬಹಿರಂಗ ವಾದಾಗಲೇ ನಿವೇಶನಗಳನ್ನು ಹಿಂದಿರುಗಿಸಿ ಔದರ್ಯ ತೋರಬಹುದಿತ್ತಲ್ಲವೇ? ಹಾಗಾದರೆ ನಿವೇಶನ ಪಡೆದವರದ್ದು ಕೂಡ ಲೋಪವಿಲ್ಲವೇ? ಇಂತಹ ಯಕ್ಷ ಪ್ರಶ್ನೆಗಳಿಗೆ ಯಕ್ಷನ ಬಳಿಯೂ ಉತ್ತರವಿಲ್ಲ!! ಒಟ್ಟಿನಲ್ಲಿ 'ಕೊಟ್ಟವ ಕೋಡಂಗಿ, ಈಸ್ಕಂಡವ ಈರಭದ್ರ' ಎನ್ನುವ ನಾಣ್ಣುಡಿ ಈ ಪ್ರಕರಣಕ್ಕೆ ಹೆಚ್ಚು ಸಮಂಜಸವಾದುದು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಮಧ್ಯಾಹ್ನದ ಬಿಸಿಯೂಟದಲ್ಲಿ ವೈವಿಧ್ಯತೆ ಇರಲಿ

ಮಾನ್ಯರೆ,

ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಲಕ್ಷಾಂತರ ಮಕ್ಕಳು ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಆಹಾರ ಸೇವಿಸುತ್ತಿದ್ದಾರೆ. ಇದರಿಂದ ದಾಖಲಾತಿ ಹಾಗೂ ಹಾಜರಾತಿ ಗಣನೀಯವಾಗಿ ಹೆಚ್ಚಾಗುತ್ತಿದೆ. ಮಕ್ಕಳಿಗೆ ಪಾಠದ ಜೊತೆಗೆ ಸತ್ವಯುತ ಆಹಾರ ದೊರೆಯುವುದರಿಂದ ಕಲಿಕೆಯಲ್ಲಿ ಹೆಚ್ಚು ಲವಲವಿಕೆಯಿಂದ ತೊಡಗಿಸಿಕೊಳ್ಳುವಂತಾಗಿದೆ. ಇತ್ತೀಚೆಗಂತೂ ರಾಜ್ಯ ಸರ್ಕಾರ ಮಕ್ಕಳಿಗೆ ಊಟದ ಜೊತೆಗೆ ನಿತ್ಯ ಮೊಟ್ಟೆ ಹಾಗೂ ಮೊಟ್ಟೆ ಸೇವಿಸದ ಮಕ್ಕಳಿಗೆ ಬಾಳೆಹಣ್ಣು ನೀಡಿ ಮಕ್ಕಳ ಓದಿನ ಜೊತೆಗೆ ಆರೋಗ್ಯದ ಕಡೆಗೂ ಗಮನಹರಿಸುತ್ತಿರುವುದು ಸಂತಸದ ಸಂಗತಿ.

ಆದರೆ ಮಧ್ಯಾಹ್ನದ ಬಿಸಿಯೂಟದ ಸಾಂಬಾರಿಗೆ ಸರ್ಕಾರ, ತೊಗರಿಬೇಳೆಯನ್ನು ಮಾತ್ರ ಶಾಲೆಗಳಿಗೆ ಸರಬರಾಜು ಮಾಡುತ್ತಿದೆ. ಆದರೆ ದಿನವೂ ತೊಗರಿಬೇಳೆ ಸಾಂಬಾರು ತಿನ್ನುವುದು ಮಕ್ಕಳಿಗೆ ಬೇಸರ ತರಿಸಬಹುದಲ್ಲವೇ? ಕಡಲೆ ಕಾಳು, ಅವರೆ ಕಾಳು, ಹುರುಳಿ ಕಾಳು ಹಾಗೂ ಇನ್ನಿತರ ಕಾಳುಗಳನ್ನು ಸರಬರಾಜು ಮಾಡಿದರೆ ಮಕ್ಕಳಿಗೆ ಮತ್ತಷ್ಟು ಉತ್ತಮ ಪೌಷ್ಟಿಕಾಂಶ ದೊರೆಯಲು ಸಾಧ್ಯ. ಮಕ್ಕಳು ಇನ್ನಷ್ಟು ಆರೋಗ್ಯದಿಂದಿರಲೂ ನೆರವಾದಂತಾಗುತ್ತದೆ. ಸರ್ಕಾರ ಈ ಬಗ್ಗೆ ಯೋಚಿಸಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಕಾನೂನು ಪಾಲಿಸುವವರ ಗೌರವಿಸಿ

ಮಾನ್ಯರೆ,

ಮೈಸೂರಲ್ಲಿ ಇನ್ನು ಸುಮಾರು ಶೇ. 40 ರಷ್ಟು ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸುತ್ತಿಲ್ಲ. ಸುಮಾರು ಶೇ. 20 ರಷ್ಟು ದ್ವಿಚಕ್ರ ವಾಹನಗಳಲ್ಲಿ ಪ್ರತಿನಿತ್ಯವೂ ಮೂವರು–ನಾಲ್ವರು ಕುಳಿತು ಸಂಚರಿಸುತ್ತಿದ್ದಾರೆ. ಸುಮಾರು ಶೇ.10 ರಷ್ಟು ದ್ವಿಚಕ್ರ ವಾಹನಗಳು ನಂಬರ್ ಪ್ಲೇಟ್ ಇಲ್ಲದೇ ಸಂಚರಿಸುತ್ತಿವೆ. ಸುಮಾರು ಶೇ.5 ರಷ್ಟು ದ್ವಿಚಕ್ರ ವಾಹನಗಳ ಸೈಲೆನ್ಸರ್ ಬಾರೀ ಸದ್ದಿಗೆ ದುರ್ಬಲ ಹೃದಯದವರು ನಿತ್ಯವೂ ಕಂಗಾಲಾಗಿದ್ದಾರೆ. ಇದೆಲ್ಲಕ್ಕೂ ಬ್ರೇಕ್ ಹಾಕಿದರೆ ಕಾನೂನು ಪಾಲಿಸುವವರಿಗೆ ಗೌರವ ಕೊಟ್ಟಂತೆ. ಜೊತೆಗೆ ಅವರನ್ನು ರಕ್ಷಣೆ ಮಾಡಿದಂತೆ. ಅಲ್ಲಲ್ಲಿ ಕ್ಯಾಮರಾಗಳ ಅಳವಡಿಸಿರುವುದರಿಂದ ಹಲವು ದ್ವಿಚಕ್ರ ವಾಹನ ಸವಾರರು ನಂಬರ್ ಪ್ಲೇಟ್‌ಗಳ ತೆಗೆದು ಓಡಿಸುತ್ತಿದ್ದಾರೆ ಎಂಬುದು ಸಂಚಾರಿ ಪೊಲೀಸರಿಗೆ ಇಷ್ಟರಲ್ಲೇ ಗೊತ್ತಾಗಬೇಕಿತ್ತು.

–ರಾಘವೇಂದ್ರ, ವಿಜಯನಗರ, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಮರೆಯಲಾಗದ ಆ ಮಧುರ ದಿನಗಳ...



“ ವಠಾರದಲ್ಲಿ ಕೇವಲ ಒಬ್ಬರ ಮನೆಯಲ್ಲಿ ಮಾತ್ರ ಇದ್ದ ದೂರದರ್ಶನವನ್ನು ನೋಡಲು ಎಲ್ಲ ಕಾತರಿಸುತ್ತಿದ್ದ ಕ್ಷಣಗಳು, ವಾರಕ್ಕೊಮ್ಮೆ ಅದು ಶುಕ್ರವಾರದಂದು ಮಾತ್ರ ಪ್ರಸಾರವಾಗುತ್ತಿದ್ದ ಚಿತ್ರಮಂಜರಿಯ ಹಾಡುಗಳನ್ನು ಕೇಳಿ ಗುನುಗುತ್ತಿದ್ದ ಮಧುರ ಕ್ಷಣಗಳನ್ನು ಎಂದೆಂದಿಗೂ ಮರೆಯಲಾಗದು. ವಾರಕ್ಕೊಮ್ಮೆ ಅದು ಭಾನುವಾರ ಮಾತ್ರ ಚಲನಚಿತ್ರವೊಂದು ಬರುತ್ತಿದ್ದ ಆ ದಿನಗಳಲ್ಲಿ ನೋಡಿರುವ ಚಲನಚಿತ್ರವಾದರೂ ಮತ್ತೊಮ್ಮೆ, ಮಗದೊಮ್ಮೆ ಎಲ್ಲರೊಂದಿಗೆ ಬೆರೆತು ಒಟ್ಟಿಗೆ ಕುಳಿತು ನೋಡುತ್ತಿದ್ದ ಕ್ಷಣಗಳು ಮತ್ತೆ ಬರಲಾರವು.

ಅನುಭವಿಗಳ ಒಡನಾಟ ಕಲ್ಲುಸಕ್ಕರೆಯ ಸಿಹಿ ಅಮೃತಪಾಕದ ತೋಟ. ನಿತ್ಯ ಜೀವನದಲ್ಲಿ ಎದುರಾಗುವ ಅದೆಷ್ಟೋ ಮುಖದಲ್ಲಿ ಮನದಲ್ಲುಳಿಯುತ್ತವೆ ಎದೆಯ ಭಾವನೆಗಳನ್ನು ನಮ್ಮ ಹೃದಯದಲ್ಲಿ ಸುರಿಯುತ್ತಾರೆ ಇನ್ನು ಕೆಲವರು ಕತ್ತಲಲ್ಲಿ ಕಂಡ ಮುಖಗಳಾಗಿ ಕತ್ತಲಲ್ಲಿಯೇ ಕರಗಿ ಹೋಗುತ್ತವೆ. ಆದರೆ ಇಲ್ಲಿ ನನ್ನನ್ನು ಮಾತಿಗೆಳೆದವರು ಆ ನಗುವನ್ನು ಮುಖದ ಮೇಲೆಯೇ ಧಾರಣೆ ಮಾಡಿಕೊಂಡ ಆತ ಸರ್, ಅನ್ಯಥಾ ಭಾವಿಸಬೇಡಿ ನಿಮ್ಮ ತಲೆಯ ಕೂದಲುಗಳು ಬಲಾಢ್ಯ ಸೈನ್ಯದೆದುರು ದುರ್ಬಲ ಸೈನ್ಯ ಧರೆಗೆ ಉರುಳುವಂತೆ ಉದುರುತ್ತಿವೆ ಸರ್! ಇನ್ನೇನು ಕೆಲವೇ ವರ್ಷಗಳಲ್ಲಿ ಬೊಕ್ಕತಲೆಯಾಗುವುದು ಖಚಿತ! ಸೊಂಪಾಗಿದ್ದ ತಲೆಯ ಕೂದಲನ್ನು ನೋಡಿ ಯಾವಾಗಲೂ ಮೆಚ್ಚುತ್ತಿದ್ದ ಆತ್ಮೀಯ ಸ್ನೇಹಜೀವಿ ಈ ಬಾರಿ ಕ್ಷೌರಕ್ಕೆಂದು ಹೋದಾಗ ನುಡಿದ ಈ ಬಗೆಯ ನಿಲುವಿನ ತಗ್ಗಿದ ಮಾತುಗಳನ್ನು ಕೇಳಿ ಕ್ಷಣ ಕಾಲ ದಿಗಿಲು ಮೂಡಿಸಿ ಅಗೋಚರ ಪ್ರಪಂಚದಲ್ಲಿ ಇಳಿದು ಬಂದೆ. ಆ ಬೊಕ್ಕತಲೆಯ ಜಗತ್ತು ತಲ್ಲಣಕ್ಕೆ ದೂಡಿದರೂ ವಾಸ್ತವಕ್ಕೆ ಇಳಿಯದೆ ಇರಲು ಹೇಗೆ ಸಾಧ್ಯ ಅಂತು ನಿಜ ಜಗತ್ತಿಗೆ ಬಂದು ಸುಧಾರಿಸಿಕೊಂಡು ಇದಕ್ಕೆಲ್ಲಾ ಏನು ಕಾರಣ ಎಂದು ಕೇಳಿದಾಗ ಅವರು ಕೊಟ್ಟ ಉತ್ತರಗಳು ನನ್ನ ಬಾಯಿಯನ್ನು ಕಟ್ಟಿ ಹಾಕಿದ್ದು ಮಾತ್ರವಲ್ಲದೆ ಮೆದುಳನ್ನು ಆಲೋಚನೆಯ ಕೋಟೆಯೊಳಗೆ ಸುತ್ತಾಡಿಸಲು ಎಳೆದುಕೊಂಡು ಹೋಯಿತು. ಅಲ್ಲಿ ಮೂಡಿದ ಮಾತುಗಳು ಮುತ್ತುಗಳು ಮೂರ್ತವೆತ್ತಿವೆ.

ಮೊದಲೆಲ್ಲ ವಾರಕ್ಕೊಮ್ಮೆಯಾದರೂ ಮೈತುಂಬಾ ಹರಳೆಣ್ಣೆ ಹಚ್ಚಿ, ಬಿಸಿಲಲ್ಲಿ ಮೈಯೊಡ್ಡಿ, ಸೌದೆ ಒಲೆಯಲ್ಲಿ ಕಾಯಿಸಿದ ಬಿಸಿನೀರಿನಿಂದ ಸೀಗೆಪುಡಿ, ಸುಜ್ಜಿಲಪುಡಿಯನ್ನು ಲೇಪಿಸಿಕೊಂಡು ಸ್ನಾನ ಮಾಡುತ್ತಿದ್ದರು. ಈಗೆಲ್ಲಾ ಎಲ್ಲಿ ಸರ್ ಸೌದೆ ಒಲೆ? ಎಲ್ಲವೂ ವಿದ್ಯುತ್ ಮಯ! ಗೀಝರ್, ಸೋಲಾರ್ ನೀರು ಅಂತ ಬಳಸುತ್ತಾ ಇರ್ತಿರಾ ಕೂದಲು ಹಾಳಾಗದೇ ಇರುತ್ತಾ? ಈ ಮಾತು ಚಿಂತನೆಯ ಒರೆಗೆ ಹಚ್ಚಿತು. ಯಂತ್ರನಾಗರಿಕತೆಯಲ್ಲಿ ಮನುಷ್ಯತ್ವವನ್ನು ಮಾರಾಟ ಮಾಡಿ ಬೇಕಾದ್ದು ಬೇಡದ್ದು ರೂಢಿಸಿಕೊಂಡು, ಮಾನವೀಯತೆಯ ಕುಸುಮವನ್ನು ಮುರುಟಿ ಒಸಕಿ ಹಾಕುತ್ತಿರುವುದು ಒಂದು ಬಗೆಯಾದರೆ ಇನ್ನೊಂದೆಡೆ ದೇಹ ಸೌಂದರ್ಯದ ಮೋಹ, ಇನ್ನೂ ಹೇಳಬೇಕೆಂದರೆ ಅನುಕರಣೀಯವಾದ ಪ್ರತಿಷ್ಠೆಯ ವ್ಯಾಮೋಹ. ಮಾರುಕಟ್ಟೆಯಲ್ಲಿ, ಉತ್ಪನ್ನ ವಸ್ತುಗಳ ಬಗ್ಗೆ ಈ ನೆಲದ ಪರಂಪರೆಯ ದನಿಯನ್ನು ಆಲಿಸದೆ, ಸಮಾಜದ ಒಳಿತನ್ನು ಬಯಸುವ ಜಾಹೀರಾತು ರಾಯಭಾರಿಗಳು ಜನರನ್ನು ಅಡ್ಡದಾರಿಗೆ ಎಳೆಯುತ್ತಿರುವುದು ಮೈನವಿರೇಳಿಸುವಂತೆ ಮಾಡಿದೆ. ಇದು ಕೇವಲ ಶಾಂಪುವಿನ ವಿಚಾರಕ್ಕೆ ಮಾತ್ರವಲ್ಲ ಇನ್ನೂ ಅನೇಕ ವಸ್ತುಗಳ ಮಾಯಾಜಾಲವೂ ಬದುಕನ್ನು ಅರ್ಧ ನುಂಗಿಯೇ ಬಿಡುತ್ತಿದೆ. ಇಲ್ಲಿ ಕ್ಷೌರಿಕ ಮಹಾಶಯನು ಹೇಳಿದ ಶಾಂಪುಗಳನ್ನು ಬಳಸುತ್ತಿದ್ದರೆ ಕೂದಲು ಉದರದೇ ಉಳಿಯುತ್ತಾ?, ಹೇಳಿ! ಎಂಬ ಮಾತು ಜೀವಂತ ಅಕ್ಷಿಗಳಿಗೆ ಜ್ವಲಂತ ಸಾಕ್ಷಿ. ಈ ಬಗೆಯ ಮಾತುಗಳ ಸರಣಿಯೇ ಈ ಹಿಂದೆ ಗತಿ ಹೋದ ಹಿಂದಣ ಹೆಜ್ಜೆಗಳ ಕಡೆಗೆ ಹೊರಳಿತು.

ಹಾಗಾದರೆ ನಾವು ಪ್ರಸ್ತುತ ಏನನ್ನು ಕಳೆದು ಕೊಳ್ಳುಕೊಂಡು ಬಾಳುತ್ತಿದ್ದೇವೆ?

- ಆಧುನಿಕತೆಯ ಸೋಗಿನಲ್ಲಿ ನಮ್ಮನ್ನೇ ನಾವು ಮರೆತು ಕನಿಷ್ಠ ನಮ್ಮಂತೆ ಇತರರು ಎಂಬ ಸೌಜನ್ಯವನ್ನು ಬಿಟ್ಟು ಜಿದ್ದಿಗೆ ಬಿದ್ದವರಂತೆ ಓಡುತ್ತಿರುವ ನಮಗೆ ಹಳೆಯ ನೆನಪುಗಳು, ಮಧುರಕ್ಷಣಗಳು ನೆನಪಾಗಲೇ ಬೇಕು.
- ಒಂದು ಕ್ಷಣ ಆಲೋಚಿಸಿ ನೋಡಿ ಬೇವಿನ ಕಡ್ಡಿಯಲ್ಲಿ ಹಲ್ಲನ್ನು ತಿಕ್ಕಿ ಸ್ವಚ್ಛಗೊಳಿಸುವಾಗ ಅಥವಾ ನಂಜನಗೂಡು ಹಲ್ಲಿನ ಪುಡಿಯನ್ನು ಉಪಯೋಗಿಸಿಕೊಂಡು ಹಲ್ಲನ್ನು ತಿಕ್ಕುವಾಗ ಯಾವುದೇ ಹಲ್ಲುಗಳು ಹಾಳಾಗಿರಲಿಲ್ಲ, ಹಲ್ಲುಹುಳುಕು ಬರುತ್ತಿರಲಿಲ್ಲ. ಆದರೆ ಇಂದು ತರಾವರಿ ಪೇಸ್ಟ್‌ಗಳನ್ನು ಬಳಸಿ ಹಲ್ಲುಗಳನ್ನು ಹಾಳುಮಾಡಿಕೊಂಡಿದ್ದೇವೆ.
- ಸೀಗೆಪುಡಿ, ಸುಜ್ಜಲಪುಡಿಗಳನ್ನು ಬಳಸಿ ಸ್ನಾನಮಾಡುವಾಗ, ಮೈ ಕೈಗಳಿಗೆ ಎಣ್ಣೆ ತಿಕ್ಕಿ ಸ್ನಾನ ಮಾಡುವಾಗ ಸೊಂಪಾಗಿರುತ್ತಿದ್ದ ತಲೆಗೂದಲನ್ನು ಇಂದು ಜಾಹೀರಾತುಗಳ ಕೃಪೆಯಿಂದ ಬೇಕಾದದ್ದು, ಬೇಡವಾದುದ್ದನ್ನೆಲ್ಲ ಬಳಸಿ ತಲೆಕೂದಲಿನೊಂದಿಗೆ ತಲೆಯನ್ನು ಕೆಡಿಸಿಕೊಳ್ಳುತ್ತಿದ್ದೇವೆ.
- ಅಂದು ಅವಿಭಕ್ತ ಕುಟುಂಬಗಳಲ್ಲಿ ಬೆಳೆಯುತ್ತಿದ್ದಾಗ ಇದ್ದ ನೆಮ್ಮದಿ, ಸಂತೋಷ, ಏನಾದರೂ ಸಮಸ್ಯೆ ಬಂದಾಗ ನೀಡುತ್ತಿದ್ದ ಸಾಂತ್ವನದ ನುಡಿಗಳನ್ನು ಕಳೆದುಕೊಂಡು ಇಂದು ವಿಭಕ್ತ ಕುಟುಂಬಗಳಾಗಿ ಬೇರ್ಪಟ್ಟು ಸಣ್ಣ ಪುಟ್ಟ ಸಮಸ್ಯೆಗಳು ಎದುರಾದರೂ ಸಾಕು ಖಿನ್ನತೆಗೆ ಒಳಗಾಗಿ, ಮನಶಾಸ್ತ್ರಜ್ಞರುಗಳ ಬಳಿಗೆ ಸಾಗುವಷ್ಟರ ಮಟ್ಟಿಗೆ ಬಂದು ನಿಂತಿದ್ದೇವೆ.
- ಒಂದು ಸ್ಥಳದಿಂದ ಮತ್ತೊಂದು ಸ್ಥಳಕೆ ಬಸ್ಸಿನಲ್ಲಿ ಸಂಚರಿಸುವಾಗ ಪಕ್ಕ ಕುಳಿತವರ ಬಗ್ಗೆ ಮಾತನಾಡಿಸಿ ಪರಸ್ಪರ ಸ್ನೇಹ ಸಂಪಾದಿಸುತ್ತಿದ್ದ ಸುಮಧುರ ಕ್ಷಣಗಳನ್ನು ಮರೆತು ಬಾಳುತ್ತಿದ್ದೇವೆ. ಈ ವಿಚಾರ ಪ್ರಸ್ತಾಪಿಸುವಾಗ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕನ್ನಡ ಮೌಲ್ವಿ ಪ್ರಬಂಧ ಹಾದುಹೋಗುತ್ತದೆ. ನಿರೂಪಕರು ಮಡಿಕೇರಿಯಿಂದ ತಮ್ಮ ಸ್ವಸ್ಥಾನಕ್ಕೆ ತೆರಳುವಾಗ ಅವರು ಈಗಿನ ಯಾವುದೇ ಆಧುನಿಕ ಧಾಳಿಗಳಿಗೆ ತುತ್ತಾಗದೆ ಇದ್ದದ್ದರಿಂದ ಅಕ್ಕಪಕ್ಕದ ಜೀವಧಾತುಗಳ ಬಗ್ಗೆ ಸಹಜ ಕುತೂಹಲಗೊಂಡು ಮುಸಲ್ಮಾನಾದರೂ ಕೈಯ್ಯಲ್ಲಿ ಹಿಡಿದಿರುವ ಕುಮಾರ ವ್ಯಾಸ ಭಾರತದ ಕಡೆ ದೃಷ್ಟಿ ಹರಿಸಿ ಬಾಂಧವ್ಯ ಬೆಸೆಯುವ ಸಾಮರಸ್ಯದ ಹೊಂಗಿರಣ ರೂಪಿಸುವುದನ್ನು ಓದಿಯೇ ಸವಿಯಬೇಕು.
- ಎಷ್ಟೇ ದೂರವಾದರೂ ಕಾಲ್ನಡಿಯಲ್ಲಿ ಸಂಚಾರ ಮಾಡುತ್ತಿದ್ದುದನ್ನು ಮರೆತು ಕಿ.ಮೀ. ಕೂಡ ನಡೆಯಲಾಗದಷ್ಟರ ಮಟ್ಟಿಗೆ ಬಂದು ನಿಂತಿದ್ದೇವೆ. ಇದರಿಂದಾಗಿಯೇ ಆರೋಗ್ಯ ಕೆಡಿಸಿಕೊಂಡು ಬೇಡದ ಬೊಜ್ಜನ್ನು ಬೆಳೆಸಿಕೊಂಡು ನಂತರ ಅದನ್ನು ಕರಗಿಸುವ ಪ್ರಯತ್ನದಲ್ಲಿ ದಿನದೂಡುತ್ತಿದ್ದೇವೆ.
- ಅಕ್ಕ ಪಕ್ಕದಲ್ಲಿ ಯಾರಿದ್ದಾರೆ ಎಂಬುದನ್ನೇ ಮರೆತು ಬಾಳುತ್ತಾ ಮುಂದೆ ಸಾಗುತ್ತಿದ್ದೇವೆ. ಮಾನವೀಯ ಮೌಲ್ಯಗಳನ್ನೇ ಮರೆತು ಜೀವಂತ ಯಂತ್ರಗಳಾಗಿ ಬದುಕು ನಡೆಸುತ್ತಿದ್ದೇವೆ.
- ರಾಗಿಮುದ್ದೆ ತಿಂದು, ಅಂಬಲಿ ಕುಡಿದು, ಬಾಯಾರಿದಾಗ ಪಾನಕ, ಎಳನೀರು ಕುಡಿಯುತ್ತಿದ್ದಾಗ ಯಾವ ರೋಗವು ಬರುತ್ತಿರಲಿಲ್ಲ. ಈಗ ವಿವಿಧ ಬಗೆಯ ತಂಪುಪಾನೀಯಗಳಿಗೆ ಮೊರೆ ಹೋಗಿ ಕಾಸುಕೊಟ್ಟು ಅನಾರೋಗ್ಯವನ್ನು ಖರೀದಿಸುತ್ತಿದ್ದೇವೆ.
- ನಮ್ಮ ಸಂಸ್ಕೃತಿ ಮರೆತು ಅನ್ಯ ಸಂಸ್ಕೃತಿಗಳಿಗೆ ಮೊರೆ ಹೋಗಿ ಅವರ ಉಡುಗೆ ತೊಡುಗೆಗಳನ್ನು ಧರಿಸಿ, ಅವರ ಆಹಾರವನ್ನು ಚಪ್ಪರಿಸಿ ತಿನ್ನುತ್ತಾ ನಮ್ಮತನವ ಕಳೆದುಕೊಂಡು ಬಾಳುತ್ತಿದ್ದೇವೆ.

ಎತ್ತ ಹೋದವು–ಎಲ್ಲಿ ಮರೆಯಾಗಿ ಹೋದವು ಆ ಮಧುರ ದಿನಗಳು

ಆಧುನಿಕತೆಯ ಭರಾಟೆಯಲ್ಲಿ ಕಳೆದು ಹೋಗುತ್ತಿರುವಾಗ ಮಧುರವಾದ ತಣ್ಣನೆಯ ನೆನಪಿನ ಗಾಳಿಯೊಮ್ಮೆ ಬೀಸಿ ಮೈಮನಗಳನ್ನು ರೋಮಾಂಚನಗೊಳಿಸಿ ಗತಕಾಲದ ಕಡೆಗೆ ಸೆಳೆದುಕೊಂಡು ಹೋಯಿತು.ಸಿನಿಮಾಗಳಲ್ಲಿ ತೋರಿಸುವಂತೆ ಸಮಯದ ಯಂತ್ರ (ಟೈಮ್ ಮಿಷನ್) ಎಂಬುದು ಇರುವುದು ನಿಜವೇ ಆದರೆ ಅದರಲ್ಲೊಮ್ಮೆ ಕುಳಿತು ಕಳೆದು ಹೋದ ನೆನಪುಗಳನ್ನು ಹುಡುಕಿ ಬರಬೇಕೆಂಬ ಆಸೆ ದಟ್ಟವಾಗಿದೆ.

ಜೀವನದಲ್ಲಿ ಒಮ್ಮೆಯಾದರೂ ಪ್ರತಿಯೊಬ್ಬರಿಗೂ ಮೊದಲಿನಂತೆ ಬದುಕಬೇಕೆಂಬ ಆಸೆ ಖಂಡಿತವಾಗಿಯೂ ಬಂದು ಹೋಗಿರುತ್ತದೆ. ವಾಸ್ತವವಾಗಿ ಅದು ಸಾಧ್ಯವಿಲ್ಲವಾದರೂ ಎಂದೂ ಮರೆಯಲಾಗದೆ ನೆನಪಿನ ಬುತ್ತಿಯಲ್ಲಿ ಶಾಶ್ವತವಾಗಿ ನೆಲೆಯೂರಿ ನಿಂತಿರುತ್ತದೆ. ಬಾಲ್ಯದ ಜೀವನ, ಅಳು, ನಗು, ಆಟ–ಒಡೆದಾಟ, ತಿಂದ ತಿನಿಸುಗಳು, ಮಾಡಿಕೊಂಡ ಗಾಯ ಎಲ್ಲವೂ ಈಗ ನೆನಪಿಸಿಕೊಂಡರೆ ಕಣ್ಮುಂದೆ ಮಾಯಾಚಿತ್ರಗಳಂತೆ ಬಂದು ನಿಲ್ಲುವುದು.

ನಿಶ್ಚಿಂತೆಯಿಂದ ಕಾಲು ಚಾಚಿ ಮಲಗಲು ಸಾಧ್ಯವಾಗದಂತಿದ್ದ ಬಾಡಿಗೆ ಮನೆಯಲ್ಲಿ ಹತ್ತು ವರ್ಷಗಳು ವಾಸವಿದ್ದಾಗಲೂ ಸಂಭ್ರಮಕ್ಕೆ, ಸಂತೋಷಕ್ಕೆ ಏನು ಕಡಿಮೆ ಇರಲಿಲ್ಲ ಬಡತನವಿದ್ದರೂ ಅದರೊಳಗೊಂದು ನೆಮ್ಮದಿ ಆವರಿಸಿತ್ತುಅಲ್ಲಿ ಕಳೆದ ದಿನಗಳನ್ನು ಪ್ರಸ್ತುತ ಲಕ್ಷ,ಲಕ್ಷ ಕೊಟ್ಟು ಭೋಗ್ಯಕ್ಕೆ ಮನೆ ಮಾಡಿಕೊಂಡಿದ್ದರೂ ಮನೆ ದೊಡ್ಡದಾಗಿ ಗೋಚರಿಸುತ್ತಿದೆ ವಿನಃ ಸಂಬಂಧಗಳಲ್ಲಿದ್ದ ಪ್ರೀತಿ,ವಿಶ್ವಾಸ ಮನೆಯಷ್ಟೇ ವಿಶಾಲವಾಗಿ ದೂರ ದೂರ ಸಾಗುತ್ತಿದೆ.ಅಂದಿನ ನೆಮ್ಮದಿ,ಸಂತೃಪ್ತ ಬದುಕು ಇಂದಿಗಿಲ್ಲವಾಗಿದೆ.

ಬಡತನದ ಬೇಗೆಯಲ್ಲಿ ಬದುಕ ಸಾಗಿಸಲು ಹೆಣಗುತ್ತಿದ್ದ ದಿನಗಳಲ್ಲಿ ಅನ್ನಕ್ಕೆ ಕಾರದಪುಡಿ, ಎಣ್ಣೆ, ಉಪ್ಪು ಹಾಕಿ ತಿನ್ನುತ್ತಿದ್ದ, ರಾತ್ರಿ ಉಳಿದಿರುವ ಅನ್ನವನ್ನು ಬೆಳಗ್ಗೆ ಮಜ್ಜಿಗೆಯಲ್ಲಿ ಬೆರೆಸಿಕೊಂಡು ತಿನ್ನುವಾಗ ಇರುತ್ತಿದ್ದ ರುಚಿ ಈಗ ಬಿಸಿ, ಬಿಸಿ ಅನ್ನದೊಂದಿಗೆ ಬಗೆ ಬಗೆಯ ಸಾರಿನೊಂದಿಗೆ ತುಪ್ಪವನ್ನು ಬೆರೆಸಿಕೊಂಡು ತಿನ್ನುತ್ತಲಿದ್ದರೂ ಹಿಂದೆ ತಿಂದು ಚಪ್ಪರಿಸಿದ್ದ ರುಚಿಗೆ ಸರಿಸಾಟಿಯಾಗಿ ನಿಲ್ಲಲಾಗದು. ಅದರಲ್ಲಿಯೂ ಶನಿವಾರ ಬೆಳಂ ಬೆಳಗ್ಗೆ ತರಗತಿಗೆ ಹೋಗಿ ಬಿಡುವು ಬಿಟ್ಟಾಗ ಶಾಲೆಯ ತಿರುವಿನಲ್ಲಿ ಅಜ್ಜಿಯೊಬ್ಬರು ಕಿತ್ತಳೆ ಹಣ್ಣನ್ನು ಎರಡು ಹೋಳಾಗಿ ಕತ್ತರಿಸಿ ಉಪ್ಪು, ಕಾರವನ್ನು ಹಚ್ಚಿಕೊಡುತ್ತಿದ್ದುದು ಅದನ್ನು ಬಾಯಿ ಚಪ್ಪರಿಸುವಂತೆ ತಿನ್ನುತ್ತಿದ್ದುದ್ದು ಅದು ಕಲ್ಪನೆಗಳಿಗೆ ನಿಲುಕದ ರಸಾನುಭವ.

ವಠಾರದಲ್ಲಿ ಕೇವಲ ಒಬ್ಬರ ಮನೆಯಲ್ಲಿ ಮಾತ್ರ ಇದ್ದ ದೂರದರ್ಶನವನ್ನು ನೋಡಲು ಎಲ್ಲ ಕಾತರಿಸುತ್ತಿದ್ದ ಕ್ಷಣಗಳು, ವಾರಕ್ಕೊಮ್ಮೆ ಅದು ಶುಕ್ರವಾರದಂದು ಮಾತ್ರ ಪ್ರಸಾರವಾಗುತ್ತಿದ್ದ ಚಿತ್ರಮಂಜರಿಯ ಹಾಡುಗಳನ್ನು ಕೇಳಿ ಗುನುಗುತ್ತಿದ್ದ ಮಧುರ ಕ್ಷಣಗಳನ್ನು ಎಂದೆಂದಿಗೂ ಮರೆಯಲಾಗದು. ವಾರಕ್ಕೊಮ್ಮೆ ಅದು ಭಾನುವಾರ ಮಾತ್ರ ಚಲನಚಿತ್ರವೊಂದು ಬರುತ್ತಿದ್ದ ಆ ದಿನಗಳಲ್ಲಿ ನೋಡಿರುವ ಚಲನಚಿತ್ರವಾದರೂ ಮತ್ತೊಮ್ಮೆ, ಮಗದೊಮ್ಮೆ ಎಲ್ಲರೊಂದಿಗೆ ಬೆರೆತು ಒಟ್ಟಿಗೆ ಕುಳಿತು ನೋಡುತ್ತಿದ್ದ ಕ್ಷಣಗಳು ಮತ್ತೆ ಬರಲಾರವು.

ಹಬ್ಬದ ದಿನಗಳಲ್ಲಿ ಹೊಸಬಟ್ಟೆಯನ್ನು ಧರಿಸಿಕೊಂಡು ದೊಡ್ಡವರ ಕಾಲಿಗೆ ಅಡ್ಡಬಿದ್ದು ಆಶೀರ್ವಾದ ಪಡೆದು ಅವರು ಕೊಡುತ್ತಿದ್ದ ರೂಪಾಯಿಗಳನ್ನು ಸಂಗ್ರಹಿಸಿಟ್ಟುಕೊಂಡು ಪಡುತ್ತಿದ್ದ ಸಂಭ್ರಮ ಇಂದು ಸಾವಿರಗಟ್ಟಲೇ ಮನೆಯ ಯಜಮಾನ, ಮಡದಿ ಇಬ್ಬರೂ ಒಟ್ಟಿಗೆ ದುಡಿದರೂ ಆಗಿನ ಸಂತೃಪ್ತಿ ಈಗ ಸಿಗದಿರುವುದು ವಿಪರ್ಯಾಸವೇ ಸರಿ.

ತುಂಬಿದ ಮನೆಯೊಳಗೆ, ಮನೆ ಮುಂದಿಯೆಲ್ಲ ಒಟ್ಟಿಗೆ ಸೇರಿ ಹಬ್ಬ ಮಾಡಿ ಕಳೆಯುತ್ತಿದ್ದ ಕ್ಷಣಗಳು ಸಂಬಂಧಿಕರ ಮದುವೆ ಸಂದರ್ಭಗಳಲ್ಲಿ ಸಿಗುತ್ತಿದ್ದ ಸಂಭ್ರಮ, ಸಡಗರ ಇಂದಿನ ದಿನಗಳಲ್ಲಿ ಜಂಗಮ ವಾಣಿಯ ರಾಕ್ಷಸನ ಕೃಪೆಯಿಂದ ಸಿಗುತ್ತಿಲ್ಲ.

ಏನೇ ಕೆಲಸಗಳಿದ್ದರೂ ಒಂದು ಹೊತ್ತಾದರೂ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದಾಗ ಆಗುತ್ತಿದ್ದ ಸಂತೋಷವನ್ನು ಇಂದಿನ ಒತ್ತಡದ ಜೀವನದಲ್ಲಿ ಪಡೆಯಲಾಗುತ್ತಿಲ್ಲ.

ಒಂದು ರೂಪಾಯಿ ನಾಣ್ಯವನ್ನು ಹಿಡಿದು ದೂರವಾಣಿಯೊಳಗೆ ಹಾಕಿ ಮಾತನಾಡುತ್ತಿದ್ದ ದಿನಗಳ ನೆನಪನ್ನು ಇಂದು ಸಂಚಾರಿ ದೂರವಾಣಿಗಳು (ಮೊಬೈಲ್) ಉಚಿತ ಕರೆ ನೀಡಿದರೂ ಆ ಸವಿನೆನಪನ್ನು ಮರಳಿ ತರಲಾಗದು.

ಹೊಸ ವರ್ಷ, ಹಬ್ಬ, ಹುಟ್ಟುಹಬ್ಬಗಳಿಗೆ ಗೆಳೆಯ, ಗೆಳತಿಯರಿಗೆ ಬಂಧು ಬಳಗದವರಿಗೆ ಕಾಗದ ಬರೆಯುವಾಗ ಸಿಗುತ್ತಿದ್ದ ಆನಂದ ಪ್ರಸ್ತುತ ಜನಾಂಗದವರು ಎಷ್ಟೇ ಹಣ ವ್ಯಯಿಸಿದರೂ ಸಿಗಲಾರದು.

ಹೀಗೆ ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಲೇ ಹೋಗಬಹುದು. ಮಹಾಕಾದಂಬರಿಯೊಂದರ ಭರ್ತಿಗೆ ಮೂರ್ತರೂಪದ ಅಕ್ಷರಗಳಾಗಬಹುದು. ಅಭಿವೃದ್ಧಿ ಎಂಬುದು ಖಂಡಿತವಾಗಿಯು ಬೇಕು ನಿಜ ಆದರೆ ಅದರ ಹೆಸರಿನಲ್ಲಿ ನಮ್ಮತನವನ್ನು ಹಾಗೂ ನೆಮ್ಮದಿತನವನ್ನು ಕಳೆದುಕೊಂಡು ಬಾಳಹೊರಟಿರುವುದು ಎಷ್ಟರಮಟ್ಟಿಗೆ ಸರಿ? ಆರೋಗ್ಯವನ್ನು ಕೆಡಿಸಿಕೊಂಡು, ಹಣ ನೀಡಿ ಕಾಯಿಲೆ ತಂದುಕೊಳ್ಳುವುದಾಗಲೀ, ನಮ್ಮಲ್ಲಿಯೇ ಶಾಶ್ವತವಾಗಿ ಇರುತ್ತಿದ್ದ ಮಾನವೀಯ ಮೌಲ್ಯಗಳನ್ನು ಕಳೆದುಕೊಂಡು ಬಾಳುವುದಾಗಲೀ, ನಮ್ಮ ಸಂಸ್ಕೃತಿ, ಆಚಾರ ವಿಚಾರಗಳನ್ನು ಮರೆತು ಜೀವಿಸುವುದಾಗಲೀ (ದುರಂತ ಎಂದರೆ ನಮ್ಮ ಭಾರತೀಯ ಸಂಸ್ಕೃತಿಯನ್ನು ಇಂದು ಅನೇಕ ಜನ ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಭಾರತೀಯರಾದ ನಾವೇ ನಮ್ಮ ಸಂಸ್ಕೃತಿಯನ್ನು ಕುರಿತು ಅವಹೇಳನ ಮಾಡುತ್ತಾ ನಮ್ಮತನವ ಕಳೆದುಕೊಳ್ಳುತ್ತಿದ್ದೇವೆ)

ಯಾರನ್ನೂ ಹೀಯ್ಯಾಳಿಸುವ ಅಥವಾ ಅಭಿವೃದ್ಧಿಯಾಗುವುದೇ ಬೇಡ ಎಂದು ಹಳೆಯದರಂತೆ ಬಾಳಿ ಎಂಬುದು ನನ್ನ ಉದ್ದೇಶವಲ್ಲ. ಬದಲಾವಣೆ ಬೇಕು ನಿಜ, ಅಭಿವೃದ್ಧಿ ಪ್ರಗತಿಯ ಸಂಕೇತ ಅದು ಕೂಡ ನಿಜ ಆದರೆ ಅದು ನಮ್ಮನ್ನೇ ನಾವು ಮರೆಯುವಷ್ಟರ ಮಟ್ಟಿಗೆ ನಮ್ಮತನವನ್ನೇ ಕಳೆದುಕೊಂಡು ಬಾಳುವಷ್ಟರ ಮಟ್ಟಿಗೆ ತಲುಪುವುದು ಸರಿಯಲ್ಲ ಎಂಬುದು ನನ್ನ ಕಳಕಳಿ.

ನಮ್ಮತನವ ಮರೆಯದೇ ಸದಾ ಕಾಲದಲ್ಲಿಯೂ ಮನುಷ್ಯರಂತೆ ಬಾಳಿ ಮಾನವೀಯತೆಯನ್ನು ಬೆಳೆಸಿ,ಉಳಿಸಿ,ಮುಂದಿನ ಜನಾಂಗದವರಲ್ಲಿಯೂ ಅದು ಉಳಿಯುವಂತೆ ಮಾಡಬೇಕು.ಈ ಮಾತನ್ನು ಹೇಳುವಾಗ ಇತ್ತೀಚೆಗೆ ಓದಿದ ಕಥೆಯೊಂದು ನೆನಪಿಗೆ ಬರುತ್ತದೆ.

ಕಥೆ : ವಯಸ್ಸಾದ ಮುದುಕರೊಬ್ಬರು ವಿಶಾಲವಾದ ಸಾರ್ವಜನಿಕ ಸ್ಥಳದಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡುತ್ತಿದ್ದುದ್ದನ್ನು ಗಮನಿಸುತ್ತಿದ್ದ ಒಬ್ಬ ಯುವಕ ಒಮ್ಮೆ ಬಂದು ಅವರ ಮುಂದೆ ನಿಂತು ಅಲ್ಲ ತಾತಾ ಈ ಗಿಡ ಮರವಾಗಿ ಬೆಳೆದು ನೆರಳು ಕೊಡುವವರಿಗೆ ನೀವು ಜೀವಂತವಾಗಿ ಇರುವುದಿಲ್ಲ ! ಆದರೂ ಯಾಕೆ ಈ ಆಸೆ ಎಂದು ಹೇಳುತ್ತಾನೆ.ಯುವಕನ ಮೊಗವನ್ನು ನೋಡಿ ಮುಗುಳುನಗುತ್ತಾ ಆ ಹಿರಿಯರು ನಿಜ ಕಣಪಾ – ಈ ಗಿಡ ಮರವಾಗಿ ನೆರಳು ಕೊಡುವಷ್ಟರಲ್ಲಿ ನಾನಿರುವುದಿಲ್ಲ ಆದರೆ ಇಷ್ಟು ವರ್ಷಗಳ ಕಾಲ ನಾನು ನಿಶ್ಚಿಂತೆಯಾಗಿ ಉಸಿರಾಡುವುದಕ್ಕೆ ಅನೇಕ ಮರಗಳು ಕಾರಣವಾಗಿವೆ. ಈಗ ನಾನು ನೆಡುವ ಗಿಡ ಮರವಾಗುವವರೆಗೆ ನಾನಿರುವುದಿಲ್ಲ, ನನಗ್ಯಾಕೆ ಈ ಉಸಾಬರಿ ಎಂದು ಕೈಕಟ್ಟಿ ಕೂರಲಾರೆ ! ಯಾಕೆಂದರೆ ನಮ್ಮ ಪೂರ್ವಿಕರು ಇದೇ ತರಹ ಭಾವಿಸಿದ್ದರೆ ನಾವು ಇಂದು ನೋಡುತ್ತಿರುವ ತಕ್ಕಮಟ್ಟಿಗಾದರೂ ಉಳಿಸಿಕೊಂಡಿರುವ ಮರಗಳನ್ನು ಕಾಣಲು ಸಾಧ್ಯವಿತ್ತೇ? ಸಮಾಜಕ್ಕೆ ನಿಸ್ವಾರ್ಥ ಮನೋಭಾವದಿಂದ ಏನಾದರೂ ಕೊಡುಗೆ ನೀಡಬೇಕೆಂಬ ಸದುದ್ದೇಶದಿಂದ ಗಿಡವನ್ನು ನೆಡುತ್ತಿರುವೆನೆ ಹೊರತು ಇದು ಮರವಾಗಿ ನನಗೆ ನೆರಳು ನೀಡಬೇಕೆಂಬ ಸ್ವಾರ್ಥದಿಂದಲ್ಲ ಎಂದು ಹೇಳಿದರಂತೆ. ಕಥೆಯ ಸತ್ಯಾತತೆ ಏನೇ ಇದ್ದರೂ ಕಥೆ ನೀಡುವ ಸಂದೇಶ ದೊಡ್ಡದು. ಸ್ವಾರ್ಥಕ್ಕಿಂತ ನಿಸ್ವಾರ್ಥ ಬದುಕು ನಮದಾಗಬೇಕು, ಸಮಾಜಕ್ಕೆ ನಮ್ಮ ಕೈಲಾದಷ್ಟು ಕೊಡುಗೆ ನೀಡಬೇಕು ಎಂಬುದು ಮುಖ್ಯವಾದುದು. ಏನೇ ಆದರೂ ನಿಂತ ಎರಡು ಪಾದದ ಕೆಳಗಿ ಇರುವ ನೆಮ್ಮದಿಯ ಬದುಕು ಅನುಗಾಲ ಸುರಿಯುವುದು ಬಾಳದೀವಿಗೆಯ ಬೆಳಕು.

ಒಂದೇ ವೇದಿಕೆ ಮೇಲೆ ಅಮಿತ್ ಶಾ–ಡಿಕೆಶಿ!

ರಾಜಕೀಯ ಬದ್ಧ ವೈರಿಗಳ ಮುಖಾಮುಖಿ, ಗರಿಗೆದರಿದ ಕುತೂಹಲ!



ಅಮಿತ್ ಶಾ



ಡಿ.ಕೆ.ಶಿವಕುಮಾರ್

ಬೆಂಗಳೂರು: ಕೇಂದ್ರ ಗೃಹಸಚಿವ, ಬಿಜೆಪಿ ನಾಯಕ ಅಮಿತ್ ಶಾ ಹಾಗೂ ಕರ್ನಾಟಕದ ಉಪ ಮುಖ್ಯಮಂತ್ರಿ, ಕಾಂಗ್ರೆಸ್ ನಾಯಕ ಡಿಕೆ ಶಿವಕುಮಾರ್, ಒಂದೇ ವೇದಿಕೆ ಮೇಲೆ ಕೂರಲಿದ್ದಾರೆ. ಇದೇ ಫೆಬ್ರವರಿ 26, ಬುಧವಾರದಂದು ಅಮಿತ್ ಶಾ ಹಾಗೂ ಡಿಕೆ ಶಿವಕುಮಾರ್ ಒಂದೇ ಕಾರ್ಯಕ್ರಮದಲ್ಲಿ ಒಂದೇ ವೇದಿಕೆ ಹಂಚಿಕೊಳ್ಳಲು ಮುಹೂರ್ತ ಫಿಕ್ಸ್ ಆಗಿದೆ.

ಮಹಾಶಿವರಾತ್ರಿಯಂದೇ ಡಿಕೆಶಿ–ಶಾ ಮುಖಾಮುಖಿ: ಶಿವರಾತ್ರಿಯಂದು ಅಮಿತ್ ಶಾ ಹಾಗೂ ಡಿಕೆ ಶಿವಕುಮಾರ್ ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸದ್ಗುರು ಜಗ್ಗಿವಾಸುದೇವ್ ಅವರ ಈಶಾ ಫೌಂಡೇಶನ್ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಅಮಿತ್ ಶಾ ಹಾಗೂ ಡಿಕೆ ಶಿವಕುಮಾರ್ ಇಬ್ಬರೂ ಭಾಗವಹಿಸಲಿದ್ದಾರೆ.

ಸದ್ಗುರು ಸನ್ನಿಧಿಯಲ್ಲಿ ವಿಶೇಷ ಮಹಾಶಿವರಾತ್ರಿ: ತಮಿಳುನಾಡಿನ ಕೊಯಮತ್ತೂರಿನಲ್ಲಿ ಇರುವ ಸದ್ಗುರು ಜಗ್ಗಿ ವಾಸುದೇವ್ ಅವರ ಈಶಾ ಫೌಂಡೇಶನ್‌ನಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ವಿಶೇಷ ಮಹಾಶಿವರಾತ್ರಿ ಆಚರಣೆ ನಡೆಯಲಿದೆ. ಸದ್ಗುರು ನೇತೃತ್ವದಲ್ಲಿ ರಾತ್ರಿ ಇಡೀ ಶಿವನ ಆರಾಧನೆ, ಜಪ, ತಪ, ಮಂತ್ರಪಠಣ ನಡೆಯಲಿದ್ದು, ಹಲವು ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಈ ವಿಶೇಷ ಮಹಾಶಿವರಾತ್ರಿಗೆ ವಿವಿಧ ಕ್ಷೇತ್ರಗಳ ಗಣ್ಯರು ಸಾಕ್ಷಿಯಾಗಲಿದ್ದಾರೆ.

ಉಚಿತ ಧ್ಯಾನದ ಅಪ್ಲಿಕೇಶನ್ ರಿಲೀಸ್: ಇದೇ ಮೊದಲ ಬಾರಿಗೆ, ಸದ್ಗುರುಗಳು ಮಧ್ಯರಾತ್ರಿ ಮಹಾಮಂತ್ರ (ಓಂ ನಮಃ ಶಿವಾಯ) ದೀಕ್ಷೆಯನ್ನು ನೀಡಲಿದ್ದಾರೆ, ಇದು ಅಂತಿಮ ಯೋಗಕ್ಷೇಮವನ್ನು ತರುತ್ತದೆ. ಸರಳ ಆದರೆ ಶಕ್ತಿಯುತವಾದ ದೈನಂದಿನ ಅಭ್ಯಾಸವನ್ನು ಪ್ರಾರಂಭಿಸಲು ವ್ಯಕ್ತಿಗಳಿಗೆ ಸಹಾಯ ಮಾಡಲು ವಿನ್ಯಾಸಗೊಳಿಸಲಾದ 7 ನಿಮಿಷಗಳ ಮಾರ್ಗದರ್ಶಿ ಧ್ಯಾನವನ್ನು ಒಳಗೊಂಡಿರುವ ಉಚಿತ ಧ್ಯಾನ ಅಪ್ಲಿಕೇಶನ್ "ಮಿರಾಕಲ್ ಆಫ್ ದಿ ಮೈಂಡ್" ಅನ್ನು ಸದ್ಗುರುಗಳು ಅನಾವರಣಗೊಳಿಸಲಿದ್ದಾರೆ ಅಂತ ಎಎನ್ಐ ಟ್ವೀಟ್ ಮಾಡಿದೆ.

ಹೊಗೇನೆಕಲ್ ಪ್ರವಾಸೋದ್ಯಮ ಉತ್ತೇಜಿಸಲು ಕರ್ನಾಟಕ ಮುಂದು

ಬೆಂಗಳೂರು: ರಾಜ್ಯ ಪ್ರವಾಸೋದ್ಯಮ ಇಲಾಖೆಯು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಹೊಗೇನಕಲ್ ಜಲಪಾತದ ಪ್ರವಾಸ ಅಭಿವೃದ್ಧಿ ಪಡಿಸಲು ವರದಿಯನ್ನು ರೂಪಿಸುತ್ತಿದೆ.

ಕಾವೇರಿ ನದಿಯಿಂದ ಸೃಷ್ಟಿಸಲ್ಪಟ್ಟ ಸುಂದರವಾದ ಜಲಪಾತಗಳಿಗೆ ಭೇಟಿ ನೀಡುವ ಕರ್ನಾಟಕದ ಪ್ರವಾಸಿಗರು ತಮಿಳುನಾಡಿನ ಧರ್ಮಪುರಿಗೆ ದೋಣಿ ಸವಾರಿ, ಚಾರಣ ಮತ್ತು ಜಲ ಕ್ರೀಡೆ ಆನಂದಿಸಲು ಹೋಗುತ್ತಾರೆ. ಕರ್ನಾಟಕದಿಂದ ಪ್ರವೇಶವಿದೆ. ಆದರೆ ಕಾವೇರಿ ವನ್ಯಜೀವಿ ಅಭಯಾರಣ್ಯ ಅರಣ್ಯ ಪ್ರದೇಶದ ಮೂಲಕ ನಿರ್ಬಂಧ ಏರಲಾಗಿದೆ.

ರಾಜ್ಯದಿಂದ ಈ ಸ್ಥಳಕ್ಕೆ ಜನರ ಸಂಖ್ಯೆ ಹೆಚ್ಚಾಗುವುದನ್ನು ನಾವು ಬಯಸುತ್ತೇವೆ. ಅರಣ್ಯ ಇಲಾಖೆಯನ್ನು ಒಳಗೊಂಡ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ಈ ಸ್ಥಳವನ್ನು ಅಭಿವೃದ್ಧಿಪಡಿಸುತ್ತೇವೆ. ಇದರಿಂದ ತಮಿಳುನಾಡಿನೊಂದಿಗೆ ಆರೋಗ್ಯಕರ ಸ್ಪರ್ಧೆಯನ್ನು ಏರ್ಪಡುವುದಲ್ಲದೆ, ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ ಎಂದು ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಲಾಖೆಯ ಅಧಿಕಾರಿಗಳು ಅನುಮತಿಗಾಗಿ ಸರ್ಕಾರದ ಮುಂದೆ ಇಡಲು 12 ಕೋಟಿ ರೂ. ವೆಚ್ಚದ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುತ್ತಿದ್ದಾರೆ. ವರದಿಯು ಗಜೆಬೋ, ಪಾರ್ಕಿಂಗ್ ಸೌಲಭ್ಯ, ಮನರಂಜನಾ ಕೇಂದ್ರ, ವಿಶ್ರಾಂತಿ ಕೊಠಡಿಗಳು, ಫುಡ್ ಕೋರ್ಟ್ ಮತ್ತು ಇತರ ಅಗತ್ಯ ಸೌಲಭ್ಯಗಳನ್ನು ನಿರ್ಮಿಸಲಾಗುತ್ತದೆ. ಇದರೊಂದಿಗೆ, ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳಲ್ಲಿನ ಸೌಲಭ್ಯಗಳ ಸುಧಾರಣೆಗೆ ಯೋಜನಾ ವರದಿಯನ್ನು ಸಹ ಸಿದ್ಧಪಡಿಸಲಾಗುತ್ತಿದೆ.

ಅತಿಥಿ ಗೃಹ ಮತ್ತು ಚಾರಣ ಸೌಲಭ್ಯಗಳನ್ನು ಸ್ಥಾಪಿಸುವುದರಿಂದ ಈ ಪ್ರದೇಶದ ಪ್ರವಾಸೋದ್ಯಮ ಸಾಮರ್ಥ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಪ್ರವಾಸಿಗರಿಗೆ ಸಂಪೂರ್ಣ ಪ್ಯಾಕೇಜ್ ನೀಡಬಹುದು. ಬೆಂಗಳೂರು ಮತ್ತು ಮೈಸೂರಿಗೆ ಹತ್ತಿರದಲ್ಲಿರುವುದರಿಂದ ಈ ಸ್ಥಳ ಸೂಕ್ತವಾಗಿದೆ ಎಂದು ಅಧಿಕಾರಿ ಹೇಳಿದರು.

ಹಲವು ಸಂದರ್ಭಗಳಲ್ಲಿ ಪ್ರವಾಸಿಗರು ಶೋಷಣೆಗೊಳಗಾಗುತ್ತಿದ್ದಾರೆ ಮತ್ತು ಹೆಚ್ಚುವರಿ ಹಣವನ್ನು ವಿಧಿಸಲಾಗುತ್ತಿದೆ ಎಂದು ಇಲಾಖೆಗೆ ಅನೇಕ ದೂರುಗಳು ಕೇಳಿ ಬಂದಿವೆ. ಇದನ್ನು ತಮಿಳುನಾಡು ಸರ್ಕಾರ ನಿರ್ವಹಿಸುತ್ತಿದೆ ಎಂದು ಹೇಳಿ ನಾವು ಯಾವಾಗಲೂ ಅವರನ್ನು ಸಮಾಧಾನ ಪಡಿಸಿದ್ದೇವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಹಾಸನ ಜಿಲ್ಲಾಧಿಕಾರಿ ವಿರುದ್ಧ ಶಾಸಕ ರೇವಣ್ಣ ಗರಂ



ಹಾಸನ: ಜಿಲ್ಲೆಯ ಅಭಿವೃದ್ಧಿಗಾಗಿ ಸರ್ಕಾರ ಜಿಲ್ಲಾಧಿಕಾರಿ ಖಾತೆಗೆ ಹಾಕಿರುವ ಹಣ ಬಿಡುಗಡೆ ಮಾಡುತ್ತಿಲ್ಲ. ಖಜಾನೆಯಲ್ಲಿ ಇಟ್ಟುಕೊಂಡು ಹಣ್ಣಿಟ್ಟು, ಕಾಯಿ ಒಡೆದು, ದೀಪ ಹಚ್ಚಿ ಪೂಜೆ ಮಾಡಲಿ ಎಂದು ಶಾಸಕ ಎಚ್.ಡಿ. ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿದು ಹೋಗಿದೆ. ಸರ್ಕಾರ ಜಿಲ್ಲೆಗೆ ಅತಿವೃಷ್ಟಿ ಪರಿಹಾರವಾಗಿ 12 ಕೋಟಿ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿಗಳು ಅದನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ರಸ್ತೆ ಗುಂಡಿ ಮುಚ್ಚಲು ಸಹ ಜಿಲ್ಲಾಧಿಕಾರಿ ಹಣ ಕೊಡುತ್ತಿಲ್ಲ. ಬಿಡುಗಡೆಯಾಗಿರುವ ಹಣವನ್ನು ಖಜಾನೆಯಲ್ಲಿಯೇ ಇಡುವ ವರ್ತನೆ ಇದೇ ರೀತಿ ಮುಂದುವರಿದರೆ ಜಿಲ್ಲಾಧಿಕಾರಿ ಕಚೇರಿ ಎದುರು ಉಗ್ರ ಹೋರಾಟ ಮಾಡುತ್ತೇನೆ ಎಂದು ಎಚ್ಚರಿಸಿದರು. ರಾಜ್ಯ ಸರ್ಕಾರ ಸಂಪೂರ್ಣ ದ್ವೇಷದ ರಾಜಕಾರಣ ಮಾಡುತ್ತಿದೆ. ಜಿಲ್ಲೆಯಲ್ಲಿ ಕಾಮಗಾರಿಗಳೆಲ್ಲ ನಿಂತು ಹೋಗಿವೆ. ಹಾಸನ ವಿಶ್ವವಿದ್ಯಾಲಯ ಮುಚ್ಚಲು ಹೊರಟಿದ್ದಾರೆ. ಮುಚ್ಚುವ ಬದಲು ಅದಕ್ಕೆ ಬೇಕಾದ ಸೌಲಭ್ಯ ಒದಗಿಸಲಿ ಎಂದು ಒತ್ತಾಯಿಸಿದರು. ಹಾಸನ ಕೃಷಿ ಕಾಲೇಜನ್ನು ಮಂಡ್ಯ ವಿ.ವಿಗೆ ಸೇರಿಸುತ್ತಿದ್ದೀರಿ ಕೃಷಿ ಕಾಲೇಜು, ಬೆಂಗಳೂರು ವಿ.ವಿ ವ್ಯಾಪ್ತಿಯಲ್ಲಿ ಇರಲಿ ಎಂದು ಆಗ್ರಹಿಸಿದ ಅವರು, ವಿಧಾನಸಭೆ ಅಧಿವೇಶನದಲ್ಲಿ ಈ ಬಗ್ಗೆ ಹೋರಾಟ ಮಾಡುತ್ತೇನೆ. ಜೆಡಿಎಸ್‌ನ ನಾಲ್ವರು ಶಾಸಕರು ಒಟ್ಟಾಗಿ ಇದನ್ನು ಪ್ರಶ್ನೆ ಮಾಡುತ್ತೇವೆ. ನಮ್ಮ ಹೋರಾಟಕ್ಕೆ ಬಿಜೆಪಿ ಶಾಸಕರ ಸಹಕಾರವನ್ನು ಕೋರುತ್ತೇನೆ ಎಂದರು. ಸರ್ಕಾರಿ ನೌಕರರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ. ಅಧಿಕಾರಿಗಳಿಂದ ಹಣ ಲೂಟಿ ಮಾಡಲು ಜಿಲ್ಲಾ ಪಂಚಾಯಿತಿ ಚುನಾವಣೆ ಮುಂದೂಡುತ್ತಿದ್ದಾರೆ. ಮಂಡ್ಯ ಜಿಲ್ಲೆಗೆ ಏನು ಬೇಕು ಚೆಲುವರಾಯಸ್ವಾಮಿ ಮಾಡಲಿ. ಮಂಡ್ಯ ಜನರ ಬಗ್ಗೆ ನನಗೆ ವಿಶ್ವಾಸವಿದೆ. ಆ ಜಿಲ್ಲೆಗೆ ಕುಮಾರಸ್ವಾಮಿ ಮತ್ತು ನನ್ನ ಕೊಡುಗೆ ಏನಿದೆ ಎಂಬುದು ಜನರು ಗಮನಿಸಲಿ ಎಂದರು. ಕುಮಾರಸ್ವಾಮಿಗೆ ಮಂಡ್ಯ ಜಿಲ್ಲೆ ಜನರು ರಾಜಕೀಯವಾಗಿ ಶಕ್ತಿ ಕೊಟ್ಟಿದ್ದಾರೆ. ಮಂಡ್ಯಕ್ಕೆ ಏನು ಮಾಡಿದ್ದೇನೆ ಎಂದು ಚರ್ಚೆಗೆ ಬರಲಿ ಎಂದು ಕೃಷಿ ಸಚಿವ ಚಲುವರಾಯಸ್ವಾಮಿಗೆ ರೇವಣ್ಣ ತಿರುಗೇಟು ನೀಡಿದರು.

ಅರಸೀಕೆರೆ; ಎಲ್ಲರೂ ಒಟ್ಟಾಗಿ ದೇವಸ್ಥಾನ ಕಟ್ಟೋಣ: ಶಾಸಕ ಶಿವಲಿಂಗೇಗೌಡ



ಗ್ರಾಮದೇವತೆ ಕರಿಯಮ್ಮ, ಮಲ್ಲಿಗೆಮ್ಮ ದೇವಿಯವರ ನೂತನ ವಾಹನಕ್ಕೆ ಭಾನುವಾರ ಶಾಸಕ ಕೆ.ಎಂ.ಶಿವಲಿಂಗೇಗೌಡ ವಿಧ್ಯುಕ್ತ ಚಾಲನೆ ನೀಡಿದರು.

ಅರಸೀಕೆರೆ: ಪಕ್ಷಾತೀತವಾಗಿ ಎಲ್ಲರ ಸಹಕಾರ ಹಾಗೂ ಒಗ್ಗಟ್ಟಿನಿಂದ ಕೂಡಿ ಕರಿಯಮ್ಮ ದೇವಿಯ ನೂತನ ದೇವಸ್ಥಾನವನ್ನು ಕಟ್ಟೋಣ ಎಂದು ಶಾಸಕ ಕೆ.ಎಂ.ಶಿವಲಿಂಗೇಗೌಡ ಹೇಳಿದರು.

ನಗರದ ಗ್ರಾಮದೇವತೆ ಕರಿಯಮ್ಮ, ಮಲ್ಲಿಗೆಮ್ಮ ದೇವಿಯವರ ನೂತನ ವಾಹನಕ್ಕೆ ಭಾನುವಾರ ವಿಧ್ಯುಕ್ತ ಚಾಲನೆ ನೀಡಿ, ಪೂಜಾ ಕಾರ್ಯ ನೆರವೇರಿಸಿ ಮಾತನಾಡಿದ ಅವರು, ದೇವಾಲಯ ನಿರ್ಮಿಸಲು ವೈಯಕ್ತಿಕವಾಗಿ 50 ಲಕ್ಷ ಪ್ರಥಮವಾಗಿ ನಾನೇ ನೀಡುವುದಲ್ಲದೆ ಸರ್ಕಾರದಿಂದಲೂ ಹೆಚ್ಚಿನ ನೆರವು ಕೊಡಿಸುತ್ತೇನೆ' ಎಂದು ಭರವಸೆ ನೀಡಿದರು.

ಬಹುದಿನಗಳ ಕನಸಾದ ದೇವಸ್ಥಾನ ನಿರ್ಮಿಸಲು ಇಂದು ಕಾಲ ನಿಗದಿಯಾ ಗಿದೆ. ದೇವಸ್ಥಾನವನ್ನು ಅಪಾರ ಭಕ್ತರು, ಗ್ರಾಮಸ್ಥರು ಹಾಗೂ ಕಮಿಟಿ ಸಹಕಾರದೊಂದಿಗೆ ನಿರ್ಮಿಸೋಣ. ಮಲ್ಲಿಗೆಮ್ಮ ದೇವಸ್ಥಾನದ ಆವರಣದಲ್ಲಿ ಹಾರ್ಚ್, ಇಂಟರ್‌ಲಾಕ್ ಹಾಗೂ ಕರಿಯಮ್ಮ ದೇವಾಲಯದ ಆವರಣಕ್ಕೆ ಇಂಟರ್‌ಲಾಕ್ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸೋಣ. ದೇವಿಯವರ ನೂತನ ರಥ ನಿಲ್ಲಿಸಲು ಶೆಡ್‌ನ್ನು ಶೀಘ್ರವೇ ನಿರ್ಮಿಸಲಾಗುವುದು ಎಂದರು. ದೇವಸ್ಥಾನದ ಅಧ್ಯಕ್ಷ ಯೋಗೀಶ್, ಕರವೇ ಅಧ್ಯಕ್ಷ ನಾರಾಯಣಗೌಡರ ನೇತೃತ್ವ ಹಾಗೂ ಭಕ್ತ ಸಮೂಹ ಒಂದಾಗಿ ಸಾಮರಸ್ಯದಿಂದ ದೇವಸ್ಥಾನ ಕಟ್ಟೋಣ ಎಂದು ಹೇಳಿದರು. ಮಲ್ಲಿಗೆಮ್ಮ ದೇವಸ್ಥಾನದಿಂದ ಮೂಲಸ್ಥಾನ ಕರಿಯಮ್ಮ ದೇವಸ್ಥಾನದವರೆಗೆ ಶ್ರೀ ಕರಿಯಮ್ಮ, ಮಲ್ಲಿಗೆಮ್ಮ ದೇವಿ, ಚೆಲುವರಾಯ ಸ್ವಾಮಿ, ಧೂತರಾಯ ಸ್ವಾಮಿ ಹಾಗೂ ಕೆಂಚರಾಯ ಸ್ವಾಮಿಯವರ ಉತ್ಸವ ಮಂಗಳವಾದ್ಯದೊಂದಿಗೆ ನಡೆಯಿತು. ಕಾರ್ಯದರ್ಶಿ ಎ.ಜಿ.ಕಿರಣ್‌ಕುಮಾರ್, ಸಹಕಾರ್ಯದರ್ಶಿ ದರ್ಶನ್, ಖಜಾಂಚಿ ರಮೇಶ್, ಸದಸ್ಯರಾದ ನಾಗಭೂಷಣ್, ದಿವಾಕರ್, ಪ್ರಸನ್ನಕುಮಾರ್, ಗುರುಮೂರ್ತಿ, ರವಿಕಿರಣ್, ಎ.ಎಂ.ದಿಲೀಪ್‌ಕುಮಾರ್, ಆಟೊ ನಾಗರಾಜ್, ನಿರಂಜನಕುಮಾರ್, ದೀಪು, ವಿ.ರಾಜಣ್ಣ, ಯಶವಂತ, ರಮೇಶ್, ಮಧು, ದರ್ಶನ್, ನವೀನ್, ಮಂಜುನಾಥ್, ಲೋಕೇಶ್, ಸುರೇಶ್, ನಗರಸಭೆ ಉಪಾಧ್ಯಕ್ಷ ಮನೋಹರ್, ಸದಸ್ಯ ದರ್ಶನ್, ಮನೋಜ್ ಕುಮಾರ್, ಮಾರುತಿ ಇದ್ದರು.

ಹಾಸನದಲ್ಲಿ ಆನೆ ದಾಳಿಗೆ ಯುವಕ ಬಲಿ

ಹಾಸನ: ಜಿಲ್ಲೆಯಲ್ಲಿ ಕಾಡಾನೆ ಹಾಗೂ ಮಾನವನ ನಡುವಿನ ಸಂಘರ್ಷ ಮುಂದುವರಿದಿದ್ದು, ಕಾಡಾನೆ ದಾಳಿಗೆ ಯುವಕನೋರ್ವ ಬಲಿಯಾದ ಘಟನೆ ಬೇಲೂರಿನ ಬ್ಯಾದನೆ ಗ್ರಾಮದಲ್ಲಿ ನಡೆದಿದೆ.

ಮೃತ ಯುವಕನನ್ನು ಅನಿಲ್ (28) ಎಂದು ಗುರುತಿಸಲಾಗಿದೆ. ಗುಜನಹಳ್ಳಿ ಗ್ರಾಮದ ಅನಿಲ್, ಎಸ್ಟೇಟ್‌ಗೆ ಕೆಲಸಕ್ಕೆ ಹೋಗಿದ್ದ. ಸಂಜೆ ಕೆಲಸ ಮುಗಿಸಿ ಮನೆಗೆ ನಡೆದುಕೊಂಡು ಬರುವಾಗ ಕಾಡಾನೆ ಏಕಾಏಕಿ ದಾಳಿ ಮಾಡಿದೆ. ಸೊಂಡಲಿನಿಂದ ಎತ್ತಿ ಬಿಸಾಡಿ, ಕಾಲಿನಿಂದ ತುಳಿದು ಸಾಯಿಸಿದೆ. ಪುತ್ರನ ಸಾವಿನ ವಿಷಯ ತಿಳಿಯುತ್ತಿದ್ದಂತೆ ಅನಿಲ್ ತಾಯಿ ಸ್ಥಳಕ್ಕೆ ಆಗಮಿಸಿ ಮೃತ ದೇಹವನ್ನು ಅಪ್ಪಿ ಕಣ್ಣೀರಿಟ್ಟಿದ್ದಾರೆ. ಸ್ಥಳೀಯರು ಹಾಗೂ ಮೃತನ ಕುಟುಂಬಸ್ಥರು, ಆನೆ ಹಾವಳಿ ವಿರುದ್ಧ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಬೇಕು. ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಅರೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಮಧ್ಯ ಪ್ರದೇಶ ಬಳಿ ಭೀಕರ ಅಪಘಾತ: ಕುಂಭಮೇಳಕ್ಕೆ ತೆರಳಿದ್ದ ಗೋಕಾಕ್‌ನ ಆರು ಮಂದಿ ದಾರುಣ ಸಾವು

ಬೆಳಗಾವಿ: ಮಧ್ಯ ಪ್ರದೇಶದ ಜಬಲಪುರ ಪೆಹರಾ ಟೋಲ್ ನಾಕಾ ಬಳಿ ಸಂಭವಿಸಿದ ಅಪಘಾತದಲ್ಲಿ ಗೋಕಾಕ್ ನಗರದ ಆರು ಮಂದಿ ಮೃತಪಟ್ಟಿದ್ದಾರೆ. ಇಬ್ಬರ ಸ್ಥಿತಿ ಗಂಭೀರವಾಗಿದೆ.

ಗೋಕಾಕ್ ತಾಲೂಕಿನ ಲಕ್ಷ್ಮಿ ಬಡಾವಣೆ ನಿವಾಸಿಗಳಾದ ಬಾಲಚಂದ್ರ ಗೌಡರ (50), ಸುನೀಲ್ ಶೇಡಶ್ಯಾಳೆ (45), ಬಸವರಾಜ್ ಕುರ್ತಿ (63), ಬಸವರಾಜ್ ದೊಡಮಾಳ್ (49), ಈರಣ್ಣ ಶೇಬಿನಕಟ್ಟಿ (27), ವಿರೂಪಾಕ್ಷ ಗುಮತಿ (61) ಮೃತರು ದುರ್ದೈವಿಗಳು. ಗಾಯಗೊಂಡ ಮುಸ್ತಾಕ್ ಶಿಂಧಿಕುರಬೇಟ, ಸದಾಶಿವನನ್ನು ಜಬಲ್ಪುರ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋಮವಾರ ಬೆಳಗಿನ ಜಾವ ಫೋರ್ಸ್ ತೂಫಾನ್



ವಾಹನ ಚಾಲಕನ ನಿಯಂತ್ರಣ ತಪ್ಪಿ ಬಸ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ. ಕುಂಭಮೇಳದಲ್ಲಿ ಪುಣ್ಯ ಸ್ನಾನ ಮುಗಿಸಿ ವಾಪಸಾಗುವಾಗ ಅಪಘಾತ ಸಂಭವಿಸಿದೆ. ಅಪಘಾತವಾದ ನಂತರ ಬಸ್ ಚಾಲಕ ಸ್ವಲ್ಪ ಸಮಯ ಬಸ್ ನಿಲ್ಲಿಸಿ ನಂತರ ಅಲ್ಲಿಂದ ತೆರಳಿದ್ದಾನೆ. ಬಸ್ ಪತ್ತೆ ಹಚ್ಚಲು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಸಂವಿಧಾನ ದಿನಾಚರಣೆ, ಭೀಮ ರತ್ನ ಪ್ರಶಸ್ತಿ ಪ್ರದಾನ



ಮೈಸೂರಿನ ಪುರಭವನದಲ್ಲಿ ಕರ್ನಾಟಕ ರಾಜ್ಯ ಭೀಮ್ ಸೇನೆಯು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಭೀಮ್ ರತ್ನ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಲಾಯಿತು.

ಮೈಸೂರು, ಫೆ. 24(ಜಿಎ)–ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಬದುಕಿದ್ದಾಗ ಮಾತ್ರವಲ್ಲದೆ ಕಾಲವಾದಾಗಲೂ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಮೈಸೂರಿನ ಪುರಭವನದಲ್ಲಿ ಕರ್ನಾಟಕ ರಾಜ್ಯ ಭೀಮ್ ಸೇನೆಯು ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಮತ್ತು ಭೀಮ್ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಮತ್ತು ಅವರ ಆಶಯಗಳ ವಿರುದ್ಧ ಕೆಲವು ಜಾತಿವಾದಿ ಮನಸ್ಥಿತಿಗಳು, ಪಟ್ಟಭದ್ರ ಹಿತಾಸಕ್ತಿಗಳು ಇಂದಿಗೂ ಶೋಷಣೆಯ ಅಸ್ತ್ರಗಳನ್ನು ಝಳಪಿಸುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆಯರನ್ನು ಶಿಕ್ಷಣದಿಂದ ವಂಚಿಸಲಾಗಿತ್ತು. ನಾಲ್ಕು ಗೋಡೆಗಳ ನಡುವೆಯೇ ಬದುಕುವಂತೆ ಕಟ್ಟುಪಾಡುಗಳನ್ನು ವಿಧಿಸಲಾಗಿತ್ತು. ಇಂತಹ ಸಂದರ್ಭದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಬ್ರಾಹ್ಮಣರಾದಿಯಾಗಿ ಎಲ್ಲಾ ವರ್ಗದ ಮಹಿಳೆಯರಿಗೂ ಶಿಕ್ಷಣವನ್ನು ದೊರಕಿಸಿಕೊಟ್ಟು ಆ ಮೂಲಕ ಮಹಿಳೆಯರನ್ನೂ ಸಮಾಜದ ಮುಖ್ಯವಾಹಿನಿಗೆ ಕರೆತಂದರು ಎಂದು ತಿಳಿಸಿದರು. ಡಾ.ಬಿ.ಆರ್. ಅಂಬೇಡ್ಕರ್ ತಮಗಾಗಿ, ತಮ್ಮ ಕುಟುಂಬಕ್ಕಾಗಿ ಆಸ್ತಿ ಮಾಡಿಕೊಳ್ಳಲಿಲ್ಲ, ಹಣ ಕೂಡಿಡಲಿಲ್ಲ. ಬದಲಿಗೆ ದೇಶದಲ್ಲಿ ಎಲ್ಲಾ ವಿಧದಲ್ಲಿಯೂ ಶೋಷಣೆಗೆ ಒಳಗಾದ ಸಮುದಾಯಗಳಿಗೆ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದರು. ಸಂವಿಧಾನದ ಮೂಲಕ ಸ್ವಾಭಿಮಾನ ಮತ್ತು ಸ್ವಾವಲಂಬಿ ಬದುಕನ್ನು ಕಲ್ಪಿಸಿಕೊಟ್ಟರು. ಒಂದು ವೇಳೆ ಅಂಬೇಡ್ಕರ್ ಎಂಬ ಮಹಾನ್ ಚೇತನ ಇಲ್ಲದೇ ಹೋಗಿದ್ದರೇ ದೇಶದ ಎಲ್ಲಾ ಸಮುದಾಯಗಳ ಮಹಿಳೆಯರೂ ಸೇರಿದಂತೆ ದೇಶದ ತಬ್ಬಲಿ ಸಮುದಾಯಗಳು ಘನತೆಯಿಂದ ಬದುಕಲು ಸಾಧ್ಯವಾಗುತ್ತಿರಲಿಲ್ಲ ಎಂದರು.

ಶಿಕ್ಷಣ, ಸಂಘಟನೆ, ಹೋರಾಟ ಎಂಬ ಧ್ಯೇಯಗಳ ಕಾರಣದಿಂದ ಅಂಬೇಡ್ಕರ್ ಅವರನ್ನು ಇಡೀ ವಿಶ್ವವೇ ಗೌರವಿಸುತ್ತಿದೆ. ಅಂಬೇಡ್ಕರ್ ಅವರ ಅನುಯಾಯಿಗಳು ಅವರ ಆಶಯಗಳನ್ನು ಪಾಲಿಸುವ ಮೂಲಕ ಸಮಾನತೆಯ ಭೀಮರಥವನ್ನು ಮುನ್ನಡೆಸಬೇಕು ಎಂದು ಸಲಹೆ ನೀಡಿದರು.

ನಂತರ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿದ್ದರೂ ಇನ್ನೂ ಅಸಮಾನತೆ, ಶೋಷಣೆ, ದಬ್ಬಾಳಿಕೆ ಹೋಗಿಲ್ಲ. ಶೋಷಿತರನ್ನು ಸಂವಿಧಾನ ರಕ್ಷಾ ಕವಚದಂತೆ ರಕ್ಷಿಸುತ್ತಿದೆ. ಸಂವಿಧಾನ ಸರ್ವಧರ್ಮೀಯರು ಸಮಾನವಾಗಿ ಬಾಳುವ ಹಕ್ಕು ನೀಡಿದೆ. ಸಂವಿಧಾನ ಅನುಸರಿಸಿ, ಎಲ್ಲರೂ ಪರಸ್ಪರ ಪ್ರೀತಿ–ಗೌರವದಿಂದ ಬಾಳಬಹುದಾಗಿದೆ. ಪ್ರತಿಯೊಬ್ಬರೂ ಸಂವಿಧಾನವನ್ನು ಅಭ್ಯಾಸ ಮಾಡಬೇಕು. ಮುಖ್ಯವಾಗಿ ಸಂವಿಧಾನ ಪೀಠಿಕೆಯ ಆಶಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಯಾವುದೇ ಜಾತಿ, ಧರ್ಮ ಮುಖ್ಯವಲ್ಲ ಮಾನವೀಯ. ಧರ್ಮ ಮುಖ್ಯ ಎಂಬುದನ್ನು ಅರಿಯಬೇಕು ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ 'ಭೀಮ್ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ನಿವೃತ್ತ ಆರ್‌ಟಿಒ ಅಧಿಕಾರಿ ಮಹಮದ್ ಇಕ್ಬಾಲ್, ಸೇನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಸ್. ಸರ್ವೇಶ್, ಗೌರವಾಧ್ಯಕ್ಷ ಬಿ.ವಿ. ಶಿವಕುಮಾರ, ರಾಜ್ಯ ಉಸ್ತುವಾರಿ ಜಿ.ಎನ್. ದೇವದತ್ತ, ಯುವ ಘಟಕದ ಅಧ್ಯಕ್ಷ ಸಿ. ಮೋಹನಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಪದ್ಮಾವತಿ, ಉಪಾಧ್ಯಕ್ಷರಾದ ಎಂ.ಎಸ್. ವೈರಮುಡಿ, ಎಸ್.ಅಶೋಕ್, ಪ್ರಧಾನ ಕಾರ್ಯದರ್ಶಿ ಬಿ.ಡಿ.ಮಾದೇಶ, ಕಾರ್ಯದರ್ಶಿಗಳಾದ ಎಂ.ಅಶೋಕ, ಸದಾಕುಮಾರ್,. ಖಜಾಂಚಿ ನಾಗರಾಜು, ಸಂಘಟನಾ ಕಾರ್ಯದರ್ಶಿಗಳಾದ ವಿ.ಎಂ.ಮಲ್ಲೇಶ್, ಡಿ. ರವಿಚಂದ್ರ, ನಿರ್ದೇಶಕರಾದ ಕೆ.ಸಿ.ಸಿದ್ದರಾಜು, ಬಾಲರಾಜು, ಡಿ. ಶಿವಣ್ಣ, ಜಿಲ್ಲಾಧ್ಯಕ್ಷ ಜಗದೀಶ್, ನಗರ ಜಿಲ್ಲಾಧ್ಯಕ್ಷ ಮಹಮದ್ ಶಫಿ, ನಗರಾಧ್ಯಕ್ಷ ಎಂ. ಪ್ರಭಾಕರ್ ಸಾಹಿತಿ, ಉಪಾಧ್ಯಕ್ಷರಾದ ಬಸವರಾಜು, ಕುಮಾರ್, ಮಹಮದ್ ಯೂನಿಸ್ ಉಪಸ್ಥಿತರಿದ್ದರು.

ಕಲಿಕೆ ಎಜುಕೇಷನ್ ಟ್ರಸ್ಟ್‌ನಿಂದ ಆರೋಗ್ಯ ತಪಾಸಣಾ ಶಿಬಿರ




ಶಾಸಕ ಜಿ.ಟಿ.ದೇವೇಗೌಡರು ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿದರು.

ಮೈಸೂರು, ಫೆ.24–ಮೈಸೂರಿನ ವಿಜಯನಗರ 4ನೇ ಹಂತದ ಕಲಿಕೆ ಎಜುಕೇಷನ್ ಟ್ರಸ್ಟ್, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಹಾಗೂ ಕೆವಿಸಿ ಆಸ್ಪತ್ರೆಯ ಸಹಯೋಗದೊಂದಿಗೆ ಭಾನುವಾರ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ ರಕ್ತದೊತ್ತಡ, ಸಕ್ಕರೆ ಕಾಯಿಲೆ ಹಾಗೂ ಕಣ್ಣಿಗೆ ಸಂಬಂಧಪಟ್ಟ ಕಾಯಿಲೆಗಳಿಗೆ ತಜ್ಞ ವೈದ್ಯರುಗಳಿಂದ ಸಲಹೆ, ಸೂಚನೆ ನೀಡಲಾಯಿತು. ಶಿಬಿರಕ್ಕೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕಲಿಕೆ ಎಜುಕೇಷನ್ ಟ್ರಸ್ಟ್‌ನ ಸಂಸ್ಥಾಪಕ ಮದಕರಿ ನಾಯಕ ಸಾರಥ್ಯದಲ್ಲಿ ಇದೊಂದು ಅರ್ಥಪೂರ್ಣ ಕಾರ್ಯಕ್ರಮ, ಇದರಿಂದ ಅನೇಕ ಬಡ ಹಾಗೂ ಮಧ್ಯಮ ಕುಟುಂಬದ ರೋಗಿಗಳಿಗೆ ಅನುಕೂಲವಾಗಿದೆ ಎಂದು ಶ್ಲಾಘಿಸಿದರು. ನಂಜನಗೂಡು ವಿಧಾನ ಸಭಾ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ಶುಭ ಹಾರೈಸಿದರು. ಶಿಬಿರದಲ್ಲಿ ನೂರಕ್ಕೂ ಅಧಿಕ ಜನರು ಭಾಗಿಯಾಗಿ ಇದರ ಸದುಪಯೋಗಪಡೆದುಕೊಂಡರು. ವೇದಿಕೆಯಲ್ಲಿ ಕಲಿಕೆ ಎಜುಕೇಷನ್ ಟ್ರಸ್ಟ್ ಸಂಸ್ಥಾಪಕ ಮದಕರಿ ನಾಯಕ, ಅಮೂಲ್ಯ ಹಾಗೂ ಒಂದು ಹೆಜ್ಜೆ ರಕ್ತದಾನಿಗಳ ಬಳಗದ ಅಧ್ಯಕ್ಷ ರಕ್ತದಾನಿ ಮಂಜು ಹಾಗೂ ಇತರರು ಉಪಸ್ಥಿತರಿದ್ದರು.

ಕನ್ನಡಿಗರ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಗೂಂಡಾ ಕಾಯ್ದೆಗೆ ಆಗ್ರಹ



ರಾಮಲಿಂಗಾರೆಡ್ಡಿ

ಬೆಳಗಾವಿ, ಫೆ.24– ಕರ್ನಾಟಕದ ಬಸ್ ಚಾಲಕರು, ನಿರ್ವಾಹಕರ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಗೂಂಡಾ ಕಾಯ್ದೆ ಹಾಕಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಕನ್ನಡದಲ್ಲಿ ಮಾತನಾಡಿ ಎಂದ ವಿಚಾರಕ್ಕೆ ದುಷ್ಕರ್ಮಿಗಳು ಕಂಡಕ್ಟರ್ ಮೇಲೆ ಹಲ್ಲೆ ಮಾಡಿದ್ದರು. ಈ ಹಿನ್ನೆಲೆ ಇಂದು ಬೆಳಗಾವಿಗೆ ಭೇಟಿ ನೀಡಿದ್ದ ಸಚಿವರು ಹಲ್ಲೆಗೊಳಗಾದ ಕಂಡಕ್ಟರ್ ಆರೋಗ್ಯ ವಿಚಾರಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಂಡಕ್ಟರ್ ಆರೋಗ್ಯ ಸ್ಥಿರವಾಗಿದೆ. ಎರಡು ದಿನಗಳಲ್ಲಿ ಮನೆಗೆ ಕಳುಹಿಸುತ್ತಾರೆ. ನಮ್ಮ ಎಂಡಿ ಅವರು ಪ್ರತಿದಿನ ಬಂದು ಯೋಗಕ್ಷೇಮ ವಿಚಾರಿಸುತ್ತಿದ್ದಾರೆ. ಗಲಾಟೆಯಾದ ಬಳಿಕ ಕೇಸ್ ಕೊಟ್ಟಿದ್ದಕ್ಕೆ ಗಾಬರಿಯಾಗಿದ್ದಾರೆ. ಏನೇ ಕೇಸ್ ಮಾಡಲಿ ತನಿಖೆ ಮಾಡುತ್ತಾರೆ ಎಂದು ಹೇಳಿದರು. ಆ ಬಸ್‌ನಲ್ಲಿ ಅಂದು 90 ಜನ ಇದ್ದರು. ಕರ್ನಾಟಕದಲ್ಲಿ 1,72,000 ಟ್ರಿಪ್ ಇರುತ್ತದೆ. ಉದ್ದೇಶಪೂರ್ವಕವಾಗಿ ಕೇಸ್ ಕೊಟ್ಟಿದ್ದಾರೆ. ನಾನು ಗೃಹಮಂತ್ರಿಗಳ ಜೊತೆಗೆ ಮಾತನಾಡುತ್ತೇನೆ. ಕಂಡಕ್ಟರ್ ಮಹದೇವಪ್ಪ ಪರವಾಗಿ ನಮ್ಮ ಇಲಾಖೆ ಇದೆ. ಸಾರ್ವಜನಿಕರೂ ಇದ್ದಾರೆ ಎಂದು ನುಡಿದರು.

ಚಿತ್ರದುರ್ಗದಲ್ಲಿ ನಮ್ಮವರು ಮಸಿ ಬಳಿದರು, ಅದರ ಮಾರನೇ ದಿನ ಮಹಾರಾಷ್ಟ್ರದವರು ಮಸಿ ಬಳಿದರು. ಎರಡೂ ರಾಜ್ಯಕ್ಕೆ ಇದರಿಂದ ನಷ್ಟ ಆಗುತ್ತದೆ. ಸಾರ್ವಜನಿಕರಿಗೂ ತೊಂದರೆ ಹಾಗೂ ಇಲಾಖೆಗೂ ನಷ್ಟ ಆಗುತ್ತದೆ. ಶಿವಸೇನೆಯಂತಹ ಪಕ್ಷ ಇಂತಹ ಕೆಲಸಗಳಿಗೆ ಬೆಂಬಲ ನೀಡಬಾರದು. ಇದೊಂದು ಸಣ್ಣ ಕಾರಣಕ್ಕೆ ಆಗಿದೆ. ಶಿವಸೇನೆಯವರು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು ಎಂದರು.

ಕರ್ನಾಟಕ ಕೇಸರಿ ಪ್ರಶಸ್ತಿ



ಮೈಸೂರಿನ ಪುರಭವನದಲ್ಲಿ ಭಾನುವಾರ ನಡೆದ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ 2ನೇ ವರ್ಷದ ವಾರ್ಷಿಕೋತ್ಸವದಲ್ಲಿ ರದೀವುಲ್ಲಾ ಖಾನ್ ಅವರ ಸೇವಾ ಕ್ಷೇತ್ರದಲ್ಲಿನ ಸಾಧನೆಗಾಗಿ 'ಕರ್ನಾಟಕ ಕೇಸರಿ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಫೆ.26ರಂದು ಶಿವರಾತ್ರಿ ಉತ್ಸವ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ

ಮೈಸೂರು, ಫೆ. 24– ಸಮೃದ್ಧಿ ಟ್ರಸ್ಟ್, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಹಾಗೂ ಜೆಸಿಐ ಮೈಸೂರು ಕಿಂಗ್ಸ್ ಲೇಡೀಸ್ ವಿಂಗ್ಸ್ ವತಿಯಿಂದ ಮಹಾಶಿವರಾತ್ರಿ ಅಂಗವಾಗಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಫೆ.26ರಂದು ಬೆಳಗ್ಗೆ 9 ಗಂಟೆಗೆ ಆಯೋಜಿಸಲಾಗಿದೆ. ಮಾಹಿತಿಗೆ 9591350267 ಸಂಪರ್ಕಿಸಿ ಸ್ಪರ್ಧೆಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಟ್ರಸ್ಟ್ ಅಧ್ಯಕ್ಷರಾದ ಸಹನಗೌಡ ತಿಳಿಸಿದ್ದಾರೆ.

ಕಾನೂನಿನ ಅರಿವು ಎಲ್ಲರಿಗೂ ಮುಖ್ಯ

ಮಹಿಳೆ ಮತ್ತು ಕಾನೂನು ವಿಚಾರ ಸಂಕಿರಣ



ಮೈಸೂರಿನ ಟಿ.ಕೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮಹಿಳೆ ಮತ್ತು ಕಾನೂನು ವಿಶೇಷ ವಿಚಾರಸಂಕಿರಣದಲ್ಲಿ ಪ್ರೌಢ ಉಪನ್ಯಾಸ ನೀಡಿದ ಹಿರಿಯ ವಕೀಲ ಕೆ.ಆರ್.ಶಿವಶಂಕರ್ ಅವರನ್ನು ಹಿರಿಯ ಉದ್ಯಮಿ ಶ್ರೀಹರಿ ಸನ್ಮಾನಿಸಿದರು. ಮಂಜುನಾಥ್, ಚಂದ್ರಶೇಖರ್, ಸವಿತಾ, ಅಂಜಲಿ ಇತರರು ಇದ್ದರು.

ಮೈಸೂರು, ಫೆ.24–ಕಾನೂನು ಅರಿವು ಎಂಬುದು ಎಲ್ಲರಿಗೂ ಮುಖ್ಯ. ಅದರಲ್ಲೂ ಮಹಿಳೆಯರು ಕಾನೂನಿನ ಬಗ್ಗೆ ಸಮಗ್ರ ಜ್ಞಾನ ಹೊಂದಿರುವುದು ಇಂದು ಅತ್ಯಂತ ಅವಶ್ಯಕ ಎಂದು ಹಿರಿಯ ನ್ಯಾಯವಾದಿ ಕೆ.ಆರ್. ಶಿವಶಂಕರ್ ಹೇಳಿದರು.

ಮೈಸೂರಿನ ಟಿ.ಕೆ.ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಸಭಾಂಗಣದಲ್ಲಿ ಭಾನುವಾರ ಬೆಳಗ್ಗೆ ವಿಪ್ರ ಪ್ರೊಫೆಷನಲ್ ಫೋರಂನ ಮಹಿಳಾ ವಿಭಾಗ ಮತ್ತು ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್ ಸಂಯುಕ್ತವಾಗಿ ಹಮ್ಮಿಕೊಂಡಿದ್ದ 'ಮಹಿಳೆ ಮತ್ತು ಕಾನೂನು' ವಿಚಾರ ಸಂಕಿರಣದ ಶಿಖರೋಪನ್ಯಾಸ ಮಾಡಿ ಅವರು ಮಾತನಾಡಿದರು.

ಜ್ಞಾನ ಮತ್ತು ಅದರ ಮೂಲಕ ಪಡೆಯುವ ಅರಿವಿಗೆ ಸರಿಸಮನಾದದ್ದು ಜಗತ್ತಿನಲ್ಲಿ ಯಾವುದೂ ಇಲ್ಲ. ಆಧುನಿಕ ಕಾಲಘಟ್ಟದಲ್ಲಿ ಎದುರಾಗುವಂತಹ ಹಲವು ರೀತಿಯ ಸಮಸ್ಯೆ, ಶೋಷಣೆ ದೌರ್ಜನ್ಯ ಮತ್ತು ಸಂದಿಗ್ಧ ಪರಿಸ್ಥಿತಿಗಳನ್ನು ಸಮರ್ಥವಾಗಿ ಎದುರಿಸಲು ಮಹಿಳೆಯರು ಕಾನೂನು ಸುವ್ಯವಸ್ಥೆ ಬಗ್ಗೆ ಜ್ಞಾನ ಹೊಂದಿರಬೇಕು ಎಂದು ಸಲಹೆ ನೀಡಿದರು.

ವಿಪ್ರ ಪ್ರೊಫೆಷನಲ್ ಫೋರಂ ಅಧ್ಯಕ್ಷ ಹಾಗೂ ಹಿರಿಯ ಉದ್ಯಮಿ ಯೋಗಾತ್ಮ ಶ್ರೀಹರಿ, ಮಹಿಳಾ ಘಟಕದ ಅಧ್ಯಕ್ಷೆ ಸವಿತಾ, ವಕೀಲ ಚಂದ್ರಶೇಖರ್, ಶ್ರೀ ಶಾರದಾ ಪಬ್ಲಿಕ್ ಸ್ಕೂಲ್ ಸಿಇಒ ಮಂಜುನಾಥ್ ಶ್ರೀವತ್ಸ, ಉದ್ಯಮಿ ಅಂಜಲಿ, ಶಿವಶಂಕರ್ ಇತರರು ಹಾಜರಿದ್ದರು.

ಮಾನವನ ಬಹುದೊಡ್ಡ ನಿಧಿ ಆಧ್ಯಾತ್ಮ

ಸಂಸ್ಕೃತಿಯ ಚಿಂತಕ ಯುವ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಅಭಿಮತ



ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಸಂಸ್ಕೃತಿ ಚಿಂತಕ ಯುವ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಉದ್ಘಾಟಿಸಿದರು.

ಮೈಸೂರು, ಫೆ. 24– ಮಾನವನ ಬಹುದೊಡ್ಡ ನಿಧಿ ಆಧ್ಯಾತ್ಮ. ಆಧ್ಯಾತ್ಮ ಜೀವನದಿಂದ ಮಾತ್ರವೇ ಉನ್ನತ ಶ್ರೇಯಸ್ಸು, ಶಾಂತಿ ನೆಮ್ಮದಿ ಕಾಣಬಹುದು ಜೊತೆಗೆ ಜೀವನ ಮೌಲ್ಯಯುತವಾಗಿರುತ್ತದೆ ಎಂದು ಸಂಸ್ಕೃತಿ ಚಿಂತಕ ಯುವ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು 89ನೇ ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಅಂಗವಾಗಿ ಹುಣಸೂರು ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದ ಮುಂಭಾಗ ಏರ್ಪಡಿಸಿರುವ ಜ್ಞಾನವಿಜ್ಞಾನ ದಿವ್ಯ ದರ್ಶನ ಮೇಳದಲ್ಲಿ ಭಾರತ ಯುವಕರು ಆಧ್ಯಾತ್ಮ ಮತ್ತು ರಾಷ್ಟ್ರೀಯ ಮೌಲ್ಯಗಳು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಭಾರತ ಆಧ್ಯಾತ್ಮದ ಸ್ವರ್ಗ ಮತ್ತು ಪುಣ್ಯ ಭೂಮಿ. ಭಾರತವನ್ನು ಇಡೀ ಜಗತ್ತು ಪವಿತ್ರ ನಾಡು ಎಂದೇ ಕರೆದಿದೆ. ಸಂಸ್ಕೃತಿ ಪರಂಪರೆ ಹಾಗೂ ಯೋಗದ ವಿಶ್ವ ಶ್ರೇಷ್ಠ ಮೌಲ್ಯಗಳ ಆಗರವಾಗಿದೆ. ಜ್ಞಾನವನ್ನು ಜಗತ್ತಿಗೆ ನೀಡಿದ ಮಹಾನ್ ದೇಶದ ಇತಿಹಾಸವನ್ನು ಯುವಕರು ಮತ್ತು ವಿದ್ಯಾರ್ಥಿಗಳಿಗೆ ತಲುಪಿಸುವಲ್ಲಿ ನಾವೆಲ್ಲರೂ ವಿಫಲರಾಗಿದ್ದೇವೆ. ಆ ಕಾರ್ಯವನ್ನು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಅಕ್ಕಂದಿರು ಅಣ್ಣಂದಿರು ಮಾಡುತ್ತಿರುವ ನಿರಪೇಕ್ಷಿತ ಸೇವೆ ಶ್ಲಾಘನೀಯವಾದದ್ದು ಎಂದರು.

ನಾಡಿನ ಅನೇಕ ಸಂಘಟನೆಗಳು ಯುವಕರು ಮತ್ತು ವಿದ್ಯಾರ್ಥಿಗಳಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ, ಆಧ್ಯಾತ್ಮ ಮತ್ತು ಮೌಲ್ಯಗಳ ಅರಿವನ್ನು ಉಂಟು ಮಾಡುವುದರ ಜೊತೆಗೆ ಅನುಷ್ಠಾನಗೊಳಿಸುವ ಕಡೆಗೆ ವಿಶೇಷ ಗಮನವನ್ನು ಹರಿಸಬೇಕಾಗಿದೆ. ಜಾತ್ರೆಗಳು ಉತ್ಸವಗಳು, ಮಹೋತ್ಸವಗಳು ಹಬ್ಬಗಳು, ವಿಚಾರಪೂರಿತ ಉಪನ್ಯಾಸಗಳ ಮೂಲಕ ತಿಳಿಸುವ ಕಾರ್ಯವನ್ನು ಮಾಡಬೇಕಿದೆ ಎಂದರು. ಯುವಕರು ಆಧ್ಯಾತ್ಮವನ್ನು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕು. ಆಧ್ಯಾತ್ಮವೆಂದರೆ ಸನ್ಯಾಸಿಯಾಗುವುದಲ್ಲ, ಜೀವನವನ್ನು ಬದಲಾಯಿಸುವ ಹಾಗೂ ನಿಯಂತ್ರಿಸುವ ಮೂಲಕ ವ್ಯಕ್ತಿಯನ್ನು ಶಾಶ್ವತವಾಗಿ ತೃಪ್ತ ಜೀವನ ಅನುಭವಿಸಿ ಸಾಧನೆ ಮಾಡಲು ಪ್ರೇರೇಪಿಸುವ ಶಕ್ತಿ ತುಂಬುವ ಮಹಾನ್ ಅಂಶವಾಗಿದೆ. ವ್ಯಕ್ತಿಯಲ್ಲಿ ಶಾಂತ ಮನಸ್ಥಿತಿಯ ನಿರ್ಮಾಣ, ಸಹೃದಯ ಶ್ರೀಮಂತಿಕೆಯ ಭಾವ ಹಾಗೂ ಸರ್ವರನ್ನು ಸಮಭಾವದಿಂದ ಕಂಡು ಶಕ್ತಿಯಾಗಿ ಸಮಾಜವನ್ನು ರೂಪಿಸುವ ದೃಢ ನಿಶ್ಚಯವನ್ನು ನಾವೆಲ್ಲರೂ ಮಾಡಬೇಕಾಗಿದೆ.

ಹೆಣ್ಣು ಹೊನ್ನು ಮಣ್ಣು ಆಸೆ ಪಡದೆ ದುರಾಸೆಯಿಂದ ನಮ್ಮ ಜೀವನವನ್ನು ನಿಶಕ್ತವಾಗಿ ಮಾಡಿಕೊಳ್ಳಬಾರದು. ಯುವಕರು ವ್ಯಸನಗಳಿಗೆ ದಾಸರಾಗದೆ ಶ್ರೇಷ್ಠ ಪರಂಪರೆಯಾದ ಸಂಸ್ಕೃತಿ ಆಧ್ಯಾತ್ಮ ,ಪರಂಪರೆ ದೇಶದ ನಿಜವಾದ ಇತಿಹಾಸವನ್ನು ಅರಿಯುವ ಮೂಲಕ ಆತ್ಮ ಗೌರವದ ಭಾರತವನ್ನು ಹೆಮ್ಮೆಯ ಭಾರತವನ್ನಾಗಿ ರೂಪಿಸಿ ಜಗತ್ತಿಗೆ ಹಾಗೂ ವಿಶ್ವ ಸಮಾಜಕ್ಕೆ ನಮ್ಮ ಕೊಡುಗೆಯನ್ನು ನೀಡುವ ಅನಿವಾರ್ಯವಿದೆ. ಭಾರತದ ಯುವಶಕ್ತಿ ಆ ಕಾರ್ಯದಲ್ಲಿ ಸಾಗಬೇಕಿದೆ ಎಂದು ತಿಳಿಸಿದರು. ಪ್ರಾಸ್ತಾವಿಕವಾಗಿ ಮೈಸೂರಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಂಗನಾಥಣ್ಣ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಶಾರದಕ್ಕನವರು, ಬಿಕೆ ಆರಾಧ್ಯ ಮುಂತಾದವರು ಉಪಸ್ಥಿತರಿದ್ದರು.

ಲಾಭಾಂಶ ಹೆಚ್ಚಳ ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಮದ್ಯ ಮಾರಾಟಗಾರರ ಆಗ್ರಹ

ಮೈಸೂರು, ಫೆ. 24(ಜಿಎ)–ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಠ ಶೇ.20ರಷ್ಟು ಲಾಭಾಂಶ ನೀಡಿ, ಹೆಚ್ಚುವರಿ ಅಬಕಾರಿ ಶುಲ್ಕ ಕಡಿಮೆ ಮಾಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘ ಆಗ್ರಹಿಸಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎಸ್.ಗುರುಸ್ವಾಮಿ ಮಾತನಾಡಿ, ಮದ್ಯ ವರ್ತಕರ ಸಮಸ್ಯೆಗಳ ಕುರಿತು ಕಳೆದ 20 ವರ್ಷಗಳಿಂದ ಹೋರಾಟ ಮಾಡುತ್ತಿದ್ದು, ಈವರೆಗೂ ಯಾವುದೇ ಬೇಡಿಕೆ ಈಡೇರಿಲ್ಲ. ಕೇವಲ ರಾಜ್ಯ ಸರ್ಕಾರ ಆದಾಯದ ಬಗ್ಗೆ ಮಾತ್ರ ಗಮನ ಹರಿಸಿ, ವ್ಯಾಪಾರಸ್ಥರನ್ನು ಕಡೆಗಣಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮೊದಲು ವರ್ತಕರಿಗೆ ಶೇ.20ರಷ್ಟು ಲಾಭಾಂಶ ನೀಡಲಾಗುತ್ತಿತ್ತು. ಆದರೆ, ಈಗ ಕೇವಲ ಶೇ.10 ಮಾತ್ರ ನೀಡುತ್ತಿದ್ದಾರೆ. ನಾವು ಅಂಗಡಿ ಬಾಡಿಗೆ ಕಟ್ಟಬೇಕು, ಕೆಲಸಗಾರರಿಗೆ ಸಂಬಳ ನೀಡಬೇಕಾಗಿದೆ ಜೊತೆಗೆ ಅಂಗಡಿ ನಿರ್ವಹಣೆಯ ಹೊರೆ ಹಾಗೂ ಅಧಿಕಾರಿಗಳಿಗೆ ಲಂಚ ನೀಡಬೇಕಿರುವುದರಿಂದ ಶೇ.10ರಷ್ಟು ಲಾಭಾಂಶ ಯಾವುದಕ್ಕೂ ಸಾಲುತ್ತಿಲ್ಲ. ಈ ಹಿಂದೆ ಇದ್ದ ರೀತಿ ಶೇ.20ರಷ್ಟು ಲಾಭಾಂಶ ನೀಡಬೇಕು ಎಂದು ಆಗ್ರಹಿಸಿದರು.

ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಮ್ಮ ಬೇಡಿಕೆಗಳಾದ ಸನ್ನದು ಶುಲ್ಕವನ್ನು ಹೆಚ್ಚಳ ಮಾಡಬಾರದು. ಸಿಎಲ್–2 ಪಾನೀಕರಿಗೆ ಮದ್ಯ ಸೇವಿಸಲು ಅವಕಾಶ, ಸಿಎಲ್–7 ಅಥವಾ ಇನ್ನಿತರ ದೊಡ್ಡ ಹೋಟೆಲ್‌ಗಳಿಗೆ ಹೋಗಿ ಮದ್ಯದೊಂದಿಗೆ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ದುಬಾರಿ ಖರ್ಚು ಮಾಡಲು ಸಾಧ್ಯವಿಲ್ಲದ ಬಡ ವರ್ಗದ ಗ್ರಾಹಕರಿಗೆ ಅನುಕೂಲವಾಗುವಂತೆ ಷರತ್ತನ್ನು ಸಡಿಲಿಸುವಂತೆ ಹಾಗೂ ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಕರ್ತವ್ಯ ನಿರ್ವಹಿಸದಂತೆ ಅಬಕಾರಿ ಗಾರ್ಡ್, ಡ್ರೈವರ್, ಸಬ್‌ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್ ಸೇರಿದಂತೆ ವಿವಿಧ ಅಧಿಕಾರಿಗಳು ಕಾನೂನು ತಿದ್ದುಪಡಿಗೆ ಕ್ರಮಕೈಗೊಳ್ಳಬೇಕು ಎಂಬ ವಿವಿಧ ಬೇಡಿಕೆಗಳನ್ನು ತಿಳಿಸಿದ್ದು, ಅವರು ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ಆದರೆ, ಅಧಿಕಾರಿಗಳು ಕಾರ್ಯರೂಪಕ್ಕೆ ತರಬೇಕಿದೆ ಎಂದರು. ಕೆಲವು ವರ್ಷಗಳಲ್ಲಿ ಸನ್ನದುಗಳ ಸಂಖ್ಯೆ ಮಾತ್ರ ಹೆಚ್ಚಳ ಆಗಿರುವುದನ್ನು ಬಿಟ್ಟರೆ ಮದ್ಯ ಮಾರಾಟ ಗಣನೀಯವಾಗಿ ವೃದ್ಧಿಯಾಗಿಲ್ಲ. ಇದರಿಂದಾಗಿ ಲಾಭ ಬರುತ್ತಿಲ್ಲ. ಹೀಗಾಗಿ ಯಾವುದೇ ಕಾರಣಕ್ಕೂ ಸನ್ನದು ಶುಲ್ಕವನ್ನು ಹೆಚ್ಚಳ ಮಾಡಬಾರದು. ಕೆಲವೊಂದು ಏಲಂ ಮಾಡುವ ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿದೆ. ಆದರೆ ಈ ರೀತಿ ಕ್ರಮ ಕೈಗೊಳ್ಳಬಾರದು. ಹಲವರಿಗೆ ಲಂಚ ನೀಡಬೇಕಾಗಿಬಂದಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಲಕ್ಷ್ಮಣ್, ಕೆ.ಎಸ್.ಮುರಳಿ, ಎಂ.ಶ್ರೀನಿವಾಸ್, ಕೆ.ಪಿ.ಪರಮೇಶ್, ಭಾಸ್ಕರ್ ಎಲ್.ಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೂರು ತಿಂಗಳೊಳಗೆ ಇ-ಖಾತಾ ಅಭಿಯಾನ ಪೂರ್ಣ

ಶಾಸಕ ರವಿ ಗಣಿಗ

ಮಂಡ್ಯ,ಫೆ.24– ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಖಾತಾ ನೀಡುವ ಅಭಿಯಾನ ಕೈಗೊಂಡಿದ್ದು, ತಲಾ ಎಂಟು ವಾರ್ಡ್‌ಗೊಂದರಂತೆ ಇ-ಖಾತಾ ಸೆಂಟರ್‌ಗಳನ್ನು ತೆರೆದು, ವಾರ್ಡ್‌ವಾರು ಮೂರು ತಿಂಗಳೊಳಗೆ ಬಾಕಿ ಉಳಿದಿರುವ ಇ-ಖಾತಾ ಅಭಿಯಾನ ಪೂರ್ಣಗೊಳಿಸಲಾಗುವುದು ಎಂದು ಶಾಸಕ ರವಿಕುಮಾರ್‌ಗೌಡ ಗಣಿಗ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಶಾಸಕ ರವಿ ಗಣಿಗ.

ಸೋಮವಾರ ನಗರಸಭೆ ಆವರಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಾರ್ವಜನಿಕರು ಈ ಮೊದಲು ಇ-ಖಾತಾ ಮಾಡಿಸಿಕೊಳ್ಳಲು ನಗರ ಸಭೆಗೆ ಅಲೆಯಬೇಕಾಗಿತ್ತು. ಈ ಸಮಸ್ಯೆ ಪರಿಹರಿಸುವ ಸಲುವಾಗಿ ಸರ್ಕಾರ ಇ-ಖಾತಾ ಅಭಿಯಾನ ಹಮ್ಮಿಕೊಂಡಿದ್ದು, ಸರ್ಕಾರದ ಈ ಮಹತ್ವಾಕಾಂಕ್ಷೆ ಯೋಜನೆಯನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ನಗರದಲ್ಲಿ ಎಂಟು ವಾರ್ಡ್‌ಗೊಂದು ಇ-ಖಾತಾ ಕೇಂದ್ರವನ್ನು ತೆರೆಯಲಾಗುವುದು. ಆಯಾ ವಾರ್ಡ್‌ನ ಸ್ವತ್ತಿನ ಮಾಲೀಕರು ತಮ್ಮ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸಿ ಇ-ಖಾತಾ ಮಾಡಿಸಿಕೊಳ್ಳಬಹುದು ಎಂದರು. ನಿಯೋಜಿತ ಸಿಬ್ಬಂದಿಗಳು ಮಾಲೀಕರನ್ನು ಸುಖಾಸುಮ್ಮನೆ ಅಲೆಸಬಾರದು. ಒಂದು ವೇಳೆ ಅಲೆಸುವುದು ಕಂಡು ಬಂದರೆ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಇ-ಖಾತಾ ಅಭಿಯಾನದ ಕುರಿತು ಪ್ರಚಾರ ಮಾಡಲು ನಗರ ಸ್ಥಳೀಯ ಸಂಸ್ಥೆಗಳ ವಾಹನದಲ್ಲಿ ಮುದ್ರಿತ ಧ್ವನಿ ಮೂಲಕ ಪ್ರಚಾರ ಕಾರ್ಯ ನಡೆಸಲಾಗುತ್ತಿದ್ದು, ಮನೆ ಮನೆಗೂ ಕರಪತ್ರಗಳನ್ನು ಮುದ್ರಿಸಿ ಹಂಚಿಕೆ ಮಾಡಲಾಗಿದೆ. ಎಸ್‌ಎಂಎಸ್ ಮೂಲಕವೂ ಮಾಹಿತಿ ನೀಡಲಾಗುತ್ತಿದೆ. ಮಂಡ್ಯ ನಗರದಲ್ಲಿ 18 ರಿಂದ 20 ಸಾವಿರ ಇ-ಖಾತಾ ಬಾಕಿ ಉಳಿದಿದ್ದು, ಇವರೆಲ್ಲರೂ ಇ-ಖಾತಾ ಅಭಿಯಾನದ ಸದುಪಯೋಗ ಪಡೆದುಕೊಂಡು ಇ-ಖಾತಾ ಮಾಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ನಗರದ ಸೌಂದರ್ಯೀಕರಣ ಹೆಚ್ಚಿಸಲು 15 ಕೋಟಿ ರೂ. ವೆಚ್ಚದಲ್ಲಿ ವಿವಿಧ ಪ್ರಮುಖ ರಸ್ತೆಗಳ ಕಾಮಗಾರಿಗೆ ಟೆಂಡರ್ ಮುಗಿದಿದೆ. ನೂರಡಿ ರಸ್ತೆಯಲ್ಲಿರುವ ಕನ್ನಿಕಾ ಪರಮೇಶ್ವರಿ ದೇವಸ್ಥಾನದಿಂದ ಗೌರಿಶಂಕರ ಕಲ್ಯಾಣಮಂಟಪದವರೆಗೆ 3 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದರು.

ಮಹಾವೀರ ವೃತ್ತದಿಂದ ಹೊಸಹಳ್ಳಿ ಸರ್ಕಲ್ ವರೆಗೆ 4 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಿಂತನೆ ನಡೆಸಲಾಗಿದೆ. ಒಟ್ಟು ರಸ್ತೆ ಅಭಿವೃದ್ಧಿಗೆ 15 ಕೋಟಿ ರೂ. ವೆಚ್ಚದ ಟೆಂಡರ್ ಮುಗಿದಿದ್ದು, ಸದ್ಯದಲ್ಲೇ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಆಸ್ತಿಗಳ ಇ-ಖಾತಾ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು: ಆಸ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಮಾಲೀಕತ್ವ ಸಾಬೀತುಪಡಿಸುವ ನೋಂದಾಯಿತ ಮಾರಾಟ ಪತ್ರಗಳು, ದಾನಪತ್ರ, ವಿಭಾಗ ಪತ್ರಗಳು, ಸರ್ಕಾರ ಅಥವಾ ಸರ್ಕಾರದ ನಿಗಮ ಮಂಡಳಿಗಳಿಂದ ನೀಡಲಾದ ಹಕ್ಕು ಪತ್ರಗಳು, ಮಂಜೂರಾತಿ ಪತ್ರಗಳು, ಕಂದಾಯ ಇಲಾಖೆಯಿಂದ 94 ಸಿಸಿ ಅಡಿ ನೀಡಲಾದ ಹಕ್ಕುಪತ್ರ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ದೃಢೀಕೃತ ಪ್ರತಿ ಮತ್ತು ನಿವೇಶನಗಳ ಬಿಡುಗಡೆ ಪತ್ರ ಹಾಗೂ ಪ್ರಸಕ್ತ ಸಾಲಿನವರೆಗೆ ಋಣಭಾರ ಪ್ರಮಾಣ ಪತ್ರ, ಚಾಲ್ತಿ ಸಾಲಿನ ಆಸ್ತಿ ತೆರಿಗೆ ಪಾವತಿ ರಸೀದಿ, ಮಾಲೀಕರ ಫೋಟೋ ಮತ್ತು ಸ್ವತ್ತಿನ ಫೋಟೋವನ್ನು ಕಡ್ಡಾಯವಾಗಿ ಸಲ್ಲಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಅಧ್ಯಕ್ಷ ಎಂ.ವಿ. ಪ್ರಕಾಶ್ (ನಾಗೇಶ್), ಉಪಾಧ್ಯಕ್ಷ ಎಂ.ಪಿ.ಅರುಣ್ ಕುಮಾರ್, ಮಾಜಿ ಅಧ್ಯಕ್ಷ ಹೆಚ್.ಎಸ್.ಮಂಜು, ಮುಡಾ ಅಧ್ಯಕ್ಷ ನಯೀಂ, ನಗರಸಭೆ ಸದಸ್ಯರಾದ ಮಂಜುಳಾ ಉದಯ್‌ಶಂಕರ್, ಪೂರ್ಣಿಮಾ, ಗೀತಾ, ಶ್ರೀಧರ್, ನಗರಸಭೆ ಆಯುಕ್ತೆ ಪಂಪಶ್ರೀ ಹಾಜರಿದ್ದರು.

ಇರುವುದು ಒಂದೇ ಮಾನವ ಜಾತಿ, ಅನ್ಯಜಾತಿ ಭಗವಂತ ಒಪ್ಪಲಾರ

ರಾಜ್ಯ ಧಾರ್ಮಿಕ ಪರಿಷತ್ ಸದಸ್ಯ ಕೆ.ಎಂ.ನಾಗರಾಜು ಅಭಿಮತ

ಕಿಕ್ಕೇರಿ,ಫೆ.24– ಇರುವುದು ಒಂದೇ ಜಾತಿ, ಅದು ಮಾನವ ಜಾತಿಯಾಗಿದ್ದು, ಅನ್ಯಜಾತಿಗಳನ್ನು ಭಗವಂತ ಒಪ್ಪಲಾರ ಎಂದು ರಾಜ್ಯ ಧಾರ್ಮಿಕ ಪರಿಷತ್ ಸದಸ್ಯ ಕೆ.ಎಂ. ನಾಗರಾಜು ತಿಳಿಸಿದರು.

ಹೋಬಳಿಯ ಸಿದ್ದಾಪುರ ಗ್ರಾಮದಲ್ಲಿ ಭಾನುವಾರ ಲೋಕಾರ್ಪಣೆಗೊಂಡ ಯಲ್ಲಮ್ಮದೇವಿ ದೇಗುಲ, ದೇವಿಯ ನೂತನ ವಿಗ್ರಹ ಪ್ರತಿಷ್ಠಾಪನೆ, ವಿಮಾನ ಗೋಪುರ ಕಳಶ ಸ್ಥಾಪನೆ ಮಹೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡುತ್ತ, ಮುಜರಾಯಿ ದೇಗುಲದ ಹಣ ಅನ್ಯ ಮತೀಯ ದೇಗುಲ ಅಭಿವೃದ್ಧಿಗೆ ನೀಡುವ ವದಂತಿ ಶುದ್ಧ ಸುಳ್ಳು. ಕುಕ್ಕೆ ಸುಬ್ರಹ್ಮಣ್ಯ, ಮಹದೇಶ್ವರಬೆಟ್ಟದಂತಹ ಯಾವುದೇ ದೇಗುಲದ ಹಣವನ್ನು ಆಯಾ ದೇಗುಲದ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಟ್ಟಿದ್ದು, ಕ್ಷೇತ್ರದ ಅಭಿವೃದ್ಧಿಗೆ ಮಾತ್ರ ಮೀಸಲಿರಿಸಲಾಗಿದೆ. ಬೇರೆ ಧರ್ಮದ ಅಭಿವೃದ್ಧಿಗೆ ಬಳಸಲಾಗದು. ವದಂತಿ ಹಬ್ಬಿಸುವ ಸುಳ್ಳುಗಾರರನ್ನು ನಂಬದಿರಿ ಎಂದರು.

ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಮಾತನಾಡಿದರು. ಹಳ್ಳಿಕಾರ್ ತಳಿಯ ಗೋವುಗಳ ಮೆರವಣಿಗೆ, ಮಹಿಳೆಯರು ಪೂರ್ಣಕುಂಭ ಮೆರವಣಿಗೆಯೊಂದಿಗೆ ಗಣ್ಯರನ್ನು ಸ್ವಾಗತಿಸಲಾಯಿತು. ವಿವಿಧ ಪೂಜೆ, ಹೋಮ ಹವನಾದಿ, ವಿಮಾನ ಗೋಪುರ ಕಳಶ ಪ್ರತಿಷ್ಠಾಪನೆಯಂತಹ ಹಲವು ಪೂಜಾ ವಿಧಿ ವಿಧಾನಗಳು ಜರುಗಿದವು. ಮಹಾಮಂಗಳಾರತಿ, ತೀರ್ಥಪ್ರಸಾದ, ಅನ್ನ ದಾಸೋಹ ಹಮ್ಮಿಕೊಳ್ಳಲಾಗಿತ್ತು.

ಮಾಜಿ ಶಾಸಕ ಬಿ.ಪ್ರಕಾಶ್, ಮನ್‌ಮುಲ್ ಮಾಜಿ ಅಧ್ಯಕ್ಷ ಚನ್ನಿಂಗೇಗೌಡ, ತಾ.ಪಂ. ಮಾಜಿ ಸದಸ್ಯ ಗೂಡೆಹೊಸಹಳ್ಳಿ ಜವರಾಯಿಗೌಡ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾ. ಯೋಜನಾಧಿಕಾರಿ ಎಂ. ವೀರೇಶಪ್ಪ, ಕಿಕ್ಕೇರಮ್ಮ ಎಳನೀರು ವರ್ತಕರ ಸಂಘದ ಅಧ್ಯಕ್ಷ ಭಾರತೀಪುರ ಪುಟ್ಟಣ್ಣ, ಗ್ಯಾಸ್ ಶ್ರೀನಾಥ್, ಮಂಜೇಗೌಡ, ಕುಮಾರ್, ಸೋಮಶೇಖರ್, ರಂಗೇಗೌಡ ಇದ್ದರು.

ಅನುಚಿತ ವರ್ತನೆ ಆರೋಪ: ಎಸ್‌ಬಿಐ ಮ್ಯಾನೇಜರ್ ವಿರುದ್ಧ ರೈತಸಂಘದಿಂದ ಪ್ರತಿಭಟನೆ

ಭಾರತೀನಗರ,ಫೆ.24– ಇಲ್ಲಿಯ ಎಸ್‌ಬಿಐ ಮ್ಯಾನೇಜರ್ ಅನುಚಿತವಾಗಿ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿ ರೈತ ಮುಖಂಡರು ಬ್ಯಾಂಕ್ ಮುಂಭಾಗ ಪ್ರತಿಭಟನೆ ನಡೆಸಿದರು.



ಭಾರತೀನಗರದ ಎಸ್‌ಬಿಐ ಬ್ಯಾಂಕ್ ಮುಂಭಾಗ ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ಬ್ಯಾಂಕ್‌ನ ಮುಂಭಾಗ ಜಮಾಯಿಸಿದ ರೈತರು ಶಾಖಾ ಮ್ಯಾನೇಜರ್ ತಾಯಮಣಿ ಅವರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈತ ಮತ್ತು ಗ್ರಾಹಕರ ಜೊತೆ ಅನುಚಿತವಾಗಿ ಬ್ಯಾಂಕ್‌ನ ಮ್ಯಾನೇಜರ್ ವರ್ತಿಸುತ್ತಿದ್ದಾರೆಂದು ಆರೋಪಿಸಿದರು.

ರೈತ ಕಾರ್ಯಕರ್ತ ಪಟೇಲ್ ಬೋರೇಗೌಡ ಎಂಬುವವರು ಹೊಸ ಖಾತೆ ತೆರೆಯಲು ಬ್ಯಾಂಕ್‌ಗೆ ತೆರಳಿದ್ದ ಸಂದರ್ಭದಲ್ಲಿ ವಿಮೆ ಮಾಡಿಸಲೇಬೇಕೆಂದು ಒತ್ತಾಯ ಹೇರಿದ್ದರು. ಆದರೆ ರೈತ ಕಾರ್ಯಕರ್ತ ಬೋರೇಗೌಡ ಒಂದು ಸಾವಿರ ರೂಪಾಯಿಗಳನ್ನು ವಿಮೆ ಮಾಡಿಸಲು ಬಳಸುವಂತೆ ಹೇಳಿ ಖಾತೆ ತೆರೆಯಲು ಎರಡು ಸಾವಿರ ರೂಪಾಯಿಗಳನ್ನು ಬ್ಯಾಂಕ್‌ಗೆ ಜಮಾ ಮಾಡಿದ್ದರು.

ಆದರೆ ಒಂದು ಸಾವಿರ ರೂಪಾಯಿಯನ್ನು ಠೇವಣಿಗೆಯಾಗಿ ಬಳಸುವ ಬದಲು ಜಮಾ ಮಾಡಿದ್ದ ಎಲ್ಲಾ ಹಣವನ್ನು ವಿಮೆಯ ಹಣಕ್ಕೆ ಜಮೆ ಮಾಡಿಕೊಂಡಿದ್ದರು. ಇದರ ವಿರುದ್ಧ ಬೋರೇಗೌಡ ರೈತ ಮುಖಂಡರಿಗೆ ವಿಷಯ ತಿಳಿಸಿದ್ದು ಸ್ಥಳಕ್ಕೆ ಆಗಮಿಸಿದ ರೈತ ಮುಖಂಡರು ಬ್ಯಾಂಕ್ ಮ್ಯಾನೇಜರ್ ತಾಯಮಣಿ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗಿದರು.

ಗ್ರಾಹಕರು ಹಾಗೂ ರೈತರೊಡನೆ ಅನುಚಿತವಾಗಿ ವರ್ತಿಸುತ್ತಿರುವ ಬ್ಯಾಂಕ್ ಮೇನೇಜರ್ ಮುಂದಿನ ದಿನಗಳಲ್ಲಿ ಉತ್ತಮ ಬಾಂಧವ್ಯ ಬೆಳೆಸಿಕೊಂಡು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕೆಂದು ರಾಜ್ಯ ರೈತಸಂಘದ ವಿಭಾಗೀಯ ಕಾರ್ಯದರ್ಶಿ ಬೋರಾಪುರ ಶಂಕರೇಗೌಡ ಆಗ್ರಹಿಸಿದ್ದು ಇಲ್ಲದಿದ್ದಲ್ಲಿ ಉಗ್ರವಾದ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೈತಸಂಘದ ಜಿಲ್ಲಾ ಕಾರ್ಯದರ್ಶಿ ಜಿ.ಎಸ್.ಲಿಂಗಪ್ಪಾಜಿ, ಉಪಾಧ್ಯಕ್ಷ ಜಿ.ಎ.ಶಂಕರ್, ಖಜಾಂಚಿ ಶೆಟ್ಟಹಳ್ಳಿ ರವಿ ಕುಮಾರ್, ವರದರಾಜು, ತಾಲೂಕು ಅಧ್ಯಕ್ಷ ಉಮೇಶ್, ಗೌರವಾಧ್ಯಕ್ಷ ರಾಮಕೃಷ್ಣ ರಾಮೇಗೌಡ, ಭಾರತೀನಗರ ವೃತ್ತ ಘಟಕದ ಅಧ್ಯಕ್ಷ ಸಿದ್ದರಾಜು, ಕಾರ್ಯದರ್ಶಿ ದಯಾನಂದ, ಬನ್ನಹಳ್ಳಿ ರಮೇಶ, ಡಿಎಕೆರೆ ಮರಿಸ್ವಾಮಿ, ರಮೇಶ, ಕೆಂಪಣ್ಣ, ಸಿ.ಎ.ಕೆರೆ ಮಾದೇವ, ದೇಸಿಗೌಡ, ಪಟೇಲ್ ಬೋರೇಗೌಡ, ವೆಂಕಟೇಶ್, ಅಣ್ಣೂರು ಕೃಷ್ಣಪ್ಪ, ರಾಜೇಶ, ಸಾವಿತ್ರಮ್ಮ, ರಮ್ಯಾ, ಶಾಂತ, ರಾಜಮಣಿ, ಲಕ್ಷ್ಮಿ, ಮುಂತಾದವರು ಇದ್ದರು

ಮೂವರು ಖದೀಮರ ಬಂಧನ: ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ, ಬೆಳ್ಳಿ ಪದಾರ್ಥ ವಶ

ಮಂಡ್ಯ: ಪ್ರತ್ಯೇಕ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಗಳ್ಳತನ ಮಾಡುತ್ತಿದ್ದ ಇಬ್ಬರು ಹಾಗೂ ಮನೆಗೆ ಕನ್ನ ಹಾಕುತ್ತಿದ್ದ ಒಬ್ಬ ಖದೀಮನನ್ನು ಹಲಗೂರು ಹಾಗೂ ಬೆಳಕವಾಡಿ ಪೊಲೀಸರು ಬಂಧಿಸಿ, ಆರೋಪಿಗಳಿಂದ 465 ಗ್ರಾಂ ಚಿನ್ನಾಭರಣ, ಎರಡು ಕೆ.ಜಿ. ಬೆಳ್ಳಿ ಪದಾರ್ಥ ಹಾಗೂ ಎರಡು ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ ಅವರು ತಿಳಿಸಿದರು.



ನಗರದ ಜಿಲ್ಲಾ ಪೊಲೀಸ್ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, 2025ರ ಫೆ.9ರಂದು ಮದ್ದೂರಿನ ಪರಮೇಶ್ ಎಂಬವರು ತಮ್ಮ ಪತ್ನಿಯೊಂದಿಗೆ ಬೈಕ್‌ನಲ್ಲಿ ಮುಡುಕತೊರೆ ದೇವಸ್ಥಾನಕ್ಕೆ ಹೋಗುತ್ತಿದ್ದಾಗ ಮಳವಳ್ಳಿ–ಮುಟ್ಟನಹಳ್ಳಿ ರಸ್ತೆಯ ಕೋಣಕೊಪ್ಪಲು ಸಮೀಪ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಪರಮೇಶ್ ಅವರ ಪತ್ನಿಯ ಕುತ್ತಿಗೆಯಲ್ಲಿದ್ದ 3.20 ಲಕ್ಷ ಮೌಲ್ಯದ ಎರಡು ಎಳೆಯ ಮಾಂಗಲ್ಯ ಸರ, ನೆಕ್ಲೇಸ್ ಅನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಬೆಳಕವಾಡಿ ಪೊಲೀಸರು ತನಿಖೆ ಆರಂಭಿಸಿದ್ದರು ಎಂದರು.

ತನಿಖೆ ಕೈಗೊಂಡಿದ್ದ ಬೆಳಕವಾಡಿ ಪೊಲೀಸರು, ಮೂಲತಃ ಮಂಡ್ಯ ತಾಲೂಕು ಹೊಳಲು ಗ್ರಾಮದ ಹಾಲಿ ವಾಸ ಮೈಸೂರು ಜಿಲ್ಲೆ ಟಿ.ನರಸೀಪುರದ ಶೃಂಗಾರ್(25) ಹಾಗೂ ಕನ್ನಲಿ ಗ್ರಾಮದ ಎಸ್.ಚೇತನ್ (25) ಎಂಬವರನ್ನು ಬಂಧಿಸಿ ವಿಚಾರಣೆಗೊಳಪಡಿಸಲಾಗಿ, ಬೆಳಕವಾಡಿ, ಮೈಸೂರಿನ ಲಕ್ಷ್ಮೀಪುರಂ, ಆಲನಹಳ್ಳಿ, ವರುಣ, ಕುವೆಂಪುನಗರ, ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಒಂದು ಹಾಗೂ ನಜರ್‌ಬಾದ್ ಠಾಣೆ ವ್ಯಾಪ್ತಿಯಲ್ಲಿ ತಲಾ ಎರಡು ಪ್ರಕರಣ ಇವರ ವಿರುದ್ಧ ದಾಖಲಾಗಿರು ವುದು ಬೆಳಕಿಗೆ ಬಂದಿದೆ.

ಈ ಎಲ್ಲ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 286 ಗ್ರಾಂ ಚಿನ್ನಾಭರಣ, ಕೃತ್ಯಕ್ಕೆ ಉಪಯೋಗಿಸಿದ್ದ ಬೆಂಗಳೂರಿನಲ್ಲಿ ಕಳ್ಳತನ ಮಾಡಿದ್ದ ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ ಇವುಗಳ ಒಟ್ಟು ಮೌಲ್ಯ 24,20,200 ರೂ. ಇನ್ನು ಬಂಧಿತ ಆರೋಪಿ ಶೃಂಗಾರ್ ಸಾಹಸ ಕಲಾವಿದನಾಗಿದ್ದು, ಒಂದು ಚಿತ್ರದಲ್ಲಿ ನಟನೆ ಮಾಡಿದ್ದಾನೆ ಎಂದು ತಿಳಿದುಬಂದಿದೆ ಎಂದು ವಿವರಿಸಿದರು.

ಮನೆಗಳ್ಳನ ಬಂಧನ: ಮಳವಳ್ಳಿ ತಾಲೂಕು ಅಗಸನಪುರ ಗ್ರಾಮದಲ್ಲಿ 2024ರ ಆ.22ರಂದು ನಡೆದಿದ್ದ ಮನೆಗಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಹಲಗೂರು ಪೊಲೀಸರು ಬಂಧಿಸಿ 17,92,800 ರೂ. ಮೌಲ್ಯದ 179 ಗ್ರಾಂ ಚಿನ್ನಾಭರಣ ಮತ್ತು ಬೆಳ್ಳಿ ಪದಾರ್ಥಗಳನ್ನು ವಶಕ್ಕೆ ಪಡೆಯಲಾಗಿದೆ.

ಅಗಸನಪುರ ಗ್ರಾಮದ ಚಿಕ್ಕಬಸವಣ್ಣ ಎಂಬುವರ ಮನೆ ಬೀಗ ಮುರಿದು 45 ಗ್ರಾಂ ಚಿನ್ನ, ಐದು ಕೆ.ಜಿ. 403 ಗ್ರಾಂ ಬೆಳ್ಳಿ, 35 ಸಾವಿರ ರೂ. ನಗದು ದೋಚಿ ಪರಾರಿಯಾಗಿದ್ದನು. ಈ ಸಂಬಂಧ ಹಲಗೂರು ಠಾಣೆಯಲ್ಲಿ ದೂರು ದಾಖಲಾಗಿತ್ತು.

ತನಿಖೆ ನಡೆಸಿದ ಪೊಲೀಸರು, ರಾಮನಗರ ಜಿಲ್ಲೆ ಚನ್ನಪಟ್ಟಣದ ತಾಲೂಕು ಬೈರಾಪಟ್ಟಣ ಗ್ರಾಮದ ಕೆ.ಪ್ರಸನ್ನ(40) ಎಂಬಾತನನ್ನು ಬಂಧಿಸಿದ್ದಾರೆ. ಈತನ ವಿರುದ್ಧ ಹಲಗೂರು ಠಾಣೆಯಲ್ಲಿ ನಾಲ್ಕು, ಬೆಳಕವಾಡಿಯಲ್ಲಿ ಮೂರು, ಮಳವಳ್ಳಿ ಗ್ರಾಮಾಂತರ ಮತ್ತು ಕಿರುಗಾವಲು ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿತ್ತು ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಿ.ಇ.ತಿಮ್ಮಯ್ಯ, ಗಂಗಾಧರ ಸ್ವಾಮಿ, ಮಳವಳ್ಳಿ ಡಿವೈಎಸ್ಪಿ ವಿ.ಕೃಷ್ಣಪ್ಪ, ಹಲಗೂರು ವೃತ್ತ ನಿರೀಕ್ಷಕ ಬಿ.ಎಸ್. ಶ್ರೀಧರ್ ಹಾಜರಿದ್ದರು.

ಒಂದನೇ ಪುಟದಿಂದ

ಖಾಲಿ ಖಜಾನೆ ತುಂಬಲು 'ಬಿ' ಖಾತಾ ಮೊರೆ

ಸಾವಿರ ರೂಪಾಯಿ ನೀಡಲು ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಸರ್ಕಾರ ಆರ್ಥಿಕವಾಗಿ ಶಕ್ತಿಯುತವಾಗಿದ್ದರೆ ಈ ಪರಿಸ್ಥಿತಿ ಏಕೆ ಬರುತ್ತಿತ್ತು ಎಂದು ಪ್ರಶ್ನಿಸಿದರು. ಹಣ ಇಲ್ಲದ ಕಾರಣ ಸರ್ಕಾರ ನಡೆಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಇಂಧನ ಇಲಾಖೆಗೆ 46 ಸಾವಿರ ಕೋಟಿ ರೂಪಾಯಿ ಸಾಲ ಪಡೆದಿದೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ಹಾಲು, ಕುಡಿಯುವ ನೀರು, ವಿದ್ಯುಚ್ಛಕ್ತಿ, ಮೆಟ್ರೋ, ಮದ್ಯ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿದ್ದಾರೆ. ತೆರಿಗೆ ಹೆಚ್ಚಿಸಿ ಖಜಾನೆ ತುಂಬಿಸಿಕೊಂಡು ಗ್ಯಾರಂಟಿ ಯೋಜನೆಗೆ ಹಣ ನೀಡುತ್ತಿದ್ದಾರೆ.

ಆದರೆ ಇತ್ತೀಚಿಗೆ ಗ್ಯಾರಂಟಿ ಯೋಜನೆಗಳಿಗೆ ನಿಗದಿತ ಅವಧಿಯಲ್ಲಿ ಹಣ ನೀಡುತ್ತಿಲ್ಲ. ಇದರಿಂದ ಜನಸಾಮಾನ್ಯರು ಕಾಂಗ್ರೆಸ್ ಸರ್ಕಾರಕ್ಕೆ ತಪರಾಕಿ ಹಾಕುತ್ತಿದ್ದಾರೆ ಎಂದು ಹೇಳಿದರು.

ದೇವರ ಮೊರೆ: ಮಿತಿ ಮೀರಿದ ಸಾಲ ಮಾಡಿಕೊಂಡು, ಆರ್ಥಿಕ ಪರಿಸ್ಥಿತಿ ಸರಿದೂಗಿಸದೆ ದೇವರೇ ಈ ಸಮಸ್ಯೆ ಪರಿಹಾರ ಮಾಡಬೇಕು ಎಂದು ಹೇಳುತ್ತಿದ್ದಾರೆ. ಜನರಿಂದ ಮತ ಹಾಕಿಸಿ ಕೊಂಡು 136 ಸ್ಥಾನ ಪಡೆದಿರುವ ಕಾಂಗ್ರೆಸ್ ಸರ್ಕಾರ ಈಗ ದೇವರ ಕಡೆ ಬೊಟ್ಟು ಮಾಡಿ ತೋರಿಸುತ್ತಿದ್ದಾರೆ ಎಂದು ದೂರಿದರು.

ನನ್ನ ಹೆದರಿಸಲು ಆಗೋಲ್ಲ: ಕಳೆದ 40 ವರ್ಷದ ಹಿಂದೆ ಇದೇ ಮೈಸೂರಿನಲ್ಲಿ ನಾನು ಸಿನಿಮಾ ವಿತರಕನಾಗಿದ್ದೆ. ಆ ವೇಳೆ ಕಷ್ಟಪಟ್ಟು ಸಂಪಾದನೆ ಮಾಡಿದ ಹಣದಿಂದ ಬಿಡದಿ ಬಳಿ ಜಮೀನು ಖರೀದಿ ಮಾಡಿದ್ದೇನೆ. ಆದರೆ ಈಗ 14 ಎಕರೆ ಒತ್ತುವರಿಯಾಗಿದೆ ಎಂದು ಆರೋಪ ಮಾಡುತ್ತಿದ್ದಾರೆ. ನನ್ನ ಜಮೀನಿನ ಸರ್ವೆ ಮಾಡಿಸಿಕೊಳ್ಳಿ. ಒತ್ತುವರಿಯಾಗಿದ್ದರೆ ಸರ್ಕಾರದ ವಶಕ್ಕೆ ತೆಗೆದುಕೊಳ್ಳಿ ಎಂದು ನಾನೇ ಸರ್ಕಾರಕ್ಕೆ ಪತ್ರ ಬರೆದಿದ್ದೆ. ಆದರೆ ನನ್ನ ಮನವಿ ನಿರ್ಲಕ್ಷ್ಯ ಮಾಡಿ ಕಳೆದ 40 ವರ್ಷದಿಂದ ಕಿರುಕುಳ ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನನ್ನ ಜಮೀನಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳಿಲ್ಲ ಎಂದು ಸರ್ಕಾರವೇ ಹೇಳುತ್ತಿದೆ. ಆದರೆ ಈಗ ಮೂಲ ಮಾಲೀಕರು ಹುಟ್ಟಿಕೊಂಡಿದ್ದಾರೆ. ಅವರು ಯಾರು, ಎಲ್ಲಿಂದ ಕರೆದುಕೊಂಡು ಬಂದರು ಎಂಬ ಮಾಹಿತಿ ನನ್ನ ಬಳಿ ಇದೆ. ಕಾಂಗ್ರೆಸ್ ಸರ್ಕಾರ ನನ್ನ ಜಮೀನಿನಲ್ಲಿ ಇಂಟರ್ ನ್ಯಾಷನಲ್ ಸರ್ವೆ ಮಾಡಿಸಿಕೊಳ್ಳಲಿ. ನಾನು ಹೆದರಲ್ಲ ಎಂದರು. ಉನ್ನತ ಅಧಿಕಾರಿಗಳ ನೇತೃತ್ವದಲ್ಲಿ ಎಸ್‌ಐಟಿ ರಚನೆ ಮಾಡಿ ತನಿಖೆ ಮಾಡಿಸುತ್ತಿದ್ದಾರೆ. ಆದರೆ ಇದಕ್ಕೆಲ್ಲಾ ನಾನು ಹೆದರುವುದಿಲ್ಲ ಎಂದು ಪುನರುಚ್ಚರಿಸಿದರು.

ಸಿದ್ದರಾಮಯ್ಯ ಹರಿಶ್ಚಂದ್ರರ: ಸಿದ್ದರಾಮಯ್ಯ ಅವರೇನು ಹರಿಶ್ಚಂದ್ರರೆ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಮೈಸೂರಿನ ಹಿನಕಲ್‌ನ ಸಾಕಮ್ಮನ ಜಮೀನು ವಿವಾದ ಯಾವುದು, ಅದಕ್ಕೂ ಸಿದ್ದರಾಮಯ್ಯರಿಗೂ ಏನು ಸಂಬಂಧ ಎಂದು ಎಲ್ಲರಿಗೂ ತಿಳಿದಿರುವ ವಿಚಾರ ಎಂದು ಹೇಳಿದರು. ಮರಾಠಿಗರು ಕೆಎಸ್‌ಆರ್‌ಟಿಸಿ ಕಂಡಕ್ಟರ್ ಮೇಲೆ ಹಲ್ಲೆ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, ಸಚಿವರೊಬ್ಬರು ಮರಾಠಿಯಲ್ಲಿ ಭಾಷಣ ಮಾಡಿ ಮರಾಠಿಗರಿಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇದರಿಂದ ಈ ಸರ್ಕಾರ ಯಾರಿಗೆ ರಕ್ಷಣೆ ನೀಡುತ್ತದೆ ಎಂಬುದನ್ನು ಕನ್ನಡಿಗರು ಅರಿತುಕೊಳ್ಳಬೇಕು ಎಂದರು. ಬೆಳಗಾವಿ ಕನ್ನಡಿಗರ ಸ್ವತ್ತು ಎಂಬ ಸಂದೇಶ ಸಾರಲು ವಿಧಾನಸೌಧ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದೆ. ಆದರೆ ಈ ಸರ್ಕಾರ ಯಾವ ಸಂದೇಶ ನೀಡುತ್ತಿದೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಸಚಿವರಾದ ಸಾ.ರಾ.ಮಹೇಶ್, ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು, ಅಶ್ವಿನ್‌ಕುಮಾರ್, ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜಾತಿಗಣತಿ ವರದಿಗೆ ಗಂಧದ ಕಡ್ಡಿಯಿಂದ ಪೂಜೆ ಮಾಡಲಿ

ಜಾತಿ ಗಣತಿ ವರದಿ ಗುಮ್ಮ ಬಿಡುತ್ತಾರೆ. ಆದರೆ ಈ ತನಕ ವರದಿ ಬಿಡುಗಡೆ ಮಾಡಿಲ್ಲ. ವರದಿ ಬಿಡುಗಡೆ ಮಾಡಲು ಆಗಲಿಲ್ಲವೆಂದರೆ ಗಂಧದ ಕಡ್ಡಿ ಹಿಡಿದು ಪ್ರತಿ ದಿನ ಪೂಜೆ ಮಾಡಲಿ ಎಂದು ಕುಮಾರಸ್ವಾಮಿ ಲೇವಡಿ ಮಾಡಿದರು. ಒಂದು ಕಡೆ ಜಾತಿ ಗಣತಿ ವರದಿಗೆ ನಾವು ಬದ್ಧ ಎಂದು ಹೇಳುತ್ತಾರೆ. ಮತ್ತೊಂದು ಕಡೆ ವರದಿಯ ಅಂಶಗಳನ್ನು ಮಾಧ್ಯಮಗಳಿಗೆ ಅವರೇ ಸೋರಿಕೆ ಮಾಡುತ್ತಾರೆ ಎಂದು ಹೇಳಿದರು.

ಜಾತಿಗಣತಿ ವರದಿಗೆ 150 ಕೋಟಿ ರೂಪಾಯಿ ವೆಚ್ಚವಾಗಿದೆ ಎಂದು ಹೇಳುತ್ತಾರೆ. ಆದರೆ ನಮ್ಮ ಮನೆಗೆ ಜಾತಿ ಗಣತಿಗಾಗಿ ಯಾರೂ ಬಂದಿಲ್ಲ ಎಂದು ಕಾಂಗ್ರೆಸ್ ಪಕ್ಷದ ಶಾಸಕರೇ ಹೇಳುತ್ತಾರೆ. ಹಾಗಾದರೆ ಈ ವರದಿಯ ಸ್ಪಷ್ಟತೆ ಏನು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಡಿ.ಕೆ.ಶಿವಕುಮಾರ್ ನಿದ್ದೆ ಕೆಡಿಸಿದ್ದಾರೆ

ಸ್ನೇಹಿತನ ಬಗ್ಗೆ ಹೆಚ್‌ಡಿಕೆ ಅನುಕಂಪ!

ಪೂರ್ಣಾವಧಿಗೆ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಈ ರೀತಿ ಹೇಳಿ ನಮ್ಮ ಸ್ನೇಹಿತರಿಗೆ ನಿದ್ದೆ ಕೆಡಿಸಿದ್ದಾರೆ ಎಂದು ಕುಮಾರಸ್ವಾಮಿ ಡಿ.ಕೆ.ಶಿವಕುಮಾರ್ ಹೆಸರೇಳದೆ ಟಾಂಗ್ ಕೊಟ್ಟರು.

ಕಾಂಗ್ರೆಸ್ ಪಕ್ಷದಿಂದ ಯಾರು ಮುಖ್ಯಮಂತ್ರಿ ಆಗಬೇಕು ಎಂಬ ವಿಚಾರದ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಅವರು 5 ವರ್ಷವಾದರೂ ಇರಲಿ, 50 ವರ್ಷವಾದರೂ ಇರಲಿ. ಚುನಾವಣೆ ಬಂದಾಗ ಚರ್ಚೆ ಮಾಡೋಣ ಎಂದು ಹೇಳಿದರು. ಇನ್ನು ಗೃಹ ಸಚಿವ ಡಾ.ಪರಮೇಶ್ವರ್ ಅವರು ರಾಜಕೀಯ ವೈರಾಗ್ಯದ ಮಾತನಾಡಿದ್ದಾರೆ. 136 ಸ್ಥಾನ ಇಟ್ಟುಕೊಂಡು ಇಂತಹ ಮಾತಾಡುತ್ತಿದ್ದಾರೆ. ಈ ಸರ್ಕಾರವನ್ನು ಯಾರ್ಯಾರೊ ಕಂಟ್ರೋಲ್ ಮಾಡುತ್ತಿದ್ದಾರೆ. ಈ ಹಿನ್ನೆಲೆ ಮರ್ಯಾದಸ್ಥರು ಇಲ್ಲಿ ಇರುವುದು ಸರಿ ಇಲ್ಲ ಎಂದು ತೀರ್ಮಾನಿಸಿ ಡಾ.ಪರಮೇಶ್ವರ್ ಇಂತಹ ಹೇಳಿಕೆ ನೀಡಿರಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರು ರಾಜವಂಶಸ್ಥರ ಬಗ್ಗೆ ಸಿದ್ದರಾಮಯ್ಯಗೇಕೆ ಇಷ್ಟು ದ್ವೇಷ

ಮೈಸೂರು ರಾಜವಂಶಸ್ಥರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಷ್ಟೊಂದು ದ್ವೇಷ ಕಾರಲು ಕಾರಣವೇನು ಎಂದು ತಿಳಿಯುತ್ತಿಲ್ಲ ಎಂದು ಕುಮಾರಸ್ವಾಮಿ ಹೇಳಿದರು.

ಬೆಂಗಳೂರು ಅರಮನೆ ಜಾಗವನ್ನು ರಸ್ತೆಗೆ ಬಳಸಿಕೊಳ್ಳುವ ಬಗ್ಗೆ ಟಿಡಿಆರ್ ನೀಡುವಂತೆ ಸುಪ್ರೀಂಕೋರ್ಟ್ ಆದೇಶಿಸಿದೆ. ಆದರೆ ಟಿಡಿಆರ್ ಸರ್ಟಿಫಿಕೇಟ್ ನೀಡಲು ಸಿದ್ದರಾಮಯ್ಯ ನಿರಾಕರಿಸುತ್ತಿದ್ದಾರೆ. ಮೈಸೂರು ರಾಜವಂಶಸ್ಥರ ಬಗ್ಗೆ ಇವರಿಗೇಕೆ ಇಷ್ಟೊಂದು ಸಿಟ್ಟು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಪಕ್ಕದಲ್ಲೇ ಕುಳಿತಿದ್ದ ಸಂಸದ ಯದುವೀರ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದೆ ಕಾನೂನು ಹೋರಾಟ ಮಾಡುತ್ತೇವೆ ಎಂದರು.

ಆತ್ಮಹತ್ಯೆ

5 ಕಿಮೀ ದೂರದಲ್ಲಿನ ಸುಂಡಹಳ್ಳಿಯ ಮಹದೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದ ರಸ್ತೆ ಸಮೀಪ ನಾಲೆಯಲ್ಲಿ ಮಾಸ್ತಯ್ಯ–ರತ್ನಮ್ಮ ದಂಪತಿಯ ಶವಗಳು ಪತ್ತೆಯಾಗಿವೆ. ಲಕ್ಷ್ಮೀ ಅವರ ಶವಕ್ಕಾಗಿ ಹುಡುಕಾಟ ನಡೆಸಲಾಗುತ್ತಿದೆ. ಮೃತ ಲಕ್ಷ್ಮೀ ಗಂಜಾಂ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ಈ ಕುಟುಂಬ ನಾಲೆಗೆ ಹಾರಿದ ಸ್ಥಳ ಶಿವಳ್ಳಿ ಠಾಣೆ ವ್ಯಾಪ್ತಿಗೆ ಸೇರಿದ್ದು, ಶವಗಳು ಸಿಕ್ಕ ಸಿಕ್ಕ ಮಂಡ್ಯ ಗ್ರಾಮಾಂತರ ಠಾಣೆ ವ್ಯಾಪ್ತಿಗೆ ಬರುತ್ತದೆ. ಸದ್ಯಕ್ಕೆ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣದ ತನಿಖೆ ಆರಂಭಿಸಿದ್ದು, ಮಾಸ್ತಪ್ಪ ಆಟೋದಲ್ಲಿ ಯಾವುದೇ ಡೆತ್ ನೋಟ್ ದೊರೆತಿಲ್ಲ. ಇವರ ಆತ್ಮಹತ್ಯೆಗೆ ನಿಖರ ಕಾರಣದ ಬಗ್ಗೆ ಅವರ ಮನೆಯಲ್ಲಿ ಏನಾದರು ಸುಳಿವು ಸಿಗಬಹುದೇ ಎಂದು ಪೊಲೀಸರು ಹುಡುಕಾಟ ನಡೆಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್‌ಪಿ ಎಲ್.ಕೆ.ರಮೇಶ್, ಮಂಡ್ಯ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಶ್ರೀನಿವಾಸರಾವ್, ಪಿಎಸ್‌ಐ ರಸೂಲ್‌ಸಾಬ ಎಂ.ಗೌಂಡಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಂಡ್ಯ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಯುವಕ ಜಲಸಮಾಧಿ: ಈಜಲು ಹೋದ ಯುವಕ ಜಲಸಮಾಧಿಯಾದ ಘಟನೆ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಹತ್ವಾಳ್ ಕಟ್ಟೆಯಲ್ಲಿ ಭಾನುವಾರ ಸಂಜೆ ನಡೆದಿದೆ. ಗ್ರಾಮದ ನಿವಾಸಿ ನಜೀರ್ ಅಹ್ಮದ್ ಎಂಬುವರ ಪುತ್ರ ಸಲ್ಮಾನ್(22) ಮೃತಪಟ್ಟವನು. ಈತ ಗ್ರಾಮದ ಮೂವರು ಯುವಕರೊಂದಿಗೆ ಕಬಿನಿ ಹತ್ವಾಳ್ ಕಟ್ಟೆಯಲ್ಲಿ ಈಜಾಡಲು ತೆರಳಿದ್ದಾನೆ. ಈಜಾಡುತ್ತಿದ್ದ ವೇಳೆ ನೀರಿನಲ್ಲಿ ಮುಳುಗಿ ಸಲ್ಮಾನ್ ಮೃತಪಟ್ಟಿದ್ದಾನೆ. ವಿಷಯ ತಿಳಿದು ಸ್ಥಳಕ್ಕೆ ಹುಲ್ಲಹಳ್ಳಿ ಠಾಣೆ ಎಸ್‌ಐ ಚೇತನ್‌ಕುಮಾರ್ ಭೇಟಿ ನೀಡಿ, ಪರಿಶೀಲನೆ ನಡೆಸಿ ಅಗ್ನಿಶಾಮಕ ದಳಕ್ಕೆ ಸುದ್ದಿ ಮುಟ್ಟಿಸಿದ್ದರು. ಭಾನುವಾರ ಎಷ್ಟೇ ಹುಡುಕಾಡಿದರೂ ಶವ ದೊರೆತಿರಲಿಲ್ಲ. ಸೋಮವಾರ ಬೆಳಗ್ಗೆ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತೆ ಹುಡುಕಾಟ ನಡೆಸಿ ಶವವನ್ನು ನೀರಿನಿಂದ ಮೇಲೆತ್ತಿ ಮರಣೋತ್ತರ ಪರೀಕ್ಷೆಗೆ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಬೆಳಗ್ಗೆ ನನಗೆ ಫೋನ್ ಮಾಡಿದ ರತ್ನಮ್ಮ, ನಮಗೆ ಮಾಸ್ತಯ್ಯನ ತಮ್ಮ ಶಂಕರ್ ನಾಯಕನಿಂದ ಬಹಳ ತೊಂದರೆಯಾಗಿದೆ. ಜಮೀನು ಮಾರಲು ಬಿಡುತ್ತಿಲ್ಲ. ನಾವು ಸಾಯಲು ಹೋಗುತ್ತಿದ್ದೇವೆ ಎಂದು ಹೇಳಿದರು. ನಾನು ಸಮಾಧಾನಪಡಿಸಿ ಬರುತ್ತೇನೆ ಎಂದು ಹೇಳಿದ್ದೆ. ಆದರೆ ಅದಾದ 1 ಗಂಟೆ ನಂತರ ಅವರದೇ ಮೊಬೈಲ್‌ನಿಂದ ನನಗೆ ಕರೆ ಮಾಡಿದ ಚುಂದಗಾಲು ಗ್ರಾಮಸ್ಥರು ಈ ದುರಂತದ ಸುದ್ದಿಯನ್ನು ತಿಳಿಸಿದರು.

– ಅಶೋಕ್, ಮಾಸ್ತಯ್ಯ ಷಡ್ಕ

ಚುನಾವಣೆಗೆ ನನ್ನದೇ ನಾಯಕತ್ವ: ಡಿಕೆಶಿ

ನಮ್ಮ ಆಂತರಿಕ ಸಮೀಕ್ಷೆಗಳು ವರದಿ ನೀಡಿವೆ. ಹೀಗಾಗಿ ಪರಾಜಿತ ಅಭ್ಯರ್ಥಿಗಳ ಕಷ್ಟ ಆಲಿಸಿ, 2028ರ ಚುನಾವಣೆಗೆ ಸಜ್ಜಾಗುವಂತೆ ಸೂಚನೆ ನೀಡಲಾಗಿದೆ. ಉಳಿದಂತೆ, ಹಿನ್ನಡೆ ಇರುವ ಕ್ಷೇತ್ರಗಳಲ್ಲಿ ಯಾವ ರೀತಿ ಪಕ್ಷವನ್ನು ಕಟ್ಟಬೇಕೆಂದು ಕಾರ್ಯಯೋಜನೆ ಸಿದ್ಧಪಡಿಸುತ್ತೇವೆ ಎಂದರು. ಇತ್ತೀಚೆಗೆ ನಡೆದ ಸರ್ಕಾರಿ ನೌಕರರ ಸಮಾವೇಶದಲ್ಲಿ ಮಾತನಾಡಿದ್ದ ಶಿವಕುಮಾರ್, ತಮ್ಮ ನಾಯಕತ್ವದಲ್ಲಿಯೇ ಮುಂದಿನ ಚುನಾವಣೆ ನಡೆಯಲಿದೆ ಎಂದು ಹೇಳಿದ್ದರು. ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಶಿವಕುಮಾರ್ ಬಳಿಯಿಂದ ಕಿತ್ತುಕೊಳ್ಳಬೇಕು ಎಂಬ ಉದ್ದೇಶದಲ್ಲಿ ದಲಿತ ಸಚಿವರು ನಡೆಸುತ್ತಿರುವ ಚಟುವಟಿಕೆ ಹಾಗೂ ಎರಡೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಬದಲಾವಣೆಯ ಸುದ್ದಿಗಳು ಹರಿದಾಡುತ್ತಿರುವ ಹೊತ್ತಿನಲ್ಲಿ ಅವರ ಈ ಹೇಳಿಕೆ ಚರ್ಚೆಗೆ ಗ್ರಾಸವಾಗಿತ್ತು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಶಾಶ್ವತವಲ್ಲ: ಕೆಪಿಸಿಸಿ ಅಧ್ಯಕ್ಷ ಸ್ಥಾನ ಶಾಶ್ವತವಲ್ಲ. ಒಂದು ಎರಡು ನಾಲ್ಕು ವರ್ಷಗಳಿಗೆ ಅಧ್ಯಕ್ಷರು ಬದಲಾಗುತ್ತಾರೆ. ಯಾವಾಗ ಯಾರು ಬದಲಾಗುತ್ತಾರೆ ಎಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು ನಮ್ಮಲ್ಲಿ ಯಾರೂ ನಿರುತ್ಸಾಹಿ ಸಚಿವರಿಲ್ಲ. ಎಲ್ಲರೂ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ. ಎಲ್ಲರೂ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ ಎಲ್ಲರೂ ಚೆನ್ನಾಗಿ ಕೆಲಸ ಮಾಡಬೇಕೆಂಬ ಪ್ರಯತ್ನವಂತೂ ಮಾಡುತ್ತಿದ್ದಾರೆ ಎಂದರು.

ಕಪೋಲ ಕಲ್ಪಿತ: ಕೆಪಿಸಿಸಿ ಅಧ್ಯಕ್ಷ, ಮುಖ್ಯಮಂತ್ರಿಯ ಬದಲಾವಣೆ ಎಂಬ ಚರ್ಚೆಗಳು ಪತ್ರಿಕೆಗಳ ಕಪೋಲ ಕಲ್ಪಿತ ಸುದ್ದಿಗಳು. ಯಾವುದೇ ಬದಲಾವಣೆ ಚರ್ಚೆ ಇಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ್ದಾರೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಬಳ್ಳಾರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು ಹೈಕಮಾಂಡ್ ಬಳಿಯೂ ಈ ಚರ್ಚೆ ಇಲ್ಲ. ಈ ವಿಷಯವಾಗಿ ಯಾರೂ ಮಾತನಾಡಬಾರದು ಎಂದು ಹೇಳಿದ್ದಾರೆ. ಪರಮೇಶ್ವರ ಅವರೂ ಈಗ ಏನೂ ಮಾತನಾಡುತ್ತಿಲ್ಲ ಎಂದರು. ಶಿಸ್ತಿನ ಕಾಂಗ್ರೆಸ್ ನಾಯಕರು ಯಾರೂ ಅಧ್ಯಕ್ಷ ಸಿಎಂ ಬದಲಾವಣೆ ಬಗ್ಗೆ ಮಾತನಾಡಬಾರದು ಎಂದು ವರಿಷ್ಠರು ಹೇಳಿದ್ದಾರೆ. ನಾವು ಅದನ್ನು ಪಾಲಿಸುತ್ತಿದ್ದೇವೆ ಎಂದರು.

ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ

ಸೈಕೋ ಹೆಸರಿನ ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಇನ್‌ಸ್ಟಗ್ರಾಂ ಮತ್ತು ವಾಟ್ಸಾಪ್ ಮೂಲಕ ಹರಿಬಿಡಲಾಗಿದೆ. ಸಾರ್ವಜನಿಕ ವಲಯದಲ್ಲಿ ಈ ಬಗ್ಗೆ ಸಾಕಷ್ಟು ಆಕ್ರೋಶ ವ್ಯಕ್ತವಾಗುತ್ತಿದ್ದು, ಶಾಸಕ ರವಿಕುಮಾರ್ ಗಣಿಗ ತಪ್ಪಿತಸ್ಥರ ವಿರುದ್ಧ ಕೂಡಲೇ ಕಾನೂನು ಕ್ರಮಕ್ಕೆ ಪೊಲೀಸರಿಗೆ ಸೂಚಿಸಿದ್ದಾರೆ.

ಘಟನೆ ಸಂಬಂಧ ಹಲವರು ವಶಕ್ಕೆ: ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಮಂಡ್ಯ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಮಂಡ್ಯ ನಗರದಲ್ಲಿ ರೌಡಿಗಳ ಅಟ್ಟಹಾಸ ಹೆಚ್ಚಾಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿದ್ದು, ಮೂರು ದಿನಗಳ ಹಿಂದೆಯೇ ಬೆಳ್ಳಂಬೆಳಿಗ್ಗೆ 68 ಜನ ರೌಡಿಗಳ ಮನೆಗೆ ದಾಳಿ ನಡೆಸಿ, ಪರಿಶೀಲನೆ ನಡೆಸಿ, ಅವರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ಕೊಟ್ಟಿದ್ದೇವೆ. ಇದಾದ ಬಳಿಕ ಅಪರಿಚಿತ ಯುವಕನಿಗೆ ಹೊಡೆಯುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ನಮ್ಮ ತಂಡ ಈ ವೀಡಿಯೋ ಗಮನಿಸಿ, ಕಾರ್ಯಾಚರಣೆ ನಡೆಸಿದ್ದು, ಎರಡು ಗುಂಪುಗಳ ಬಗ್ಗೆ ಸತತ ಮಾಹಿತಿ ಕಲೆ ಹಾಕಿ, ಹಲವು ಮಂದಿಯನ್ನು ಈಗಾಗಲೇ ವಶಕ್ಕೆ ಪಡೆದಿದ್ದೇವೆ ಎಂದು ವಿವರಿಸಿದರು. ವಶಕ್ಕೆ ಪಡೆದವರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದು, ಸಣ್ಣಮಟ್ಟ ರೌಡಿಸಂ ಚಟುವಟಿಕೆಯಲ್ಲಿ ಪಾಲ್ಗೊಂಡು ಪುಡಿರೌಡಿಗಳಾಗಿ ಬೆಳೆಯುತ್ತಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಹಲ್ಲೆಗೊಳಗಾದ ಯುವಕ ಎಲ್ಲೂ ಪ್ರಕರಣವನ್ನು ದಾಖಲಿಸಿಲ್ಲ. ಈ ನಿಟ್ಟಿನಲ್ಲಿ ಆತನನ್ನು ಪತ್ತೆ ಮಾಡುವ ಕೆಲಸಕ್ಕೆ ಮುಂದಾಗಿದ್ದೇವೆ. ಸದ್ಯದಲ್ಲೇ ಪ್ರಕರಣವನ್ನು ದಾಖಲಿಸಿಕೊಂಡು ಕೃತ್ಯದಲ್ಲಿ ಭಾಗವಹಿಸಿದ ಆರೋಪಿಗಳನ್ನು ಬಂಧಿಸುತ್ತೇವೆ. ಇದೇ ರೀತಿ ಸಾಮಾಜಿಕ ಜಾಲತಾಣದಲ್ಲಿ ರೌಡಿಸಂ ಚಟುವಟಿಕೆಯನ್ನು ತೋರ್ಪಡಿಸುವವರ ವಿರುದ್ಧ ಕಠಿಣ ಕ್ರಮ ಜರುಗಿಸುತ್ತೇವೆ ಎಂದು ಹೇಳಿದರು.

ರೌಡಿಸಂ ಚಟುವಟಿಕೆಯಲ್ಲಿ ತೊಡಗಿರುವ ಸುಮಾರು 50ಕ್ಕೂ ರೌಡಿಗಳನ್ನು ಪಟ್ಟಿ ಮಾಡಿದ್ದೇವೆ. ಅವರ ವಿರುದ್ಧ ಕ್ರಮ ಕೈಗೊಳ್ಳಲು ಎಲ್ಲಾ ರೀತಿಯ ಸಿದ್ಧತೆ ನಡೆಸಿದ್ದೇವೆ. ನಮಗೆ ಬಂದಿರುವ ಮಾಹಿತಿ ಪ್ರಕಾರ ಹಲ್ಲೆಗೊಳಗಾದವನು ಪಕ್ಕದ ಜಿಲ್ಲೆಯವನಾಗಿದ್ದು, ಆತನನ್ನು ಕರೆತಂದು ದೂರು ದಾಖಲಿಸಿಕೊಳ್ಳುತ್ತೇವೆ. ಯಾವ ವಿಚಾರಕ್ಕೆ ಈ ಘಟನೆ ನಡೆದಿದೆ ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದು, ರೌಡಿಸಂ ಮಟ್ಟ ಹಾಕಲು ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಜೊತೆಗೆ ಲಾಂಗು, ಮಚ್ಚು ಹಿಡಿದು ಅಟ್ಟಹಾಸ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು. ಜಿಲ್ಲೆಯಲ್ಲಿ ಇತ್ತೀಚೆಗೆ 30–40 ಮಂದಿ ಮೇಲೆ ರೌಡಿಶೀಟರ್ ತೆರೆದಿದ್ದು, ಇನ್ನಷ್ಟು ಪರಿಶೀಲಿಸಿ, ಪುಡಿರೌಡಿಗಳನ್ನು ರೌಡಿಶೀಟರ್ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

8 ದಿನಗಳಲ್ಲಿ ಗೃಹಲಕ್ಷ್ಮಿ ಹಣ ಬಿಡುಗಡೆ

ಕನ್ನಡಿಗರಿಗೆ ಧಮ್ಕಿ ಹಾಕುವುದನ್ನು ನಿಲ್ಲಿಸಬೇಕು: ಶಿವಸೇನೆ ಪುಂಡರ ಕೃತ್ಯಕ್ಕೆ ಸಚಿವೆ ಖಂಡನೆ



ಬೆಳಗಾವಿ: ಇನ್ನೂ 8 ದಿನಗಳಲ್ಲಿ 'ಗೃಹಲಕ್ಷ್ಮಿ' ಯೋಜನೆ ಹಣ ಬಿಡುಗಡೆ ಮಾಡುವುದಾಗಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದ್ದಾರೆ.

ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಅಪಪ್ರಚಾರ ಮಾಡಲಿ. ನಾವು ಈಗಾಗಲೇ ಗೃಹಲಕ್ಷ್ಮಿ ಹಣ ಬಿಡುಗಡೆ ಮಾಡುವುದಾಗಿ ಹೇಳಿದ್ದೇವೆ. ತಾಲೂಕು ಪಂಚಾಯಿತಿ ಮುಖಾಂತರ ಬಿಡುಗಡೆ ಮಾಡಬೇಕು ಅಂತ ಹೇಳಿರುವುದರಿಂದ ಸ್ವಲ್ಪ ತಡವಾಗಿದೆ. ಯಾವುದೇ ಕಾರಣಕ್ಕೂ ಮಹಿಳೆಯರಿಗೆ ಗೃಹಲಕ್ಷ್ಮಿ ಹಣ ನಿಲ್ಲೋದಿಲ್ಲ. 8–10 ದಿನಗಳಲ್ಲಿ ಬರುತ್ತೆ ಅಂತ ಹೇಳಿದ್ದೆ. 2 ದಿನ ಕಳೆದಿದೆ. ಇನ್ನು 8 ದಿನ ಗಳಲ್ಲಿ ಗೃಹಲಕ್ಷ್ಮಿ ಹಣ ಬಿಡುಗಡೆ ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ.

ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಸೂಚಿಸಿದ್ದೇನೆ: ಇದೇ ವೇಳೆ ಬಸ್ ಕಂಡಕ್ಟರ್ ಮೇಲೆ ನಡೆದ ಹಲ್ಲೆಯ ಕುರಿತು ಸಚಿವೆ ಪ್ರತಿಕ್ರಿಯೆ ನೀಡಿದ ಸಚಿವರು, ಘಟನೆಯನ್ನು ನಾನು ಖಂಡಿಸುತ್ತೇನೆ. ಘಟನೆ ನಡೆದು ಐದೇ ನಿಮಿಷಕ್ಕೆ ಕಮೀಷನರ್ ಜೊತೆ ನಾನು ಮಾತನಾಡಿದ್ದೆ. ಯಾರು ತಪ್ಪಿತಸ್ಥರು ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುವಂತೆ ಹೇಳಿದ್ದೇನೆ. ನಾವೆಲ್ಲರೂ ಮೊದಲು ಭಾರತೀಯರು ಕನ್ನಡಿಗರು ಸ್ವರಾಜ್ಯದ ಬಗ್ಗೆ ಮಾತನಾಡಿದಾಗ ನಾಲ್ಕೈದು ಪುಂಡರು ಬಂದು ಭಾಷಾ ವಿವಾದ ಎಳೆದು ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಇದನ್ನು ಖಂಡಿಸುತ್ತೇನೆ ಎಂದಿದ್ದಾರೆ.

ಸರ್ಕಾರಿ ನೌಕರನ ಮೇಲೆ ಕೈ ಮಾಡಿದ್ದು ಅಕ್ಷಮ್ಯ ಅಪರಾಧ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗುವ ಹಾಗೆ ನಾವು ಮಾಡ್ತೀವಿ. ನಮ್ಮ ರಾಜ್ಯದ ಡ್ರೈವರ್ ಗಳಿಗೆ ಧಮ್ಕಿ ಹಾಕುವುದನ್ನು ನಿಲ್ಲಿಸಬೇಕು. ಸ್ಥಳೀಯ ಸಿಪಿಐ ನಿಭಾಯಿಸುವುದರಲ್ಲಿ ವಿಫಲರಾಗಿದ್ದಾರೆ ಎನ್ನುವುದನ್ನು ಕೇಳಿದ್ದೆನೆ. ಸ್ಥಳೀಯ ಸಿಪಿಐ ಗಮನಕ್ಕೂ ತರದೇ ಪೋಕ್ಸೋ ಕೇಸ್ ಮಾಡಿದ್ದಾರೆ. ಇದರ ಕುರಿತು ನಾನು ಗೃಹ ಸಚಿವರು ಹಾಗೂ ಡಿಜಿಯವರಿಗೂ ಮಾತನಾಡುತ್ತೇನೆ ಎಂದು ಹೆಬ್ಬಾಳಕರ್ ತಿಳಿಸಿದ್ದಾರೆ.

ಕೆ.ಜಿ.ಕೊಪ್ಪಲು ಮಾರಮ್ಮ ದೇವಿ ಜಾತ್ರಾ ಮಹೋತ್ಸವ ಅದ್ದೂರಿ ಆಚರಣೆ



ಮೈಸೂರು, ಫೆ.24(ಎಂಕೆ)– ಮೈಸೂರು ಕನ್ನೇಗೌಡನ ಕೊಪ್ಪಲಿನ ಶ್ರೀ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವ ಶ್ರದ್ಧಾ–ಭಕ್ತಿಯೊಂದಿಗೆ ಅದ್ದೂರಿಯಾಗಿ ನೆರವೇರಿತು.

ಮೂರು ದಿನಗಳಿಂದ ಸಡಗರ–ಸಂಭ್ರಮದಿಂದ ನಡೆದ ಕೆ.ಜಿ.ಕೊಪ್ಪಲಿನಲ್ಲಿ ಸೋಮವಾರ ಶ್ರೀ ಮಾರಮ್ಮ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆ, ದೇವಿಗೆ ತಂಬಿಟ್ಟು ಆರತಿಯ ಪೂಜಾ ಕೈಂಕರ್ಯದಲ್ಲಿ ಅಪಾರ ಭಕ್ತ ಸಮೂಹ ಇಷ್ಟಾರ್ಥಗಳ ಸಿದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಶ್ರೀ ಮಾರಮ್ಮ ದೇವಿಯ ಮೂಲ ಸ್ಥಳವಾದ ಕೆ.ಜಿ.ಕೊಪ್ಪಲಿನ ಮೂರನೇ ಕ್ರಾಸ್‌ನಿಂದ ಮಧ್ಯಾಹ್ನ 2.30ಕ್ಕೆ ಆರಂಭವಾದ ಉತ್ಸವ ಮೂರ್ತಿ ಮೆರವಣಿಗೆ, ಡೊಳ್ಳು ಕುಣಿತ, ಪೂಜಾ ಕುಣಿತ, ಕಂಸಾಳೆ, ಕಹಳೆ ಇನ್ನಿತರೆ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ 'ಗ್ರಾಮದ' ಪ್ರತಿ ಬೀದಿಯಲ್ಲೂ ಸಾಗಿ ಸಂಜೆ 6 ಗಂಟೆ ಸುಮಾರಿಗೆ ದೇವಸ್ಥಾನಕ್ಕೆ ತಲುಪಿತು. ನಂತರ ಉತ್ಸವ ಮೂರ್ತಿಗೆ ವಿಶೇಷ ಪೂಜಾ ಕೈಂಕರ್ಯ ಸಲ್ಲಿಸಲಾಯಿತು.

ಮೆರವಣಿಗೆಯಲ್ಲಿ ಹರಕೆ ಕಟ್ಟಿಕೊಂಡಿದ್ದ ನೂರಾರು ಭಕ್ತಾದಿಗಳು, ಉಪವಾಸ ವ್ರತದೊಂದಿಗೆ ಬಾಯಿಗೆ ಬೀಗ ಹಾಕಿಕೊಂಡು ಹರಕೆ ಸಲ್ಲಿಸಿದರು. ಹಾಗೆಯೇ ತಂಡೋಪತಂಡವಾಗಿ ಆಗಮಿಸಿದ ಭಕ್ತಾದಿಗಳು ದೇವಿಗೆ ತಂಬಿಟ್ಟು ಆರತಿಯ ಮೂಲಕ ತಂಪಿನ ಪೂಜೆ ಅರ್ಪಿಸಿದರು.

ನೂರಾರು ವರ್ಷದ ಇತಿಹಾಸವಿದೆ: ಈ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಕನ್ನೇಗೌಡನ ಕೊಪ್ಪಲಿನ ಶ್ರೀ ಮಾರಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಎಂ.ರಾಮೇಗೌಡ, ನೂರಾರು ವರ್ಷಗಳ ಇತಿಹಾಸವುಳ್ಳ ದೇವಸ್ಥಾನ ಇದಾಗಿದೆ. ಶನಿವಾರ ಆರಂಭಗೊಂಡ ಜಾತ್ರಾ ಮಹೋತ್ಸವ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆಯೊಂದಿಗೆ ಸಂಪನ್ನಗೊಳ್ಳಲಿದೆ. ಸಾವಿರಾರು ಭಕ್ತರು ಭಾಗವಹಿಸಿ, ದೇವಿ ಕೃಪೆಗೆ ಪಾತ್ರರಾಗಿದ್ದಾರೆ ಎಂದು ತಿಳಿಸಿದರು. ಟ್ರಸ್ಟ್ ಕಾರ್ಯದರ್ಶಿ ಬಸವರಾಜು, ಖಜಾಂಚಿ ಆರ್.ಶಿವಕುಮಾರ್, ಸಹ ಕಾರ್ಯದರ್ಶಿ ಈಶ್ವರ್, ಶಿವಣ್ಣೇಗೌಡ ಮತ್ತಿತರರಿದ್ದರು.

'ಮನುಸ್ಮೃತಿ ವರ್ಸಸ್ ಭಾರತ ಸಂವಿಧಾನ' ನಾಟಕ ಪ್ರದರ್ಶನ

ಸಂವಿಧಾನ ಸೌಧದ ಒಂದೊಂದೇ ಇಟ್ಟಿಗೆ ಸಡಿಲಗೊಳಿಸುವ ಪ್ರಯತ್ನ ನಡೆಯುತ್ತಿದೆ: ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಆತಂಕ



ಮೈಸೂರಿನ ಕಿರು ರಂಗಮಂದಿರದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿದರು.

ಮೈಸೂರು,ಫೆ.24(ಪಿಎಂ)– ಸಂವಿಧಾನ ಸೌಧದ ಒಂದೊಂದೇ ಇಟ್ಟಿಗೆ ಸಡಿಲಗೊಳಿಸುವ ಪ್ರಯತ್ನ ನಡೆಯುತ್ತಿದ್ದು, ಈ ಬಗ್ಗೆ ಬಹಳ ಎಚ್ಚರಿಕೆ ಅಗತ್ಯ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ದೇವರತ್ನ ಫೌಂಡೇಷನ್ ಹಾಗೂ ಚಾರ್ವಾಕ ಸಂಸ್ಥೆ ಜಂಟಿ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಂವಿಧಾನ ಉತ್ಸವ 75ನೇ ವರ್ಷದ ಸಂಭ್ರಮಾಚರಣೆ ಪ್ರಯುಕ್ತ ಗಿರೀಶ್ ಮಾಚಳ್ಳಿ ರಚನೆ ಮತ್ತು ನಿರ್ದೇಶನದ 'ಮನುಸ್ಮೃತಿ ವರ್ಸಸ್ ಭಾರತ ಸಂವಿಧಾನ' ನಾಟಕ ಪ್ರದರ್ಶನ ಹಾಗೂ ಸಂವಿಧಾನ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ, ನಾಟಕ ವೀಕ್ಷಿಸಿ ಅವರು ಮಾತನಾಡಿದರು.

ಇಂದು ಧರ್ಮದ ಹೆಸರಿನಲ್ಲಿ ಆಳುವ ಪ್ರಯತ್ನ ನಡೆಯುತ್ತಿದ್ದು, ಆ ಮೂಲಕ ಬಹುಸಂಖ್ಯಾತರನ್ನು ಶೋಷಣೆ ಮಾಡಲಾಗುತ್ತಿದೆ. ಸಂವಿಧಾನ ವಿರೋಧಿ ಶಕ್ತಿಗಳು ಧರ್ಮದ ಹೆಸರಿನಲ್ಲಿ ಇಂದು ಸಮಾಜ ವಂಚಿಸುವ ಕೆಲಸ ಮಾಡುತ್ತಿವೆ. ಯಾವ ದೇಶದಲ್ಲಿ ಧರ್ಮದ ಹೆಸರಿನಲ್ಲಿ ರಾಜಕಾರಣ ನಡೆಯುತ್ತದೋ ಅಂತಹ ದೇಶ ಎಂದಿಗೂ ಉದ್ಧಾರವಾಗಿಲ್ಲ. ನಮ್ಮ ದೇಶದಲ್ಲಿಯೂ ಹಿಂದುತ್ವದ ಹೆಸರಿನಲ್ಲಿ ಸಂವಿಧಾನ ವಿರೋಧಿಸುತ್ತಿದ್ದು, ಈ ಬಗ್ಗೆ ನಾವು ಎಚ್ಚರದಿಂದ ಇರಬೇಕು ಎಂದರು.


ಸಂವಿಧಾನ ಜಾರಿಗೊಂಡು 75 ವರ್ಷಗಳು ತುಂಬಿದ ಸಂಭ್ರಮಾಚರಣೆಯಲ್ಲಿ ನಾವಿದ್ದೇವೆ. ಇದರ ಪ್ರಯುಕ್ತ ಇಂದಿಲ್ಲಿ ಪ್ರದರ್ಶನಗೊಂಡ ನಾಟಕದಲ್ಲಿ ಮನುಸ್ಮೃತಿಯ ಶೋಷಣೆಯನ್ನು ಅನಾವರಣ ಮಾಡಲಾಗಿದೆ. ಸಂವಿಧಾನ ಜಾರಿಗೊಂಡಾಗ ವಿರೋಧ ಮಾಡಿದ್ದರು. ಈಗಲೂ ಅದು ಮುಂದುವರೆದಿದೆ. ಆ ಮೂಲಕ ಮನುಸ್ಮೃತಿ ಜಾರಿಗೆ ಪ್ರಯತ್ನ ನಡೆಯುತ್ತಿದ್ದು, ಇದರ ಮೇಲೆ ನಾಟಕ ಬೆಳಕು ಚೆಲ್ಲಿತು. ಗಿರೀಶ್‌ಮಾಚಳ್ಳಿ ಸಂವಿಧಾನ ಮೌಲ್ಯಗಳ ಬಗ್ಗೆ ಗೌರವ ಹೊಂದಿ ಈ ರೀತಿಯ ನಾಟಕ ಪ್ರದರ್ಶನಕ್ಕೆ ಮುಂದಾಗಿರುವುದು ಶ್ಲಾಘನೀಯ. ಈ ನಾಟಕ ಬೀದಿ ನಾಟಕವಾಗಿಯೂ ಪ್ರದರ್ಶನಗೊಂಡರೆ ಹೆಚ್ಚು ಜನರಲ್ಲಿ ಜಾಗೃತಿ ಮೂಡಿಸಲು ಸಾಧ್ಯ ಎಂದು ಹೇಳಿದರು.

ಸಂವಿಧಾನ ಉಳಿದರೆ ನಾವೆಲ್ಲರೂ ಉಳಿಯಲು ಸಾಧ್ಯ ಆಗ ಮಾತ್ರ ಸಮಾನತೆ, ಸ್ವಾತಂತ್ರ್ಯ ದೊರೆಯಲಿದೆ. ಶಕ್ತಿಯುತ ಮಾಧ್ಯಮವಾದ ನಾಟಕದ ಮೂಲಕ ಸಂವಿಧಾನದ ಮಹತ್ವ ಬಗ್ಗೆ ಪರಿಣಾಮಕಾರಿ ಜಾಗೃತಿ ಸಾಧ್ಯವಿದೆ. ಇಂತಹ ನಾಟಕಗಳು ಹೆಚ್ಚು ಪ್ರದರ್ಶನ ಕಾಣುವ ಮೂಲಕ ಜನರಿಗೆ ಮುಟ್ಟುವಂತಾಗಬೇಕು ಎಂದರು.

'ಭಾರತ ಸಂವಿಧಾನ ಧರ್ಮ ವಿರೋಧಿಯೋ? ಅಥವಾ ದುಷ್ಟ ನಿಯಮಗಳ ವಿರೋಧಿಯೋ?' ಕುರಿತು ಮುಖ್ಯ ಭಾಷಣ ಮಾಡಿದ ಚಿಂತಕ ಮತ್ತು ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್, ಇಂತಹ ನಾಟಕ ಪ್ರದರ್ಶನ ಸಣ್ಣ ವೇದಿಕೆಗಳಿಗೆ ಸೀಮಿತವಾಗದೇ ಜನರ ಬಳಿಗೆ ಹೋಗಬೇಕು. ಆ ಮೂಲಕ ಮನುಧರ್ಮಶಾಸ್ತ್ರ 2 ಸಾವಿರ ವರ್ಷಗಳ ಕಾಲ ಭಾರತೀಯ ಸಮಾಜವನ್ನು ಯಾವ ದುಸ್ಥಿತಿಯಲ್ಲಿಟ್ಟಿತ್ತು ಎಂಬುದರ ಬಗ್ಗೆ ಜಾಗೃತಿ ಮೂಡಿಸಬೇಕು. ಸಂವಿಧಾನ ಜಾರಿಗೊಂಡು 75 ವರ್ಷಗಳಾದರೂ ಈಗಲೂ ಸಂವಿಧಾನದ ಆಶಯಗಳನ್ನು ಜನರ ಮುಂದೆ ಹೇಳಬೇಕಾಗಿದೆ. ಸಂವಿಧಾನ ಸರ್ವ ಸಮುದಾಯಗಳ ಪರವಾಗಿದ್ದು, ಭಾರತದ ಎಲ್ಲಾ ಸಮುದಾಯಗಳ ಶ್ರೇಯೋಭಿವೃದ್ಧಿಯ ಆಶಯ ಹೊಂದಿದೆ. ಸಾಮಾಜಿಕ ನ್ಯಾಯ ಮತ್ತು ಎಲ್ಲರಿಗೂ ಪ್ರಾತಿನಿಧ್ಯ ಒದಗಿಸುವುದು ಸಂವಿಧಾನದ ಮುಖ್ಯ ಆಶಯ. ಸಂವಿಧಾನ ಜಾರಿಗೆ ಬಂದಿರುವುದು ಪಟ್ಟಭದ್ರ ಹಾಗೂ ಮೇಲ್ಜಾತಿ ಹಿತಾಸಕ್ತಿಗಳಿಗೆ ಸ್ವಲ್ಪವೂ ಸಮಾಧಾನ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ 20ಕ್ಕೂ ಹೆಚ್ಚು ಮಂದಿ ಸಾಧಕರಿಗೆ ಸಂವಿಧಾನ ಸೇವಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ, ಹಲವರನ್ನು ಸನ್ಮಾನಿಸಲಾಯಿತು. ವಕೀಲ ಹಾಗೂ ಸಮಾಜದ ಮುಖಂಡ ಶಿವಪ್ರಸಾದ್ ಎಂಸಿ ಹುಂಡಿ ಅಧ್ಯಕ್ಷತೆ ವಹಿಸಿದ್ದರು. ಕಿರು ರಂಗಮಂದಿರದ ಹೊರಾವರಣದಲ್ಲಿ ಗೌತಮಿ ಫೌಂಡೇಶನ್ ವತಿಯಿಂದ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ವೃತ್ತಾಂತ ಕುರಿತ ಛಾಯಾಚಿತ್ರಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

ಚಿಂತಕ ಪ್ರೊ.ಕಾಳೇಗೌಡ ನಾಗವಾರ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ), ಮಾಜಿ ಮೇಯರ್ ಪುರುಷೋತ್ತಮ್, ಚಾರ್ವಾಕ ಸಂಸ್ಥೆ ಅಧ್ಯಕ್ಷ ಗಿರೀಶ್ ಮಾಚಳ್ಳಿ, ಗೌತಮ್ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು ಮತ್ತಿತರರು ಹಾಜರಿದ್ದರು.



'ಮನುಸ್ಮೃತಿ ವರ್ಸಸ್ ಭಾರತ ಸಂವಿಧಾನ' ನಾಟಕ ಪ್ರದರ್ಶನದ ದೃಶ್ಯವೊಂದನ್ನು ಕಾಣಬಹುದು.

ಮುಡಾ ನಿವೇಶನ ಹಂಚಿಕೆಯಲ್ಲಿ ಹಗರಣವೇ ನಡೆದಿಲ್ಲ

ಸುಳ್ಳು ಆರೋಪ ಮಾಡಿದರು ; ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಕಿಡಿ



ಮೈಸೂರು,ಫೆ.24(ಪಿಎಂ)– ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಯಾವುದೇ ಹಗರಣ ಆಗದಿದ್ದರೂ, ಆಗಿದೆ ಎಂದು ಸುಳ್ಳು ಆರೋಪ ಮಾಡಿ ಪ್ರಚಾರ ಮಾಡಿದರಲ್ಲದೆ, ಅದಕ್ಕಾಗಿ ಆರ್‌ಟಿಐ ಕಾರ್ಯಕರ್ತರನ್ನು ಎತ್ತಿಕಟ್ಟಿದರು ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರ ಆವರಣದಲ್ಲಿ ಸೋಮವಾರ ಮಾಧ್ಯಮದವರಿಗೆ ಅವರು ಪ್ರತಿಕ್ರಿಯೆ ನೀಡಿದರು.

ಲೋಕಾಯುಕ್ತದಿಂದ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರಿಗೆ ನೀಡಿರುವ ನೋಟಿಸ್‌ನಲ್ಲಿ ಸಿದ್ದರಾಮಯ್ಯನವರು ಪ್ರಭಾವ ಬೀರಿರುವ ಬಗ್ಗೆ ಯಾವುದೇ ಸಾಕ್ಷ್ಯಧಾರ ಇಲ್ಲವೆಂದು ಹೇಳಲಾಗಿದೆ. ಜೊತೆಗೆ ಪ್ರಭಾವ ಬೀರುವ ಅಗತ್ಯವೂ ಇಲ್ಲ. ಏಕೆಂದರೆ ಮುಡಾ ನಿವೇಶನಗಳನ್ನು ಬೇರೆಯವರಿಗೆ ಕೊಟ್ಟ ರೀತಿಯಲ್ಲಿ ನಮಗೂ ಕೊಟ್ಟಿದೆ. ಹೀಗಿರುವಾಗ ಪ್ರಭಾವ ಬೀರುವ ಅಗತ್ಯವಾದರೂ ಏನಿದೆ. ಹಾಗಾಗಿ ನಮ್ಮ ತಂದೆಯವರ ಯಾವುದೇ ಪಾತ್ರವಿಲ್ಲ ಜೊತೆಗೆ ಕಾನೂನಾತ್ಮಕವಾಗಿ ಮುಡಾದಿಂದ ಎಲ್ಲರಿಗೂ ಕೊಟ್ಟಂತೆಯೇ ನಮಗೂ ನಿವೇಶನ ಕೊಟ್ಟಿದ್ದಾರೆ ಎಂದರು.

ಜೊತೆಗೆ ಮುಡಾದಿಂದ ನಮಗೆ ಮಾಹಿತಿ ನೀಡದೇ ಅಧೀಕೃತವಾಗಿ ನಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳ ಲಾಗಿತ್ತು. ಹಾಗಾಗಿ ನಿವೇಶನ ಕೊಟ್ಟಿದ್ದರು. ಕಾನೂನು ಬಾಹಿರವಾಗಿ ಪ್ರಭಾವ ಬಳಸಿ ನಿವೇಶನ ಪಡೆದಿದ್ದರು ಎಂದು ಸುಳ್ಳು ಆರೋಪ ಮಾಡಿ ದೂರು ನೀಡಲಾಗಿತ್ತು ಇಲ್ಲಿ ರಾಜಕೀಯ ದುರುದ್ದೇಶ ಕೆಲಸ ಮಾಡಿದ್ದು, ಕೊನೆಗೆ ಲೋಕಾಯುಕ್ತ ಆ ರೀತಿಯಲ್ಲಿ ಆಗಿಲ್ಲವೆಂದು ಹೇಳುತ್ತಿದೆ. ಆ ಮೂಲಕ ಸತ್ಯಕ್ಕೆ ಜಯವಾಗಿದೆ ಎಂದು ಹೇಳಿದರು.

ತಂದೆಯವರು ಯಾವುದೇ ಪತ್ರ ಬರೆದಿಲ್ಲ: ಮುಡಾ ನಿವೇಶನ ವಿಚಾರವಾಗಿ ನಮ್ಮ ತಾಯಿಯವರು ಮಾತ್ರ ಪತ್ರ ಬರೆದಿದ್ದರು. ನಮ್ಮ ತಂದೆಯವರು ಯಾವುದೇ ಪತ್ರ ಬರೆದಿಲ್ಲ ಎಂದು ಸ್ಪಷ್ಟಪಡಿಸಿದರು. ಮುಡಾ ಸದಸ್ಯನಾಗಿದ್ದ ಕಾರಣ ಈ ಪ್ರಕರಣದಲ್ಲಿ ನನ್ನನ್ನೂ ಸಿಲುಕಿಸುವ ಪ್ರಯತ್ನ ಮಾಡಿದ್ದರು. ಆದರೆ ಈ ಪ್ರಕರಣ ಸಂಬಂಧ ಮುಡಾ ಸಭೆಯಲ್ಲಿ ನಾನು ಮಾತೇ ಆಡಿಲ್ಲ. ಹಾಗಾಗಿ ಯಾವುದೇ ದಾಖಲೆಗಳೂ ಇಲ್ಲ ಎಂದರು.

ಸಿಎಂ ಬದಲಾವಣೆ ಇಲ್ಲ: ಮುಡಾ ಪ್ರಕರಣ ಬಂದಾಗಿನಿಂದ ಮುಖ್ಯಮಂತ್ರಿಗಳು ಬದಲಾಗುತ್ತಾರೆ ಎಂದು ಪ್ರತಿಪಕ್ಷದವರು ಹೇಳುತ್ತಲೇ ಇದ್ದಾರೆ. ಅವರ ಪಕ್ಷದಲ್ಲಿ ಆಂತರಿಕ ಕಿತ್ತಾಟ ನಡೆದು ಊರು ಬಾಗಿಲು ಆಗಿದೆ. ಆದರೂ ನಮ್ಮ ಪಕ್ಷದ ಮೇಲೆ ಆರೋಪ ಮಾಡುವುದನ್ನು ಅವರು ಬಿಡುವುದಿಲ್ಲ. ಮುಖ್ಯಮಂತ್ರಿ ಬದಲಾವಣೆ ಆಗಲ್ಲ. ಸಿದ್ದರಾಮಯ್ಯ ಪರವಾಗಿ ನಾವು ನಿಲ್ಲುತ್ತೇವೆ ಎಂದು ಹೈಕಮಾಂಡ್ ಹೇಳಿದೆ. ಮುಖ್ಯಮಂತ್ರಿಗಳ ವಿರುದ್ಧ ಬಂದಿರುವ ಆರೋಪಗಳೆಲ್ಲವೂ ಸಂಪೂರ್ಣ ಸುಳ್ಳು ಎಂದು ಹೈಕಮಾಂಡ್ ಮನಗಂಡಿದೆ ಎಂದು ತಿಳಿಸಿದರು.

ಮಹಾ ಶಿವರಾತ್ರಿ; ದೇವರ ದರ್ಶನಕ್ಕೆ ಮುಕ್ತ ಅವಕಾಶ

ಮೈಸೂರು,ಫೆ.24– ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಮೂಹ ದೇವಸ್ಥಾನಗಳಲ್ಲಿ ಒಂದಾದ ಶ್ರೀ ತ್ರಿನೇಶ್ವರಸ್ವಾಮಿ ದೇವಾಲಯದಲ್ಲಿ ಫೆ26 ರಂದು ಜರುಗಲಿರುವ 'ಮಹಾಶಿವರಾತ್ರಿ' ಹಬ್ಬದ ಪ್ರಯುಕ್ತ ಮೂಲ ದೇವರಿಗೆ ಚಿನ್ನದ ಕೊಳಗ(ಮುಖವಾಡ)ವನ್ನು ಧರಿಸಲಾಗುವುದರಿಂದ ಭಕ್ತಾದಿಗಳಿಗೆ ಬೆಳಗ್ಗೆ 6 ಗಂಟೆಯಿಂದಲೇ ದೇವರ ದರ್ಶನಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ದೇವಾಲಯದಲ್ಲಿ ವಿಶೇಷ ಪೂಜೆ, ಅಭಿಷೇಕ, ಪ್ರಸಾದ ವಿತರಣೆ ಮಾಡಲಾಗುತ್ತದೆ. ರಾಮಾನುಜ ರಸ್ತೆಯಲ್ಲಿರುವ 'ಶ್ರೀ ಕಾಮಕಾಮೇಶ್ವರಿ' ದೇವಾಲಯದಲ್ಲಿಯೂ ಸಹ ವಿಶೇಷ ಪೂಜೆ, ಅಭಿಷೇಕ ಹಾಗೂ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುಗಾದಿಗೆ ಕಾದಿದೆ ಮತ್ತೊಂದು ಶಾಕ್

ಸ್ಫೋಟಕ ಭವಿಷ್ಯ ನುಡಿದ ಕೋಡಿಮಠ ಸ್ವಾಮೀಜಿ



ಹುಬ್ಬಳ್ಳಿ: ರಾಜಕಾರಣ, ಪ್ರಕೃತಿ ವಿಕೋಪ, ರಾಜ್ಯ ರಾಜಕಾರಣ, ದೇಶದ ರಾಜಕಾರಣ, ದೇಶ ವಿದೇಶದ ಸಂಘರ್ಷಗಳು, ಬಾಂಬ್ ಸ್ಫೋಟ ಇತ್ಯಾದಿಗಳ ಬಗ್ಗೆ ಸ್ಫೋಟಕ ಭವಿಷ್ಯ ನುಡಿಯುವ ಕೋಡಿ ಮಠದ ಡಾ. ಶಿವಯೋಗಿ ಶಿವಾನಂದ ಸ್ವಾಮೀಜಿ ಇದೀಗ ಮತ್ತೊಂದು ಸ್ಫೋಟಕ ಭವಿಷ್ಯ ನುಡಿದಿದ್ದಾರೆ.

ಇದೀಗ ಹುಬ್ಬಳ್ಳಿಯಲ್ಲಿ ಕೋಡಿಮಠದ ಸ್ವಾಮೀಜಿಯವರು ಭಯಾನಕ ಭವಿಷ್ಯ ನುಡಿದಿದ್ದು, ರಾಜ್ಯ ಸರ್ಕಾರದಲ್ಲಾಗುತ್ತಿರುವ ಹಲವು ಬದಲಾವಣೆಗಳ ಬಗ್ಗೆ ಹೇಳಿಕೊಂಡಿದ್ದಾರೆ.

ರಾಜ್ಯ ಸರ್ಕಾರದಲ್ಲಿ ಇತ್ತೀಚೆಗೆ ಬಹಳಷ್ಟು ಬದಲಾವಣೆಗಳಾಗುತ್ತಿದೆ. ಅಲ್ಲದೇ ಸಿಎಂ ಸೀಟ್ ಬಗ್ಗೆಯೂ ಭಾರೀ ಚರ್ಚೆಗಳಾಗುತ್ತಿದೆ. ಇದೀಗ ಕೋಡಿಶ್ರೀಯವರು ರಾಜ್ಯ ಸರ್ಕಾರಕ್ಕೆ ಸದ್ಯಕ್ಕೇನು ತೊಂದರೆಯಿಲ್ಲ ಎಂದು ಭವಿಷ್ಯ ನುಡಿದಿದ್ದಾರೆ.

ಇನ್ನು ಸ್ಫೋಟಕ ಭವಿಷ್ಯ ನುಡಿದ ಕೋಡಿಮಠ ಶ್ರೀಗಳು ಎಲ್ಲವನ್ನೂ ಯುಗಾದಿಗೆ ಹೇಳ್ತೀನಿ ಅಂದಿದ್ದಾರೆ. ಹುಬ್ಬಳ್ಳಿ ಸಿದ್ಧಾರೂಢ ಮಠಕ್ಕೆ ಭೇಟಿ ನೀಡಿದ ವೇಳೆ ಈ ಭವಿಷ್ಯ ನುಡಿದಿದ್ದಾರೆ.

ರಾಜ್ಯಮಟ್ಟದ ಯುಗಾದಿ ಕವಿಗೋಷ್ಠಿಗೆ ಸ್ವರಚಿತ ಕವನಗಳ ಆಹ್ವಾನ

ಮೈಸೂರು : ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿಸ್ಮಯ ಪ್ರಕಾಶನದ ವತಿಯಿಂದ ರಾಜ್ಯ ಮಟ್ಟದ ಯುಗಾದಿ ಕವಿಗೋಷ್ಠಿಯನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು, ನಾಡಿನ ಆಸಕ್ತ ಕವಿಗಳಿಂದ ಸ್ವರಚಿತ ಕವನಗಳನ್ನು ಆಹ್ವಾನಿಸಲಾಗಿದೆ ಎಂದು ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9880264678 ಅಥವಾ 8317457397 ಸಂಪರ್ಕಿಸಲು ಕೋರಿದ್ದಾರೆ.

ಪುಸ್ತಕಗಳ ಆಯ್ಕೆಗೆ ಮೀನಾಮೇಷ: ಪ್ರಕಾಶಕರ ಕಳವಳ

ಮೈಸೂರು, ಫೆ.24(ಎಸ್‌ಪಿಎನ್)– ಸಾರ್ವಜನಿಕರ ಗ್ರಂಥಾಲಯ ಇಲಾಖೆಗೆ, ಗ್ರಂಥಾಲಯ ಇಲಾಖೆ ಆಯ್ಕೆ ಸಮಿತಿ ಕಳುಹಿಸಿಕೊಟ್ಟಿರುವ 2021ನೇ ಸಾಲಿನ ಪುಸ್ತಕಗಳ ಆಯ್ಕೆ ಪಟ್ಟಿಗೆ ತಿಂಗಳಾದರೂ ಅನುಮೋದನೆ ದೊರೆಯದಿರುವುದು ಪುಸ್ತಕ ಪ್ರಕಾಶಕರ ಕಳವಳಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಆಯಾ ವರ್ಷ ಪ್ರಕಟಗೊಂಡ ಪುಸ್ತಕಗಳ ವಸ್ತು ವಿಷಯ, ಉತ್ಪಾದನಾ ಗುಣಮಟ್ಟವನ್ನು ಆಧರಿಸಿ ಪ್ರಕಾಶಕರಿಂದ ಪುಸ್ತಕಗಳನ್ನು ಖರೀಧಿಸಲು ಪುಸ್ತಕಗಳನ್ನು ಆಯ್ಕೆ ಮಾಡುವುದು ಗ್ರಂಥಾಲಯ ಇಲಾಖೆಯಲ್ಲಿರುವ ವ್ಯವಸ್ಥೆ, ಅಂತೆಯೇ 2021ನೇ ಸಾಲಿನ ಪುಸ್ತಕಗಳನ್ನು ಡಾ.ಕರೀಗೌಡ ಬೀಚನಹಳ್ಳಿ ನೇತೃತ್ವದ ಆಯ್ಕೆ ಸಮಿತಿ ಆಯ್ಕೆ ಮಾಡಿ ಅಂತಿಮ ಪಟ್ಟಿಯನ್ನು ಗ್ರಂಥಾಲಯ ಇಲಾಖೆಗೆ ಸಲ್ಲಿಸಿ ತಿಂಗಳೇ ಕಳೆದಿವೆ. ಅದಕ್ಕೆ ರಾಜ್ಯ ಸರ್ಕಾರ ಯಾವಾಗ ಅನುಮತಿ ನೀಡಲಿದೆ ಎಂದು ಪ್ರಕಾಶಕರು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ.

2021ನೇ ಸಾಲಿನ ಪುಸ್ತಕಗಳ ಆಯ್ಕೆ ಪಟ್ಟಿಯ ಕಡತ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರ ಕಚೇರಿಯಿಂದ ಶಿಕ್ಷಣ ಇಲಾಖೆಗೆ ರವಾನೆಯಾಗಿದೆ. ಆದರೆ, ಅದು ಇನ್ನೂ ಪರಿಶೀಲನೆಯ ಹಂತದಲ್ಲಿದೆ ಎಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ.

ಶಾಲಾ ಶಿಕ್ಷಣ ಇಲಾಖೆಯ ಸಚಿವ ಮಧು ಬಂಗಾರಪ್ಪ, ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಮತ್ತು ಗ್ರಂಥಾಲಯ ಆಯುಕ್ತ ಜಯವಿಭವಸ್ವಾಮಿ ಪಟ್ಟಿಯ ಅನುಮೋದನೆಗೆ ಸಂಬಂಧಿಸಿದಂತೆ ಈಗಾಗಲೇ ಒಂದು ಸುತ್ತಿನ ಸಭೆ ನಡೆಸಿದ್ದಾರೆ. ಅಂತಿಮ ನಿರ್ಧಾರ ಪ್ರಕಟಿಸಲು ಮತ್ತೊಂದು ಸುತ್ತಿನ ಸಭೆ ನಡೆಸಲು ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಪ್ರಕಾಶಕರು ಆರೋಪಿಸಿದ್ದಾರೆ.

ಹಣಕ್ಕೆ ಈಗಾಗಲೇ ಅನುಮೋದನೆ: ಸಾಮಾನ್ಯವಾಗಿ ಪ್ರತಿ ವರ್ಷ ಪುಸ್ತಕಗಳ ಜಿಲ್ಲಾ/ನಗರ ಗ್ರಂಥಾಲಯಗಳ ಪ್ರಾಧಿಕಾರ ನಿಧಿಯ ಆಯವ್ಯಯ ಮತ್ತು ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದೆ. ಬಿಬಿಎಂಪಿಯ ಐದು ವಲಯ, ರಾಜ್ಯದ ಎಲ್ಲಾ ಜಿಲ್ಲಾ, ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಪುಸ್ತಕ ಹಣಕಾಸು ಹಣವೂ ಬಿಡುಗಡೆಗೊಂಡಿದೆ ಆದರೆ, ಪ್ರಸಕ್ತ ಹಣಕಾಸು ವರ್ಷದ ಅಂತಿಮ ತಿಂಗಳಿಗೆ ಕೆಲವೇ ದಿನಗಳಿವೆ. ರಾಜ್ಯ ಖಜಾನೆ ಇಲಾಖೆಯ ಕೆ–2 ಮೂಲಕ ಹಣ ಪಾವತಿಗೆ ಮಾ.21 ಅಂತಿಮ ದಿನವೆಂದು ನಿಗಧಿಪಡಿಸಿದೆ.

ಪುಸ್ತಕಗಳ ಆಯ್ಕೆ ಪಟ್ಟಿಗೆ ಅನುಮೋದನೆ ದೊರೆತರೆ ಪ್ರಕಾಶಕರು ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಬೇಡಿಕೆಗನುಗುಣವಾಗಿ ಪುಸ್ತಕಗಳನ್ನು ಸರಬರಾಜು ಮಾಡಿ ಹಣ ಪಾವತಿಗೆ ರಶೀದಿ ಸಲ್ಲಿಸಬೇಕು. ಅದು ಆಯಾಯ ಗ್ರಂಥಾಲಯಗಳ ಉಪ ನಿರ್ದೇಶಕರಿಂದ ಅನುಮೋದಿತಗೊಂಡು ಖಜಾನೆ ಇಲಾಖೆಗೆ ಸಲ್ಲಿಕೆಯಾಗಿ ಕೆ–2 ಮೂಲಕ ಪ್ರಕಾಶಕರ ಖಾತೆಗೆ ಹಣ ಜಮಾ ಆಗಬೇಕು. ಈ ಇಡೀ ಪ್ರಕ್ರಿಯೆಗೆ ಸಾಕಷ್ಟು ದಿನಗಳು ಬೇಕು. ಹೀಗಾಗಿ ಪುಸ್ತಕಗಳ ಆಯ್ಕೆ ಪಟ್ಟಿಯ ಅನುಮೋದನೆ ತಡವಾದರೆ, ನಿಗಧಿತ ಸಮಯದೊಳಗೆ ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಳ್ಳದೇ ಪುಸ್ತಕ ಖರೀದಿ ಮತ್ತೊಂದು ವರ್ಷಕ್ಕೆ ಮುಂದೂಡಲ್ಪಡಬಹುದು ಎಂಬ ಆತಂಕ ಪ್ರಕಾಶಕರ ಅಳಲಾಗಿದೆ.



ಸಾಂದರ್ಭಿಕ ಚಿತ್ರ

> ಕನ್ನಡ ಸೇವೆಯಲ್ಲಿ ನಿರತರಾಗಿರುವ ಪುಸ್ತಕ ಪ್ರಕಾಶಕರು, ಒಂದು ರೀತಿ ಯಾರೂ ಕೇಳದ ಯಾರೂ ಹೇಳದ ಅನಾಥರಿದ್ದಂತೆ. 2025–26ನೇ ಸಾಲಿನ ಬಜೆಟ್ ಪೂರ್ವ ಭಾವಿ ಸಭೆ ನಡೆಯುತ್ತಿದ್ದರೂ ಪ್ರಕಾಶಕರ ಕಷ್ಟ–ನಷ್ಟ ಏನೆಂದು ಸಾರ್ವಜನಿಕರ ಗ್ರಂಥಾಲಯ ಇಲಾಖೆ ಅಧಿಕಾರಿಗಳು ಹಾಗೂ ರಾಜ್ಯ ಸರ್ಕಾರದ ಪ್ರತಿನಿಧಿಗಳು ಕೇಳುತ್ತಿಲ್ಲ. ಅಲ್ಲದೆ, ಮೈಸೂರು ನಗರ ಪಾಲಿಕೆಯಲ್ಲಿ ಗ್ರಂಥಾಲಯ ಸೆಸ್ ಅನೇಕ ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದರೂ ಆ ಅನುದಾನವನ್ನು ಗ್ರಂಥಾಲಯ ಇಲಾಖೆಗೆ ವರ್ಗಾಯಿಸುವಂತೆ ಒಬ್ಬರೂ ದನಿಯೆತ್ತುತ್ತಿಲ್ಲ.
> - **ನಿಂಗರಾಜು ಚಿತ್ತಣ್ಣವರ್**, ಪ್ರಕಾಶಕರು, ಚಿಂತನ ಚಿತ್ತಾರ.

> 2021ನೇ ಸಾಲಿನ ಪುಸ್ತಕಗಳ ಆಯ್ಕೆಪಟ್ಟಿಯನ್ನು ನಾವು ಇಲಾಖೆಗೆ ಸಲ್ಲಿಸಿ ತಿಂಗಳು ಕಳೆದಿದೆ. ಇಷ್ಟೊತ್ತಿಗೆ ಅನುಮೋದನೆ ಆಗಬೇಕಿತ್ತು. ಆದರೆ, ವಿಳಂಬವಾಗಿದೆ. ನಾವು ಕಳುಹಿಸಿರುವ ಪಟ್ಟಿಗೆ ಶಾಲಾ ಶಿಕ್ಷಣ ಇಲಾಖೆ ಬೇಗ ಅನುಮೋದನೆ ನೀಡಿದರೆ ಪ್ರಕಾಶಕರಿಗೆ ಅನುಕೂಲವಾಗುತ್ತದೆ. ಇನ್ನು 2022ನೇ ಸಾಲಿನ ಪ್ರಕಟಗೊಂಡಿರುವ ಪುಸ್ತಕಗಳ ಆಯ್ಕೆಗೆ ಪಟ್ಟಿ ಸಿದ್ಧಪಡಿಸಲು ನಮ್ಮ ಸಮಿತಿ ಮುಂದೆ ಸಭೆ ಸೇರಲಿದೆ.
> -**ಡಾ.ಕರೀಗೌಡ ಬೀಚನಹಳ್ಳಿ** ಅಧ್ಯಕ್ಷ, ಗ್ರಂಥಾಲಯ ಇಲಾಖೆಯ ಆಯ್ಕೆ ಸಮಿತಿ

> ಪ್ರಕಾಶಕರ ಗೋಳನ್ನು ರಾಜ್ಯ ಸರ್ಕಾರವಾಗಲಿ, ಸಂಬಂಧಪಟ್ಟ ಅಧಿಕಾರಿಗಳಾಗಲಿ ಒಬ್ಬರೂ ಗಮನಹರಿಸುತ್ತಿಲ್ಲ. ನಮ್ಮ ಗೋಳನ್ನು ನಾವೇ ಕನ್ನಡಿ ಮುಂದೆ ನಿಂತು ಹೇಳಬೇಕು. ಇಲ್ಲವೇ ಗೋಡೆ ಮುಂದೆ ನಿಂತು ಹೇಳಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ನಾಲ್ಕು ವರ್ಷಗಳಿಂದ ನಾನಾ ಕಾರಣಗಳನ್ನು ತಿಳಿಸಿ, ಪುಸ್ತಕಗಳ ಆಯ್ಕೆ ಪ್ರಕ್ರಿಯೆ ಮುಂದೆ ಹಾಕುತ್ತಿದ್ದಾರೆ. ಇನ್ನಾದರೂ ಪುಸ್ತಕ ಪ್ರಕಾಶಕರ ಗೋಳು ಕೇಳುವಂತ ಮನಸ್ಥಿತಿ ಸರ್ಕಾರಕ್ಕೆ ಬರಲಿ.
> - **ಲೋಕಪ್ಪ**, ಪ್ರಕಾಶಕರು, ಸಂವಹನ ಪ್ರಕಾಶನ

ಸೋಲಾಪುರದಲ್ಲಿ ಕರ್ನಾಟಕದ ಬಸ್ ತಡೆದು ಶಿವಸೇನೆ ಕಾರ್ಯಕರ್ತರ ಪುಂಡಾಟ

ವಿಜಯಪುರ: ಮಹಾರಾಷ್ಟ್ರ ರಾಜ್ಯದ ಸೋಲಾಪುರ ನಗರದ ಸಾಥ್ ರಸ್ತೆಯಲ್ಲಿ ಸೋಮವಾರ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಇಳಕಲ್–ಸೋಲಾಪುರ ನಗರಗಳ ನಡುವೆ ಸಂಚರಿಸುವ ಬಸ್ (ಕೆಎ 29 ಎಫ್ 1350) ಅನ್ನು ತಡೆದ ಶಿವಸೇನೆ (ಉದ್ಧವ್ ಠಾಕ್ರೆ) ಬಣದ 15 ರಿಂದ 20 ಕಿಡಿಗೇಡಿಗಳು ಪುಂಡಾಟ ಮೆರೆದಿದ್ದಾರೆ.

ಚಾಲಕನನ್ನು ಬಸ್ಸಿನಿಂದ ಕೆಳಗೆ ಇಳಿಸಿ, ಮುಖಕ್ಕೆ ಕೇಸರಿ ಬಣ್ಣ ಬಳಿದು ಜೈ ಮಹಾರಾಷ್ಟ್ರ ಎಂದು ಘೋಷಣೆ ಹೇಳಿಸಿದ್ದಾರೆ. ಅಲ್ಲದೇ, ಛತ್ರಪತಿ ಶಿವಾಜಿ ಮಹಾರಾಜ್ ಕಿ ಜೈ, ಜೈ ಮಹಾರಾಷ್ಟ್ರ, ಜೈ ಭವಾನಿ ಎಂದು ಬಸ್ಸಿನ ಮೇಲೆ ಬರೆದು, ಘೋಷಣೆ ಕೂಗಿದ್ದಾರೆ. ಸ್ಥಳಕ್ಕೆ ಸದರ್ ಬಜಾರ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ದೇಶ - ವಿದೇಶ

ಬಾಂಬ್ ದಾಳಿ ಭೀತಿ; ದೆಹಲಿ–ನ್ಯೂಯಾರ್ಕ್ ವಿಮಾನಕ್ಕೆ ಫೈಟರ್ ಜೆಟ್‌ಗಳ ನಿಯೋಜನೆ



ವಾಷಿಂಗ್ಟನ್: ನ್ಯೂಯಾರ್ಕ್‌ನಿಂದ ದೆಹಲಿಗೆ ತೆರಳುತ್ತಿದ್ದ ಅಮೇರಿಕನ್ ಏರ್‌ಲೈನ್ಸ್ ವಿಮಾನಕ್ಕೆ ಬಾಂಬ್ ಬೆದರಿಕೆ ಬಂದ ಹಿನ್ನಲೆಯಲ್ಲಿ ವಿಮಾನವನ್ನು ಮುಂಜಾಗ್ರತಾ ಕ್ರಮವಾಗಿ ರೋಮ್‌ಗೆ ಮಾರ್ಗ ಬದಲಾವಣೆ ಮಾಡಲಾಗಿದ್ದು, ರಕ್ಷಣೆಗೆ 2 ಫೈಟರ್ ಜೆಟ್ ವಿಮಾನಗಳನ್ನು ನಿಯೋಜಿಸಿದ ಘಟನೆ ನಡೆದಿದೆ.

ಭಾನುವಾರ ಮಧ್ಯಾಹ್ನ ಬಾಂಬ್ ದಾಳಿ ಬೆದರಿಕೆಯ ನಂತರ ನ್ಯೂಯಾರ್ಕ್‌ನಿಂದ ದೆಹಲಿಗೆ ತೆರಳುತ್ತಿದ್ದ ಅಮೇರಿಕನ್ ಏರ್‌ಲೈನ್ಸ್ ವಿಮಾನವನ್ನು ರೋಮ್‌ಗೆ ತಿರುಗಿಸಲಾಯಿತು. ಈ ವೇಳೆ ಇಟಲಿ ವಾಯುಪಡೆಯ ಎರಡು ಯುರೋ ಫೈಟರ್ ಜೆಟ್‌ಗಳು ವಿಮಾನಕ್ಕೆ ರಕ್ಷಣೆಗಾಗಿ ಹಾರಾಟ ನಡೆಸಿದ ವಿಡಿಯೋ ವೈರಲ್ ಆಗುತ್ತಿದೆ. ಇಟಲಿ ವಾಯುಪಡೆಯು ಬಿಡುಗಡೆ ಮಾಡಿದ ದೃಶ್ಯಗಳು ವಾಣಿಜ್ಯ ವಿಮಾನದ ಎರಡೂ ಬದಿಗಳಲ್ಲಿ ಫೈಟರ್ ಜೆಟ್‌ಗಳು ರೋಮ್‌ನ ಫಿಯುಮಿಸಿನೊ ವಿಮಾನ ನಿಲ್ದಾಣದವರೆಗೂ ಕಾವಲು ಕಾಯುತ್ತಿರುವುದನ್ನು ತೋರಿಸಲಾಗಿದೆ.

ವಿದೇಶಿಗರನ್ನು ಅಪಹರಿಸಲು ಪಾಕ್‌ನಲ್ಲಿ ಉಗ್ರರ ಸಂಚು



ಇಸ್ಲಾಮಾಬಾದ್: ಚಾಂಪಿಯನ್ಸ್ ಟ್ರೋಫಿ ಟೂರ್ನಿಗಾಗಿ ಪಾಕಿಸ್ತಾನಕ್ಕೆ ಬರುವ ವಿದೇಶಿ ಪ್ರಜೆಗಳು ಭೇಟಿ ನೀಡುವ ಬಂದರುಗಳು, ವಿಮಾನ ನಿಲ್ದಾಣಗಳು, ಕಚೇರಿಗಳು ಮತ್ತು ವಸತಿ ಪ್ರದೇಶಗಳ ಮೇಲೆ ಉಗ್ರರು ಕಣ್ಣಿಟ್ಟಿದ್ದಾರೆ. ಅಪಹರಿಸಿದ ವ್ಯಕ್ತಿಗಳನ್ನು ಭದ್ರತಾ ಪಡೆಗಳ ಕಣ್ತಪ್ಪಿಸಿ ರಾತ್ರಿಯ ವೇಳೆಯಲ್ಲಿ ಸುರಕ್ಷಿತ ಮನೆಗಳಿಗೆ ಸ್ಥಳಾಂತರಿಸಲು ಸಂಚು ರೂಪಿಸಲಾಗಿದೆ ಎಂದು ವರದಿಗಳು ತಿಳಿಸಿವೆ. 2025 ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ವೀಕ್ಷಿಸಲು ಪಾಕಿಸ್ತಾನಕ್ಕೆ ಬರುವ ವಿದೇಶಿ ಪ್ರಜೆಗಳನ್ನು ಅಪಹರಿಸಲು ಇಸ್ಲಾಮಿಕ್ ಸ್ಟೇಟ್ ಖೊರಾಸನ್ ಪ್ರಾಂತ್ಯ ಉಗ್ರ ಸಂಘಟನೆ ಸಂಚು ರೂಪಿಸುತ್ತಿದೆ ಎಂದು ಪಾಕಿಸ್ತಾನದ ಗುಪ್ತಚರ ಇಲಾಖೆ ಎಚ್ಚರಿಕೆ ನೀಡಿದೆ. ಉಗ್ರರು ಈ ಕ್ರೀಡಾಕೂಟಕ್ಕಾಗಿ ಬರುವ ಚೀನಾ ಮತ್ತು ಅರಬ್ ದೇಶಗಳ ಪ್ರಜೆಗಳನ್ನು ಗುರಿಯಾಗಿಸಿಕೊಂಡಿದ್ದಾರೆ ಎಂದು ವರದಿಗಳು ತಿಳಿಸಿವೆ.

ಈ ನಡುವೆ ಅಫ್ಘಾನಿಸ್ತಾನದ ಗುಪ್ತಚರ ಸಂಸ್ಥೆ (ಜಿಡಿಐ) ಕೂಡ ಪ್ರಮುಖ ಸ್ಥಳಗಳ ಮೇಲೆ ಉಗ್ರರು ದಾಳಿ ನಡೆಸುವ ಸಾಧ್ಯತೆಗಳ ಬಗ್ಗೆ ಎಚ್ಚರಿಕೆ ನೀಡಿದೆ.

ಅಕ್ರಮವಾಗಿ ಪ್ರವೇಶಿಸಿದ ಆರು ಬಾಂಗ್ಲಾದೇಶಿಯರ ಬಂಧನ



ಶಿಲ್ಲಾಂಗ್: ಅಕ್ರಮವಾಗಿ ಭಾರತದೊಳಗೆ ಪ್ರವೇಶಿಸಿದ ಆರು ಮಂದಿ ಬಾಂಗ್ಲಾದೇಶದ ಪ್ರಜೆಗಳನ್ನು ಗಡಿ ಭದ್ರತಾ ಪಡೆ ಸಿಬ್ಬಂದಿ ಭಾನುವಾರ ಬಂಧಿಸಿದ್ದಾರೆ. ಅವರಲ್ಲಿ ಕೆಲವರು ಈ ಹಿಂದೆ ಮುಂಬೈನಲ್ಲಿ ಕೆಲಸ ಮಾಡಿದ್ದವರು ಇದ್ದಾರೆ. ಮತ್ತೆ ಉದ್ಯೋಗ ಅರಸಿ ಮುಂಬೈಗೆ ಹೋಗಲು ಬಾಂಗ್ಲಾದೇಶದಿಂದ ಮೇಘಾಲಯಕ್ಕೆ ಗಡಿ ದಾಟಿದ ನಂತರ ಅವರನ್ನು ಬಂಧಿಸಲಾಗಿದೆ.

ಖಚಿತ ಮಾಹಿತಿ ಮೇಲೆ ಕಾರ್ಯಾಚರಣೆ ನಡೆಸಿದ ಬಿಎಸ್‌ಎಫ್ ಸಿಬ್ಬಂದಿಗಳು ಪಶ್ಚಿಮ ಜೈನ್ತಿಯಾ ಹಿಲ್ಸ್ ಜಿಲ್ಲೆಯಿಂದ ನಾಲ್ವರು ಮತ್ತು ದಕ್ಷಿಣ ಗರೋ ಹಿಲ್ಸ್ ಜಿಲ್ಲೆಯಿಂದ ಇಬ್ಬರನ್ನು ಬಂಧಿಸಿದ್ದಾರೆ. ಬಂಧಿತರ ಪೈಕಿ ತನ್ನ ಗಂಡನ ವೈದ್ಯಕೀಯ ಚಿಕಿತ್ಸೆಗಾಗಿ ಮುಂಬೈಗೆ ಭೇಟಿ ನೀಡಲು ಯೋಜಿಸಿದ್ದ ಮಹಿಳೆಯೂ ಸೇರಿದ್ದಾರೆ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ. ಎಲ್ಲಾ ಆರು ಮಂದಿಯನ್ನು ಆಯಾ ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮೇಘಾಲಯ ಬಾಂಗ್ಲಾದೇಶದೊಂದಿಗೆ 443 ಕಿಮೀ ಉದ್ದದ ಅಂತರಾಷ್ಟ್ರೀಯ ಗಡಿಯನ್ನು ಹೊಂದಿದೆ. ಅದರಲ್ಲಿ ಶೇ.20 ರಷ್ಟು ಪ್ರದೇಶ ಕಷ್ಟಕರವಾದ ಭೂಪ್ರದೇಶವಾಗಿದ್ದು, ಯಾವುದೇ ಬೇಲಿ ಹಾಕಿಲ್ಲ.

ಬಾಂಗ್ಲಾದೇಶ–ಪಾಕಿಸ್ತಾನದ ನಡುವೆ 1971ರ ಬಳಿಕ ವ್ಯಾಪಾರ ಆರಂಭ



ಢಾಕಾ: ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ನಡುವೆ 1971ರ ಬಳಿಕ ಇದೇ ಮೊದಲ ಬಾರಿಗೆ ವ್ಯಾಪಾರ–ವಹಿವಾಟು ಆರಂಭವಾಗಿದೆ. ಮೊದಲ ಹಂತದಲ್ಲಿ ಕರಾಚಿಯ ಬಂದರಿನಿಂದ 25,000 ಟನ್ ಅಕ್ಕಿಯನ್ನು ಕಂಟೈನರ್ ಹಡಗಿನ ಮೂಲಕ ಬಾಂಗ್ಲಾದೇಶಕ್ಕೆ ಕಳುಹಿಸಿಕೊಡಲಾಗಿದೆ. ಅದು ಶೀಘ್ರವೇ ಬಾಂಗ್ಲಾದೇಶವನ್ನು ತಲುಪಲಿದೆ.

ಇತ್ತೀಚೆಗೆ ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದ ಪಾಕಿಸ್ತಾನದ ಅಧಿಕಾರಿಗಳು ವ್ಯಾಪಾರ ಬಾಂಧವ್ಯವನ್ನು ಆರಂಭಿಸಲು ಮಾತುಕತೆ ನಡೆಸಿದ್ದರು. ಆ ಸಂದರ್ಭದಲ್ಲಿ ಪಾಕಿಸ್ತಾನದಿಂದ 50,000 ಟನ್ ಅಕ್ಕಿಯನ್ನು ಖರೀದಿಸಲು ತೀರ್ಮಾನಿಸಿತ್ತು. ಅದರ ಮೊದಲ ಹಂತವಾಗಿ 25,000 ಟನ್ ಅಕ್ಕಿಯನ್ನು ಬಾಂಗ್ಲಾದೇಶಕ್ಕೆ ಕಳುಹಿಸಿ ಕೊಡಲಾಗಿದೆ.

ಶೇಖ್ ಹಸೀನಾ ನೇತೃತ್ವದ ಸರಕಾರದ ಅಧಿಕಾರದಲ್ಲಿ ಇದ್ದಾಗ ಪಾಕಿಸ್ತಾನದ ಜತೆಗೆ ಯಾವ ಬಾಂಧವ್ಯವನ್ನೂ ಬಾಂಗ್ಲಾದೇಶ ಇರಿಸಿಕೊಂಡಿರಲಿಲ್ಲ. 2024ರ ಆಗಸ್ಟ್‌ನಲ್ಲಿ ಶೇಖ್ ಹಸೀನಾ ನೇತೃತ್ವದ ಸರಕಾರ ಪತನಗೊಂಡು ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರ ಅಸ್ತಿತ್ವಕ್ಕೆ ಬಂದ ಅನಂತರ 2 ದೇಶಗಳ ನಡುವೆ ಬಾಂಧವ್ಯ ಉತ್ತಮಗೊಳ್ಳುವತ್ತ ಸಾಗಿದೆ.

ಆಟೋರಿಕ್ಷಾಗೆ ಟ್ರಕ್ ಡಿಕ್ಕಿ; ಭೀಕರ ಅಪಘಾತದಲ್ಲಿ ಏಳು ಮಂದಿ ಸಾವು



ಪಾಟ್ನಾ: ಬಿಹಾರದ ಪಾಟ್ನಾ ಜಿಲ್ಲೆಯ ಮಸೌರ್ಹಿ–ನೌಬತ್‌ಪುರ ರಸ್ತೆಯ ಧನಿಚಕ್ ಮೋರ್ ಬಳಿ ಭಾನುವಾರ ರಾತ್ರಿ ವೇಗವಾಗಿ ಬಂದ ಟ್ರಕ್ ಆಟೋರಿಕ್ಷಾಗೆ ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ ಏಳು ಮಂದಿ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಮೃತರನ್ನು ಮಾತೇಂದ್ರ ಬಿಂದ್(25), ವಿನಯ್ ಬಿಂದ್ (30), ಉಮೇಶ್ ಬಿಂದ್(38), ರಮೇಶ್ ಬಿಂದ್ (52), ಉಮೇಶ್ ಬಿಂದ್ (30), ಸೂರಜ್ ಠಾಕೂರ್ (20) ಮತ್ತು ಆಟೋ ಚಾಲಕ ಸುಶೀಲ್ ಕುಮಾರ್ (35) ಎಂದು ಗುರುತಿಸಲಾಗಿದೆ. ಮೃತರಲ್ಲಿ ಆರು ಮಂದಿ ದೋರಿಪರ್ ಮೂಲದವರಾಗಿದ್ದು, ಆಟೋ ಚಾಲಕ ಸುಶೀಲ್ ಕುಮಾರ್ ಹನ್ಸಾದಿಹ್ ಗ್ರಾಮದವರಾಗಿದ್ದಾರೆ.

ಪೊಲೀಸರ ಪ್ರಕಾರ, ಆರು ಕಾರ್ಮಿಕರು ಕೆಲಸ ಮುಗಿಸಿ ಆಟೋದಲ್ಲಿ ಮನೆಗೆ ತೆರಳುತ್ತಿದ್ದಾಗ ಈ ಭೀಕರ ಅಪಘಾತ ಸಂಭವಿಸಿದೆ. ಡಿಕ್ಕಿಯ ಪರಿಣಾಮ, ಎರಡೂ ವಾಹನಗಳು ರಸ್ತೆಬದಿಯ ನೀರು ತುಂಬಿದ ಕಂದಕಕ್ಕೆ ಬಿದ್ದಿದ್ದು, ನಂತರ ಜೆಸಿಬಿ ಯಂತ್ರವನ್ನು ಬಳಸಿ ಮೃತರ ಶವಗಳನ್ನು ಅವಶೇಷಗಳಿಂದ ಹೊರತೆಗೆಯಲಾಗಿದೆ. ಟ್ರಕ್‌ನ ಆಕ್ಸಲ್ ಮುರಿದು ಚಾಲಕನ ನಿಯಂತ್ರಣ ತಪ್ಪಿ ಆಟೋರಿಕ್ಷಾಗೆ ಡಿಕ್ಕಿ ಹೊಡೆದಿದೆ ಎಂದು ತೋರುತ್ತಿದೆ ಎಂದು ಮಸೌರ್ಹಿ ಪೊಲೀಸ್ ಠಾಣೆಯ ಎಸ್‌ಎಚ್‌ಒ ವಿಜಯ್ ಯದ್ವೇಂದು ತಿಳಿಸಿದ್ದಾರೆ.

ಕೊಡಗು ದಕ್ಷತೆ, ಪ್ರಾಮಾಣಿಕತೆ ಭಾವಗಳ ವಿಶೇಷತೆ

● ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಅಭಿಮತ ● ಕೊಡಗು ಜಾನಪದ ಬೆಡಗು ವಿಶಿಷ್ಟ ಕಾರ್ಯಕ್ರಮ

ಮಡಿಕೇರಿ, ಫೆ.24–ಈ ಮಣ್ಣಿನ ಸೊಗಡನ್ನು ಅರಿಯದೆ ವಾಸ್ತವತೆ ಬಿಟ್ಟು ಮುನ್ನುಗ್ಗುತ್ತಿರುವ ಕಠೋರವಾದ ಕಾಲ ಘಟ್ಟದಲ್ಲಿ ಜಾನಪದ ನಮ್ಮ ಜೀವ ಎನ್ನುವುದನ್ನು ಒಳಗಣ್ಣು ತೆರೆದು ಉತ್ತಮಿಕೆಯ ಹಾದಿಯಲ್ಲಿ ಸಾಗಬೇಕೆಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ವತಿಯಿಂದ ನಡೆದ ಕೊಡಗು ಜಾನಪದ ಬೆಡಗು 'ಜಾನಪದ ನಡೆ ವಿದ್ಯಾರ್ಥಿಗಳ ಕಡೆ' ವಿಶಿಷ್ಟ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದಕ್ಷತೆ, ಪ್ರಾಮಾಣಿಕತೆ ಮತ್ತು ಸಮರ್ಪಣಾ ಭಾವಗಳಿಂದ ಪುಟ್ಟ ಕೊಡಗು ಅತ್ಯಂತ ವಿಶೇಷವಾಗಿ ಕಾಣುತ್ತದೆ. ಇಂತಹ ನಾಡಿನ ಮೂಲ ಜನಪದ ಸಂಸ್ಕೃತಿ, ಆಚಾರ–ವಿಚಾರ, ಪರಂಪರೆಗಳು ಸಮಾಜವನ್ನು ಕಟ್ಟುವುದರಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಇಂತಹ ಸಾರಸತ್ವ ಹೊಂದಿದ ಜಾನಪದದ ಸತ್ವವನ್ನು ನಮ್ಮ ಒಳಗಣ್ಣಿನ ಮೂಲಕ ಅರಿತು, ನಾಳೆಗಳನ್ನು ಕೈ ಹಿಡಿದು ಮುನ್ನಡೆಸುವ ಜವಾಬ್ದಾರಿ ಯುವ ಪೀಳಿಗೆಯದ್ದಾಗಿದೆ ಎಂದು ಹೇಳಿದರು.

ಸಮಾಜ ಕಟ್ಟುವ ಕೈಗಳಾಗಿ: ಅನುಮಾನಗಳೇ ತುಂಬಿರುವ ಸಮಾಜದಲ್ಲಿ ನೆಲ, ಜಲ, ಗಾಳಿ ವಿಷಯುಕ್ತವಾಗುತ್ತಿದೆ. ಅಭಿವೃದ್ಧಿ ಎನ್ನುವುದು ಎಂದಿಗೂ ಅವಸಾನಕ್ಕೆ ಕಾರಣವಾಗಬಾರದು. ವಿದ್ಯಾರ್ಥಿಗಳು ಸಮಾಜ ಕಟ್ಟುವ ಕೈಗಳಾಗಬೇಕು. ಯುವ ಸಮೂಹಕ್ಕೆ ಜಾನಪದ ತಲುಪಿಸುವ ಉದ್ದೇಶದಿಂದ ಅಕಾಡೆಮಿ ರಾಜ್ಯಾದ್ಯಂತ ಜಾನಪದ ನಡೆ ವಿದ್ಯಾರ್ಥಿಗಳ ಕಡೆ ಕಾರ್ಯಕ್ರಮ ರೂಪಿಸಲಾಗಿದೆ. ಮುಂಬರುವ ದಿನಗಳಲ್ಲಿ 'ಜಾನಪದ ನಡೆ ಹಟ್ಟಿ ಹಾಡಿಗಳ ಕಡೆ' ಕಾರ್ಯಕ್ರಮ ರೂಪಿಸಲಾಗುವುದು ಎಂದು ತಿಳಿಸಿದರು.



ಮಡಿಕೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ನಡೆದ 'ಕೊಡಗು ಜಾನಪದ ಬೆಡಗು–ಜಾನಪದ ನಡೆ ವಿದ್ಯಾರ್ಥಿಗಳ ಕಡೆ' ಕಾರ್ಯಕ್ರಮವನ್ನು ಧಾನ್ಯದ ಮೂಲಕ ಉದ್ಘಾಟಿಸಲಾಯಿತು.

ಅಕಾಡೆಮಿ ರಿಜಿಸ್ಟ್ರಾರ್ ಎನ್.ನಮ್ರತ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಅಕಾಡೆಮಿ ರಾಜ್ಯದ ವಿವಿಧೆಡೆ ಜಾನಪದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ವಿದ್ಯಾರ್ಥಿಗಳು ಜಾನಪದವನ್ನು ಅಪ್ಪಿಕೊಳ್ಳುವ ಮೂಲಕ ನಾಡಿನ ಸಂಸ್ಕೃತಿಯ ನಿಜ ರಾಯಭಾರಿಗಳಾಗಲಿ ಎಂದು ಹಾರೈಸಿದರು.

ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯ ಅಂಬೇಕಲ್ ನವೀನ್ ಮಾತನಾಡಿ, ಸ್ಥಳೀಯ ಸಂಸ್ಕೃತಿ, ಭಾಷೆಯ ಬೆಳವಣಿಗೆಗೆ ಪೂರಕವಾದ ಕಾರ್ಯಕ್ರಮಗಳಿಗೆ ಈ ಕಾಲೇಜು ಸಾಕಷ್ಟು ಒತ್ತು ನೀಡುತ್ತಲೇ ಬಂದಿದೆ. ಇಂತಹ ಕಾರ್ಯಕ್ರಮ ನಾಡಿನಾದ್ಯಂತ ನಡೆಯುವ ಮೂಲಕ ಜಾನಪದ ಸಂಸ್ಕೃತಿ ಪಸರಿಸಲಿ ಎಂದು ಆಶಿಸಿದರು.

ಅತಿಥಿಗಳಾದ ಐಕ್ಯೂಎಸಿಯ ಸಂಚಾಲಕಿ ಡಾ.ಕೆ.ಡಿ. ನಿರ್ಮಲ ಮಾತನಾಡಿ, ಮೌಖಿಕವಾಗಿ ಒಬ್ಬರಿಂದ ಒಬ್ಬರಿಗೆ ತಲೆಮಾರುಗಳಿಂದ ಹರಿದು ಬಂದ ಅತ್ಯಂತ ಶ್ರೀಮಂತ ಜಾನಪದ ಸಂಸ್ಕೃತಿ ಬಗ್ಗೆ ಇತ್ತೀಚಿನ ದಿನಗಳಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ಈ ಹಿನ್ನೆಲೆ ಅಕಾಡೆಮಿ ಸಹಕಾರದೊಂದಿಗೆ ಕಾರ್ಯಕ್ರಮ ಆಯೋಜಿಸುತ್ತಿರುವುದು ಸಂತಸ ಎಂದರು.

ವಿಚಾರಗೋಷ್ಠಿ: ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕ ಡಾ.ಕಾವೇರಿ ಪ್ರಕಾಶ್, 'ಕೊಡಗಿನ ಸಾಂಪ್ರದಾಯಿಕ ಊಟೋಪಚಾರಗಳು' ಕುರಿತು ಮತ್ತು ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಕುಡಿಯರ ಮುತ್ತಪ್ಪ, 'ಬುಡಕಟ್ಟು ಸಂಸ್ಕೃತಿಯಲ್ಲಿ ಕುಡಿಯರು' ಕುರಿತು ವಿಷಯ ಮಂಡಿಸಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ವಸಂತ ಕುಮಾರಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮುದಿಯನೆರವನ ರೇವತಿ ರಮೇಶ್, ಮಡಿಕೇರಿ ತಾಲೂಕು ಕಸಾಪ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಉಪಸ್ಥಿತರಿದ್ದರು.

ಜಾನಪದ ಬಹುತ್ವದ ಪ್ರತಿಬಿಂಬ

ರಾಷ್ಟ್ರದ ಪ್ರಗತಿಯ ಪಥವನ್ನು ಗಮನಿಸಿದಾಗ ನಾವಿಂದು ಬಹುಸಂಸ್ಕೃತಿ ತೊಡೆದು ಏಕ ಸಂಸ್ಕೃತಿಯತ್ತ ಸಾಗುತ್ತಿರುವುದು ಗೋಚರಿಸುತ್ತದೆ. ಬಹುಸಂಸ್ಕೃತಿ ನಾಡಿನಲ್ಲಿ 'ಜಾನಪದ' ಎನ್ನುವುದು ಬಹುತ್ವವನ್ನು ಪ್ರತಿಬಿಂಬಿಸುತ್ತದೆ ಎಂದು ಜಾನಪದ ಅಕಾಡೆಮಿ ಸದಸ್ಯ ಸಂಚಾಲಕ ಡಾ.ಮೈಸೂರು ಉಮೇಶ್ ತಿಳಿಸಿದರು.

ಈ ಹಿನ್ನೆಲೆ ಬಹುತ್ವದ ನೆಲೆಯನ್ನು ಜಾನಪದ ಮೂಲಕ ಅರ್ಥೈಸುವ ಪ್ರಯತ್ನ ನಡೆಸಲಾಗುತ್ತಿದೆ. ಯುವ ಸಮೂಹ ಜಾನಪದ ಆಶಯಗಳನ್ನು ಕೈಗೆತ್ತಿಕೊಂಡು, ಎಂದೆಂದಿಗೂ ಮಂಕಾಗದಂತೆ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು.

ನಾಲ್ಕೇರಿಯಲ್ಲಿ ಕಾಣಿಸಿಕೊಂಡ ಚಿರತೆ ಭಯಗೊಂಡ ಕಾರ್ಮಿಕರು



ನಾಲ್ಕೇರಿಯಲ್ಲಿ ಕಾಣಿಸಿಕೊಂಡ ಚಿರತೆ ಪತ್ತೆಗೆ ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಮಡಿಕೇರಿ: ಪೊನ್ನಂಪೇಟೆ ತಾಲೂಕಿನ ನಾಲ್ಕೇರಿಯಲ್ಲಿ ಕೆಲಸಕ್ಕೆ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ವೇಳೆ ಚಿರತೆ ವಾಹನದ ಎದುರೇ ಒಂದು ತೋಟದಿಂದ ಮತ್ತೊಂದು ತೋಟದೊಳಗೆ ನುಸುಳಿದ್ದು, ಇದರಿಂದ ಕಾರ್ಮಿಕರು ಕಾಫಿ ತೋಟಗಳಲ್ಲಿ ಕೆಲಸ ನಿರ್ವಹಿಸಲು ಭಯಪಡುವಂತಾಗಿದೆ.

ರಾಜ್ಯ ರೈತ ಸಂಘದ ಕೊಡಗು ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಅವರಿಗೆ ಸೇರಿದ ಕಾಫಿ ತೋಟದ ಕೆಲಸಕ್ಕೆ ಸೋಮವಾರ ಬೆಳಗ್ಗೆ 8.45ರಲ್ಲಿ ವಾಹನದಲ್ಲಿ ಕಾರ್ಮಿಕರನ್ನು ಕರೆದೊಯ್ಯಲಾಗುತ್ತಿತ್ತು. ಈ ಸಂದರ್ಭ ತೋಟದಿಂದ ಜಿಗಿದ ಬೃಹತ್ ಗಾತ್ರದ ಚಿರತೆ ಮನು ಸೋಮಯ್ಯ ಅವರ ತೋಟವನ್ನು ಪ್ರವೇಶಿಸಿದೆ. ಚಿರತೆ ಕಂಡು ಭಯಗೊಂಡ ಕಾರ್ಮಿಕರು ಹೌಹಾರಿದ್ದಾರೆ. ಕಾರ್ಮಿಕರು ಕೂಡಲೇ ತೋಟದ ಮಾಲೀಕ ಮನು ಸೋಮಯ್ಯ ಅವರಿಗೆ ವಿಷಯ ತಿಳಿಸಿದ್ದಾರೆ. ಬಳಿಕ ಮನು ಸೋಮಯ್ಯ ಎಸಿಎಫ್ ಗೋಪಾಲ್ ಹಾಗೂ ಅರಣ್ಯ ಇಲಾಖೆ ಉನ್ನತಾಧಿಕಾರಿಗಳಿಗೆ ಮಾಹಿತಿ ತಿಳಿಸಿದ್ದಾರೆ.

ಸ್ಥಳಕ್ಕಾಗಮಿಸಿದ ಪೊನ್ನಂಪೇಟೆ ಹಾಗೂ ನಾಗರಹೊಳೆ ಆರ್‌ಆರ್‌ಟಿ ತಂಡದ ಸಿಬ್ಬಂದಿ ತೋಟದಲ್ಲಿ ಚಿರತೆಗಾಗಿ ಹುಡುಕಾಟ ನಡೆಸಿದರು. ಈ ಸಂದರ್ಭ ತೋಟದಿಂದ ಲಕ್ಷ್ಮಣ ತೀರ್ಥ ನದಿಯವರೆಗೆ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದ್ದು, ನದಿ ದಾಟಿ ಹರಿಹರ ಗ್ರಾಮಕ್ಕೆ ಚಿರತೆ ತೆರಳಿರಬಹುದೆಂದು ಅರಣ್ಯ ಸಿಬ್ಬಂದಿ ಶಂಕಿಸಿದ್ದಾರೆ.

ಪೊನ್ನಂಪೇಟೆ ಉಪವಲಯ ಅರಣ್ಯಾಧಿಕಾರಿ ರಕ್ಷಿತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಮಂಡೆಪಂಡ ಪ್ರವೀಣ್, ಚೆಪ್ಪುಡಿರ ಬೋಪಣ್ಣ, ಗಸ್ತು ಅರಣ್ಯ ಪಾಲಕರಾದ ಅಂಥೋಣಿ ಪ್ರಕಾಶ್, ಮಾರುತೇಶ್, ಪೊನ್ನಂಪೇಟೆ ಹಾಗೂ ನಾಗರಹೊಳೆ ಆರ್‌ಆರ್‌ಟಿ ತಂಡದ ಸಿಬ್ಬಂದಿ ಹಾಜರಿದ್ದರು.

ಇಂದು ಶಾಸಕ ಪೊನ್ನಣ್ಣದಿಂದ ವನ್ಯಜೀವಿ ತಡೆಗೆ ವಿವಿಧೆಡೆ ಪರಿಶೀಲನೆ



ಮಡಿಕೇರಿ, ಫೆ.24–ಕೊಡಗಿನ ವಿವಿಧೆಡೆ ನಡೆಯುತ್ತಿರುವ ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳಿಂದ ಮಂಜೂರಾಗಿರುವ 21 ಕೋಟಿ ರೂ. ಅನುದಾನವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮುಂದಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಫೆ.25ರಂದು ಹಿರಿಯ ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಬಿ.ಶೆಟ್ಟಿಗೇರಿ, ಕುಂದ, ಈಚೂರು, ತಿತಿಮತಿ, ಮರಪಾಲ, ದೇವಮಚ್ಚಿ, ಚೆನ್ನಂಗಿ, ಮಾಲ್ದಾರೆ, ಗಟ್ಟದಳ್ಳ ಹಾಗೂ ಚೇಲಾವರ ಭಾಗದಲ್ಲಿ ಸ್ಥಳ ಪರಿಶೀಲನೆ ನಡೆಸಿ, ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಲು ಆದೇಶ ನೀಡಲಿದ್ದಾರೆ. ವನ್ಯಜೀವಿ ಹಾವಳಿ ತಡೆಗೆ ಬಗ್ಗೆ ಮಾಹಿತಿ ಸಹಿತ ಅರಣ್ಯಾಧಿಕಾರಿಗಳು, ಸ್ಥಳೀಯರು ಹಾಗೂ ಗ್ರಾಮದ ಪ್ರಮುಖರೊಂದಿಗೆ ಚರ್ಚಿಸಿ, ರೈಲ್ವೆ ಬ್ಯಾರಿಕೇಡ್, ಆನೆ ಕಂದಕ, ಸೋಲಾರ್ ಬೇಲಿ ನಿರ್ಮಾಣ ಮತ್ತಿತರ ಪರಿಹಾರ ಕಾಮಗಾರಿ ಅನುಷ್ಠಾನಕ್ಕೆ ಹಸಿರು ನಿಶಾನೆ ನೀಡಲಿದ್ದಾರೆ. ಫೆ.25ರ ಬೆಳಗ್ಗೆ 7 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಈ ಭಾಗದಲ್ಲಿ ಪ್ರವಾಸ ಕೈಗೊಳ್ಳಲ್ಲಿರುವ ಶಾಸಕರು, ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಕೈಕೊಳ್ಳಬೇಕಾದ ಹಲವು ಕ್ರಮಗಳ ಬಗ್ಗೆ ಅಧಿಕಾರಿಗಳು ಹಾಗೂ ಪ್ರಮುಖರೊಂದಿಗೆ ಚರ್ಚಿಸಲಿದ್ದಾರೆ.

ಎಂ.ಎಸ್.ಸುರೇಶ್ ನಿಧನ



ಕುಶಾಲನಗರ, ಫೆ.24– ಸಮೀಪದ ಶಿರಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿ ಮೂಡ್ಲುಕೊಪ್ಪಲು ಗ್ರಾಮದ ಸಿದ್ದಪ್ಪ ಸೌಂಡ್ಸ್ ಮತ್ತು ಶಾಮಿಯಾನ ಮಾಲೀಕ ಎಂ.ಎಸ್.ಸುರೇಶ್ (58) ಅನಾರೋಗ್ಯದಿಂದ ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರನ್ನು ಅಗಲಿದ್ದಾರೆ. ಸೋಮವಾರ ಸ್ವಗ್ರಾಮ ಮೂಡ್ಲುಕೊಪ್ಪಲಿನಲ್ಲಿ ಅಂತ್ಯಸಂಸ್ಕಾರ ನೆರವೇರಿತು.

ಸಂತಾಪ: ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಹಾಗೂ ಜಿಲ್ಲಾ ವೀರಶೈವ ಸಮಾಜದ ಮುಖಂಡರು ಸಂತಾಪ ಸೂಚಿಸಿದ್ದಾರೆ.

ನಾಗದೇವರ ಪ್ರತಿಷ್ಠಾಪನಾ ಮಹೋತ್ಸವ



ಕುಂದುರುಮೊಟ್ಟೆ ಚೌಟಿಮಾರಿಯಮ್ಮ ದೇವಾಲಯದ ನಾಗದೇವರ ಪ್ರತಿಷ್ಠಾಪನಾ ಮಹೋತ್ಸವ ನಡೆಯಿತು.

ಮಡಿಕೇರಿ: ಕುಂದುರುಮೊಟ್ಟೆ ಶ್ರೀ ಚೌಟಿಮಾರಿಯಮ್ಮ ದೇವಾಲಯದ ನಾಗದೇವರ ನೂತನ ಆಲಯ ಮತ್ತು ಪುನರ್ ಪ್ರತಿಷ್ಠಾಪನಾ ಮಹೋತ್ಸವ ನೆರವೇರಿತು.

ಕ್ಷೇತ್ರ ತಂತ್ರಿಗಳಾದ ಕೆ.ಶ್ರೀಕೃಷ್ಣ ಉಪಾಧ್ಯ ನೇತೃತ್ವದಲ್ಲಿ ಎರಡು ದಿನ ವಿವಿಧ ಪೂಜಾ ಕೈಂಕರ್ಯ ಜರುಗಿತು. ಉಡುಪಿಯ ವೇ.ಬ್ರ.ಶ್ರೀ ಎ.ಸುಬ್ರಹ್ಮಣ್ಯ ಮಧ್ಯಸ್ಥ ಅವರಿಂದ ನಾಗಪಾತ್ರಿ ನಾಗದರ್ಶನ ಸೇವೆ ನಡೆಯಿತು. ಆಶೀರ್ವಾದ, ತೀರ್ಥಪ್ರಸಾದ ವಿತರಣೆ ಹಾಗೂ ಅನ್ನದಾನ ನೆರವೇರಿತು. ದೇವಾಲಯದ ಮ್ಯಾನೇಜಿಂಗ್ ಟ್ರಸ್ಟಿಗಳು ಹಾಗೂ ನಗರದ ವಿವಿಧೆಡೆಯಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಹುಲಿ ದಾಳಿಗೆ ಎರಡು ಹಸು ಬಲಿ



ಹುಲಿ ದಾಳಿಗೆ ಬಲಿಯಾದ ಹಸುಗಳು.

ವಿರಾಜಪೇಟೆ, ಫೆ.24–ಅಮ್ಮತ್ತಿ ಹೋಬಳಿ ಬಿಳುಗುಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹುಲಿ ಹಾವಳಿ ಹೆಚ್ಚಾಗಿದ್ದು, ಒಂದೇ ದಿನ ಎರಡು ಜಾನುವಾರುಗಳನ್ನು ಕೊಂದುಹಾಕಿದ್ದು, ಕರುವನ್ನು ತೀವ್ರವಾಗಿ ಗಾಯಗೊಳಿಸಿದೆ.

ಬಿಳುಗುಂದ ಗ್ರಾಮದ ಮೂಕೋಂಡ ಸಂಪ ದೇವಯ್ಯ ಹಾಗೂ ಸಂತೋಷ್ ಅವರಿಗೆ ಸೇರಿದ ಹಸುಗಳು ಬಲಿಯಾಗಿದ್ದು, ಗಾಯಗೊಂಡ ಕರುವಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಶುಕ್ರವಾರ ಮೂರು ಜಾನುವಾರುಗಳು ಕಾಣೆಯಾಗಿದ್ದವು. ಹಸುವಿನ ಮಾಲೀಕರು ಹುಡುಕಾಟ ನಡೆಸಿದಾಗ ಶನಿವಾರ ಎರಡು ಹಸುಗಳ ಕಳೇಬರ ಪತ್ತೆಯಾಗಿವೆ. ಬಿಳುಗುಂದ, ಹೊಸಕೋಟೆ ನಲ್ವತೋಕ್ಲು ಗ್ರಾಮದಲ್ಲಿ ಹುಲಿ ಓಡಾಟದ ಗುರುತು ಪತ್ತೆಯಾಗಿದ್ದು, ಭಾನುವಾರ ಬಿಳುಗುಂದ ಗ್ರಾಮದ ಈಶ್ವರ ದೇವಾಲಯ ಬಳಿ ಗ್ರಾಮಸ್ಥರಿಗೆ ಹುಲಿ ಕಾಣಿಸಿಕೊಂಡಿದೆ.

ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಕಾಡುಪ್ರಾಣಿಗಳು ಸಾಕುಪ್ರಾಣಿಗಳ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಿದ್ದರೂ ಅರಣ್ಯ ಇಲಾಖೆ ಸಂಬಂಧ ಇಲ್ಲದ ರೀತಿ ವರ್ತಿಸುತ್ತಿದೆ. ವನ್ಯಜೀವಿಗಳ ಹಾವಳಿಯಿಂದ ಗ್ರಾಮಸ್ಥರು ಭಯದ ವಾತಾವರಣದಲ್ಲಿ ಜೀವನ ನಡೆಸುವ ಸ್ಥಿತಿ ಎದುರಾಗಿದೆ ಎಂದು ಮುಖಂಡ ಚಿಲ್ಲವಂಡ ಕಾವೇರಪ್ಪ ಆರೋಪಿಸಿದ್ದಾರೆ.

ಬೆಳಗಾವಿಯಲ್ಲಿ ಕಂಡಕ್ಟರ್ ಮೇಲೆ ಹಲ್ಲೆ: ಕರವೇ ಪ್ರತಿಭಟನೆ



ಬೆಳಗಾವಿಯಲ್ಲಿ ಕೆಎಸ್‌ಆರ್‌ಟಿಸಿ ನಿರ್ವಾಹಕನ ಮೇಲೆ ನಡೆದಿರುವ ಹಲ್ಲೆ ಖಂಡಿಸಿ ಕರವೇ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ.24–ಬೆಳಗಾವಿ ಬಾಳೆಕುಂದ್ರಿಯಲ್ಲಿ ಕೆಎಸ್‌ಆರ್‌ಟಿಸಿ ನಿರ್ವಾಹಕನ ಮೇಲೆ ನಡೆದಿರುವ ಹಲ್ಲೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಚಾಮರಾಜೇಶ್ವರ ಉದ್ಯಾನ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ರಚಿಸಿ ಕೆಲಕಾಲ ರಸ್ತೆ ತಡೆ ನಡೆಸಿದರು. ಎಂಇಎಸ್, ಮರಾಠಿ ಪುಂಡರು ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು.

ಕರವೇ ಜಿಲ್ಲಾಧ್ಯಕ್ಷ ಆರ್.ಮೋಹನ್ ಮಾತನಾಡಿ, ಬೆಳಗಾವಿ ಬಾಳಕುಂದ್ರಿಯಲ್ಲಿ ಕನ್ನಡದಲ್ಲಿ ಮಾತನಾಡಿದಕ್ಕೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ನಿರ್ವಾಹಕನ ಮೇಲೆ ಹಲ್ಲೆ ಮಾಡಿರುವ ಮರಾಠಿ ಪುಂಡರು ಹಾಗೂ ಸುಳ್ಳು ಮೊಕದ್ದಮೆ ಹಾಕಿರುವ ಅಲ್ಲಿನ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ತಾಲೂಕು ಅಧ್ಯಕ್ಷ ನವೀನ್ ಕ್ವಾಲಿಟಿ ಮಾತನಾಡಿ, ಬೆಳಗಾವಿ ಬಾಳೆಕುಂದ್ರಿಯಲ್ಲಿ ಮರಾಠಿಗರು ಕೆಎಸ್‌ಆರ್‌ಟಿಸಿ ಕಂಡಕ್ಟರ್ ಮೇಲೆ ಹಲ್ಲೆ ಮಾಡಿರುವುದು ಅತ್ಯಂತ ಖಂಡನೀಯ. ಕನ್ನಡದ ನೆಲದಲ್ಲಿ ಜೀವನ ಮಾಡುತ್ತಿರುವ ಮರಾಠಿ, ಎಂಇಎಸ್ ಗೂಂಡಾಗಳು ಪದೇಪದೆ ಕನ್ನಡಿಗರನ್ನು ಕೆಣಕುತ್ತಿದ್ದಾರೆ. ಅವರಿಗೆ ಕನ್ನಡಪರ ಸಂಘಟನೆಗಳಿಂದ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಸಂಘಟನೆ ರಿಯಾಜ್ ಪಾಷ, ಕೃಷ್ಣ, ವೆಂಕಟೇಶ್, ಅರ್ಜುನ್, ವಿಶ್ವಾಸ್, ರಾಜೇಂದ್ರ, ಮಹೇಶ್, ಪುರುಷೋತ್ತಮ್, ಬಾಬು, ಅವಿನಾಶ್, ಮಹೇಂದ್ರ, ಮಂಗಳಮ್ಮ, ಶಿವಮ್ಮ, ರೇಖಾ ಇತರರು ಇದ್ದರು.

ಕಾಂತರಾಜು ವರದಿ ಜಾರಿಗೊಳಿಸಲು ಆಗ್ರಹ



ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ನಡೆದ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಸಭೆಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಮಂಗಲ ಶಿವಕುಮಾರ್ ಮಾತನಾಡಿದರು.

ಚಾಮರಾಜನಗರ, ಫೆ.24–ಹಿಂದುಳಿದ ವರ್ಗಗಳ ಅಭ್ಯುದಯಕ್ಕೆ ಸಲ್ಲಿಸಿರುವ ಹೆಚ್.ಕಾಂತರಾಜು ವರದಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಬೇಕು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಮಂಗಲ ಶಿವಕುಮಾರ್ ಒತ್ತಾಯಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಕಳೆದ ಬಾರಿ ಘೋಷಣೆ ಮಾಡಿದ ಹಣವನ್ನೇ ಹಿಂದುಳಿದ ವರ್ಗಗಳ ನಿಗಮಗಳಿಗೆ ಶೇ.10ರಷ್ಟು ಹಣ ನೀಡಿಲ್ಲ. ಈ ಬಾರಿ ಹೆಚ್ಚು ಹಣ ನೀಡಬೇಕು. ಆ ಮೂಲಕ ಕಾಯಕ ಸಮಾಜಗಳಿಗೆ ನೆರವಾಗಬೇಕು ಎಂದು ಆಗ್ರಹಿಸಿದರು.

ನಿಗಮಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಆಯಾಯ ಸಮಾಜಗಳ ಅಭಿವೃದ್ಧಿಗೆ ಒತ್ತು ನೀಡಬೇಕು. ಹಿಂದಿನ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿದ್ದ ಸ್ಥಳೀಯ ಶಾಸಕ ಸಿ.ಪುಟ್ಟರಂಗಶೆಟ್ಟಿ ವರದಿ ಸ್ವೀಕರಿಸಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಒಪ್ಪಲಿಲ್ಲ ಎಂದು ಅವರ ಮೇಲೆ ಗೂಬೆ ಕೂರಿಸುವುದು ಬಿಟ್ಟು ಕಾಂತರಾಜು ವರದಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಎರಡು ವರ್ಷಗಳಿಂದ ಕುರ್ಚಿಗೆ ಕಂಟಕವಾಗಬಹುದು ಎಂದು ಮೀನಾಮೇಷ ಎಣಿಸುತ್ತಿರುವುದು ಹಿಂದುಳಿದ ವರ್ಗಗಳಿಗೆ ಮಾಡುವ ಅನ್ಯಾಯ, ಇದನ್ನು ಹಿಂದುಳಿದ ವರ್ಗಗಳು ಕ್ಷಮಿಸುವುದಿಲ್ಲ ಎಂದರು.

ಸಭೆಯಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳಾದ ಎಸ್.ರಾಮಶೆಟ್ಟಿ, ನಟರಾಜೇಗೌಡ, ಉಪಾಧ್ಯಕ್ಷರಾದ ಲಕ್ಷ್ಮಣ್, ಸವಿತಾ ಸಮಾಜದ ಸೋಮಣ್ಣ, ಮುಖಂಡರಾದ ಬೆಳ್ಳಶೆಟ್ಟಿ, ಮಹದೇವಸ್ವಾಮಿ, ನಾಗಶೆಟ್ಟಿ, ರಾಜೇಂದ್ರ, ನಂದೀಶ್ ವಿಶ್ವಕರ್ಮ, ಮಹದೇವ ಇತರರು ಇದ್ದರು.

ಇಂದಿನಿಂದ ಮ.ಬೆಟ್ಟದಲ್ಲಿ ಶಿವರಾತ್ರಿ ಜಾತ್ರೆ

● ಮಾ.1 ರಂದು ರಥೋತ್ಸವ ● ಕಾಲ್ನಡಿಗೆಯಲ್ಲಿ ಆಗಮಿಸುತ್ತಿರುವ ಸಾವಿರಾರು ಭಕ್ತರು

ಹನೂರು, ಫೆ.24–ತಾಲೂಕಿನ ಪ್ರಸಿದ್ಧ ಯಾತ್ರಾಸ್ಥಳ ಮಹದೇಶ್ವರಬೆಟ್ಟದ ದೇವಸ್ಥಾನದಲ್ಲಿ ಮಂಗಳವಾರದಿಂದ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ಆರಂಭವಾಗಲಿದ್ದು, ಕಾಲ್ನಡಿಗೆಯಲ್ಲಿ ಬರುವ ಸಾವಿರಾರು ಭಕ್ತರು ಶ್ರೀಕ್ಷೇತ್ರ ವಿವಿಧೆಡೆ ತಂಗುತ್ತಿದ್ದಾರೆ.

ಇಂದು ಜಾತ್ರೆಗೆ ಚಾಲನೆ: ಪವಾಡ ಪುರುಷ ಮಾದಪ್ಪನಿಗೆ ವಿಶೇಷ ಪೂಜೆ, ಪುನಸ್ಕಾರಗಳು ನಡೆಯುವ ಮೂಲಕ ಫೆ.25ರಂದು ಜಾತ್ರೆಗೆ ಚಾಲನೆ ನೀಡಲಾಗುವುದು. 26ರಂದು ಸ್ವಾಮಿಗೆ ಎಣ್ಣೆ ಮಜ್ಜನ ಸೇವೆ, ಉತ್ಸವಾದಿಗಳು, ಜಾಗರಣೆ ಜರುಗಲಿದೆ. 27ರಂದು ವಿಶೇಷ ಸೇವೆ, ಉತ್ಸವ, 28ರಂದು ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ, ಸೇವಾ ಉತ್ಸವಾದಿಗಳು ನಡೆಯಲಿವೆ.

ಮಹಾಶಿವರಾತ್ರಿ ಪ್ರಮುಖ ಆಕರ್ಷಣೆ ಮಾದಪ್ಪನ ರಥೋತ್ಸವವಾಗಿದ್ದು, ಮಹದೇಶ್ವರಬೆಟ್ಟದ ಬೇಡಗಂಪಣ ಅರ್ಚಕರು ಜಾತ್ರಾ ಮಹೋತ್ಸವಕ್ಕೆ ವಿಶೇಷ ರಥ ನಿರ್ಮಾಣ ಮಾಡಿದ್ದಾರೆ. ಬಿದಿರು ಹಾಗೂ ಹಗ್ಗಗಳಿಂದ ರಥವನ್ನು ನಿರ್ಮಾಣ ಮಾಡಲಾಗಿದ್ದು, ವಸ್ತ್ರ ಧಾರಣೆ ನಡೆದಿದೆ. ಇದರಿಂದ ಆಕರ್ಷಕವಾಗಿ ತೇರು ಕಂಗೊಳಿಸುತ್ತಿದೆ.

ಮಾ.1ರಂದು ಬೆಳಗ್ಗೆ 8.10ರಿಂದ 8.45ರ ನಡುವಿನ ಅವಧಿಯಲ್ಲಿ ಬ್ರಹ್ಮರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಲಿದೆ. ರಾತ್ರಿ ಅಭಿಷೇಕ, ಪೂಜೆ ಬಳಿಕ ಕೊಂಡೋತ್ಸವ ನಡೆಯಲಿದ್ದು, ಜಾತ್ರೆಗೆ ತೆರೆಬೀಳಲಿದೆ.



ಶಿವರಾತ್ರಿ ಜಾತ್ರೆ ಹಿನ್ನೆಲೆಯಲ್ಲಿ ಮಹದೇಶ್ವರಬೆಟ್ಟದಲ್ಲಿ ವಸ್ತ್ರಧಾರಣೆಗೊಂಡ ರಥ ಆಕರ್ಷಕವಾಗಿ ಕಂಗೊಳಿಸುತ್ತಿರುವುದು.

ಪ್ರಾಧಿಕಾರದಿಂದ ಸಿದ್ಧತೆ: ಐದು ದಿನ ನಡೆಯುವ ಶಿವರಾತ್ರಿ ಜಾತ್ರೆಯನ್ನು ಅಚ್ಚುಕಟ್ಟಾಗಿ ನೆರವೇರಿಸಲು ಶ್ರೀ ಮಲೆಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. ಭಕ್ತರಿಗೆ ವಿಶೇಷ ದಾಸೋಹ, ರಾಜಗೋಪುರ ಮುಂಭಾಗ ಹಾಗೂ ಸರದಿ ಸಾಲಿನ ಕಡೆ ನೆರಳಿನ ವ್ಯವಸ್ಥೆ ಮಾಡಲಾಗಿದೆ. ದೇವರ ದರ್ಶನ ಮಾಡುವ ವೇಳೆ ಭಕ್ತರ ನೂಕನುಗ್ಗಲು ತಡೆಗಟ್ಟಲು ಹೆಚ್ಚುವರಿ ಸರತಿ ಸಾಲುಗಳನ್ನು ನಿರ್ಮಾಣ ಮಾಡಿ ಪ್ರಸಾದ ವಿನಿಯೋಗಕ್ಕೆ ಹೆಚ್ಚುವರಿ ಲಾಡು ಕೌಂಟರ್‌ಗಳನ್ನು ತೆರೆಯಲಾಗಿದೆ. ವಿವಿಧ ಕಡೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಶೌಚಗೃಹ ಮತ್ತು ಅಗತ್ಯ ಸೌಕರ್ಯ ಒದಗಿಸಲಾಗಿದೆ.

ಮ.ಬೆಟ್ಟಕ್ಕೆ ದ್ವಿಚಕ್ರ, ತ್ರಿಚಕ್ರ ವಾಹನ ನಿಷೇಧ

ಚಾಮರಾಜನಗರ: ಮಹಾಶಿವರಾತ್ರಿ ಜಾತ್ರೆ ಹಿನ್ನೆಲೆಯಲ್ಲಿ ಮಹದೇಶ್ವರಬೆಟ್ಟಕ್ಕೆ ಫೆ.25ರ ಬೆಳಗ್ಗೆ 6 ಗಂಟೆಯಿಂದ ಮಾ.1ರ ಸಂಜೆ 7 ಗಂಟೆವರೆಗೆ ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳು (ಗೂಡ್ಸ್, ಪ್ರಯಾಣಿಕರ ಆಟೋ, ಬೈಕ್‌ಗಳು) ತೆರಳುವುದನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಶಿಲ್ಪನಾಗ್ ಆದೇಶಿಸಿದ್ದಾರೆ.

ಜಾತ್ರೆ ಹಿನ್ನೆಲೆಯಲ್ಲಿ ಮಹದೇಶ್ವರಬೆಟ್ಟಕ್ಕೆ ಜಿಲ್ಲೆ, ಹೊರ ಜಿಲ್ಲೆ, ವಿವಿಧ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ವಾಹನ ದಟ್ಟಣೆ ಹೆಚ್ಚಾಗಲಿದೆ. ಬೆಟ್ಟದ ರಸ್ತೆಗಳು ಅರಣ್ಯ ಪ್ರದೇಶ ಹಾಗೂ ಕಡಿದಾದ ತಿರುವುಗಳಿಂದ ಕೂಡಿದ್ದು, ವಾಹನ ಸಂಚಾರದಲ್ಲಿ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವ ಕಾರಣ ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಶಿವರಾತ್ರಿ ಜಾತ್ರೆ ಪ್ರಯುಕ್ತ ಭಕ್ತರಿಗೆ ಅನುಕೂಲವಾಗುವಂತೆ ವಿಶೇಷ ದಾಸೋಹ, ಕುಡಿಯುವ ನೀರು, ಲಾಡು ಕೌಂಟರ್, ಶೌಚಗೃಹ ಸೇರಿದಂತೆ ಅಗತ್ಯ ಸೌಕರ್ಯಕ್ಕೆ ಕ್ರಮವಹಿಸಲಾಗಿದೆ. ಮಾತ್ರ ಕುಟೀರ ಮತ್ತು ಅಲ್ಲಲ್ಲಿ ನೀರಿನ ವ್ಯವಸ್ಥೆಗೆ ಚಾಲನೆ ನೀಡಲಾಗಿದೆ.

–ಎ.ಈ.ರಘು, ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ

500 ಬಸ್‌ಗಳ ವ್ಯವಸ್ಥೆ: ಭಕ್ತರ ಅನುಕೂಲಕ್ಕಾಗಿ 500 ಬಸ್‌ಗಳು ಸಂಚಾರ ಮಾಡಲಿವೆ. ಕೌದಳ್ಳಿ ಗ್ರಾಮದ ಬಳಿ ದ್ವಿಚಕ್ರ ವಾಹನ ನಿಲುಗಡೆಗೆ ಸೌಲಭ್ಯ ಕಲ್ಪಿಸಲಾಗಿದೆ. 5 ಲಕ್ಷ ಲಾಡುಗಳನ್ನು ತಯಾರಿಸಲಾಗಿದ್ದು, ಭಕ್ತರ ಬೇಡಿಕೆ ತಕ್ಕಂತೆ ಹೆಚ್ಚುವರಿ ಲಾಡುಗಳು ಸಿದ್ಧವಾಗಲಿವೆ.

ವಿದ್ಯುತ್ ದೀಪಾಲಂಕಾರ: ದೇವಾಲಯ ಹಾಗೂ ಸುತ್ತಮುತ್ತ ಕಣ್ಮನ ಸೆಳೆಯುವ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ಈಗಾಗಲೇ ಜಾತ್ರೆ ಪ್ರಯುಕ್ತ ಕಾಲ್ನಡಿಗೆ ಹಾಗೂ ವಾಹನಗಳ ಮೂಲಕ ಬಂದಿರುವ ಭಕ್ತರು ದೇಗುಲದ ಪ್ರಾಂಗಣ, ಸಾಲೂರು ಬೃಹನ್ಮಠ ಹಾಗೂ ಇನ್ನಿತರ ಖಾಲಿ ಜಾಗಗಳಲ್ಲಿ ಬಿಡಾರ ಹೂಡಿದ್ದಾರೆ.

ಅರ್ಚಕರನ್ನು ಆಯ್ಕೆ ಮಾಡಿದ ಬಸವಣ್ಣ



ಬರಗಿ–ನಾಗಪಟ್ಟಣ ಗ್ರಾಮದ ದೇವಸ್ಥಾನಗಳಿಗೆ ಅರ್ಚಕರನ್ನು ಬಸವಣ್ಣನ ಮೂಲಕ ಆಯ್ಕೆ ಮಾಡಲಾಯಿತು.

ಗುಂಡ್ಲುಪೇಟೆ, ಫೆ.24–ತಾಲೂಕಿನ ಬರಗಿ–ನಾಗಪಟ್ಟಣ ಗ್ರಾಮದ ಮೂರು ದೇವಾಲಯಗಳಿಗೆ ಮೂವರು ಗುಡ್ಡಪ್ಪರನ್ನು (ಅರ್ಚಕರು) ಬಸವಣ್ಣನ ಮೂಲಕ ಆಯ್ಕೆ ಮಾಡಲಾಯಿತು.

ಅನಾದಿ ಕಾಲದಿಂದ ಗ್ರಾಮದ ದೇವಾಲಯಗಳಿಗೆ ಪೂಜಾರಿಗಳು ಇಲ್ಲದ ಕಾರಣ ಗ್ರಾಮಸ್ಥರು ಮಳವಳ್ಳಿ ಮಂಟೇಸ್ವಾಮಿ ಮಠದ ಬಸವಣ್ಣನ ಮೊರೆ ಹೋಗಿದ್ದರು. ಮಳವಳ್ಳಿಯ ಧರೆಗೆ ದೊಡ್ಡವರ ಪಟ್ಟದ ಮಠದ ಮಂಟೇಸ್ವಾಮಿ ಬಸವಣ್ಣನನ್ನು ಗ್ರಾಮಕ್ಕೆ ಕರೆಸಿ ಪೂಜಾರಿಗಳನ್ನು ಆಯ್ಕೆ ಮಾಡಲು ವರ ಕೇಳಲಾಯಿತು. ನಂತರ ಬಸವಣ್ಣ ಮೂವರು ಗುಡ್ಡಪ್ಪರನ್ನು ಆಯ್ಕೆ ಮಾಡಿತು.

ಖಾಸಗಿ ಶಾಲೆ ಬಳಿ ಯುವಕನ ಶವ ಪತ್ತೆ: ಕೊಲೆ ಶಂಕೆ

ಗುಂಡ್ಲುಪೇಟೆ: ಪಟ್ಟಣದ ಹೊರವಲಯದ ಖಾಸಗಿ ಶಾಲೆಯೊಂದರ ಕಾಂಪೌಂಡ್ ಬಳಿ ಸೋಮವಾರ ಯುವಕನ ಶವ ಪತ್ತೆಯಾಗಿದ್ದು, ಪೊಲೀಸರು ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ.

ಮೃತ ಯುವಕ ಊಟಿ ಮೂಲದ ದೇವರಾಜು(35) ಎಂದು ಗುರುತಿಸಲಾಗಿದೆ. ಬೆಳಗ್ಗೆ ಊಟಿ ರಸ್ತೆ ಪಕ್ಕದ ಶಾಲೆಯ ಕಾಂಪೌಂಡ್ ಸಮೀಪ ಈತನ ಶವ ಪತ್ತೆಯಾಗಿದ್ದು, ಕೈ ಕಾಲು ಹಾಗೂ ಮುಖದಲ್ಲಿ ರಕ್ತಸ್ರಾವವಾಗಿದೆ. ಬೇರೆ ಕಡೆ ಕೊಲೆ ಮಾಡಿ ತಂದು ಇಲ್ಲಿ ಬೀಸಾಡಲಾಗಿದೆ. ಶವದ ಜಾಗದಲ್ಲಿ ವಾಹನದ ಸುಳಿವು ಪತ್ತೆಯಾಗಿದ್ದು, ಈತನನ್ನು ಕೊಲೆ ಮಾಡಿರಬಹುದು ಎಂದು ಶಂಕೆ ಪೊಲೀಸರು ಶಂಕಿಸಿದ್ದಾರೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಹೆಚ್ಚುವರಿ ಎಸ್‌ಪಿ ಶಶಿಧರ್ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಯುವಕನ ಶವ ಪತ್ತೆಯಾದ ಗುಂಡ್ಲುಪೇಟೆ ಹೊರವಲಯದ ಖಾಸಗಿ ಶಾಲೆ ಬಳಿ ಎಸ್ಪಿ ಡಾ.ಬಿ.ಟಿ. ಕವಿತಾ, ಎಎಸ್ಪಿ ಶಶಿಧರ್ ಪರಿಶೀಲಿಸಿದರು.

ಗೃಹಜ್ಯೋತಿ ಸಹಾಯಧನ ಸರ್ಕಾರದಿಂದ ಮುಂಗಡವಾಗಿ ಎಸ್ಕಾಂಗಳಿಗೆ ಪಾವತಿಯಾಗುತ್ತದೆ

ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟನೆ





ಬೆಂಗಳೂರು, ಫೆ.24– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗೃಹಜ್ಯೋತಿಯ ಸಹಾಯಧನವನ್ನು ಎಸ್ಕಾಂಗಳಿಗೆ ಸರ್ಕಾರ ಮುಂಗಡವಾಗಿ ಪಾವತಿಸುತ್ತಿದ್ದು, ಗ್ರಾಹಕರಿಂದ ಹಣ ಪಡೆಯುವ ಯಾವುದೇ ಪ್ರಸ್ತಾಪ ಮುಂದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಬೆಳಕು ಭವನದಲ್ಲಿ ಸೋಮವಾರ ಆಯೋಜಿಸಿದ್ದ ಇಲಾಖೆಯ ಸಭೆಯ ನಂತರ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಈ ಬಗ್ಗೆ ವಿವರಣೆ ನೀಡಿದರು. ಗೃಹಜ್ಯೋತಿ ಹಣವನ್ನು ಸರ್ಕಾರ ಮುಂಗಡವಾಗಿ ಪಾವತಿಸದಿದ್ದರೆ ಜನರಿಂದ ಪಡೆಯಲು ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಎಸ್ಕಾಂಗಳು ಮನವಿ ಮಾಡಿವೆ ಎಂಬ ವಿಚಾರ ತಪ್ಪು ಕಲ್ಪನೆಯಿಂದ ಸೃಷ್ಟಿಯಾಗಿದೆ. ಸರ್ಕಾರಕ್ಕೆ ಅಂತಹ ಯಾವುದೇ ಉದ್ದೇಶ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗೃಹಜ್ಯೋತಿ ಯೋಜನೆ ಘೋಷಣೆ ಸಂದರ್ಭದಲ್ಲೇ, ಗೃಹ ಬಳಕೆದಾರರಿಗೆ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಪೂರೈಸುವುದಾಗಿ ಸರ್ಕಾರ ಹೇಳಿತ್ತು. ಸಬ್ಸಿಡಿ ಮೊತ್ತವನ್ನು ಸರ್ಕಾರದಿಂದಲೇ ಪಾವತಿ ಮಾಡುವುದಾಗಿಯೂ ಹೇಳಲಾಗಿತ್ತು. ಅದರಂತೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗುತ್ತಿದೆ.

ಫೆಬ್ರವರಿ 2025ರವರೆಗಿನ ಗೃಹ ಜ್ಯೋತಿ ಯೋಜನೆ ಸಹಾಯಧನವನ್ನು ಮುಂಗಡವಾಗಿ ಎಲ್ಲಾ ಎಸ್ಕಾಂಗಳಿಗೆ ಪಾವತಿಸಲಾಗಿದೆ ಎಂದು ಅವರು ವಿವರ ನೀಡಿದರು. ಕೆಇಆರ್‌ಸಿ (ಸಹಾಯಧನ ಪಾವತಿ ವಿಧಾನ) ನಿಯಮ 2008ರಲ್ಲಿ ವಿದ್ಯುತ್ ಯೋಜನೆಗಳ ಸಹಾಯಧನವು ರಾಜ್ಯ ಸರ್ಕಾರದಿಂದ ಮುಂಗಡವಾಗಿ ಪಾವತಿಯಾಗದಿದ್ದರೆ ಗ್ರಾಹಕರಿಂದ ಪಡೆಯಲು ಎಸ್ಕಾಂಗಳಿಗೆ ಅವಕಾಶ ಕಲ್ಪಿಸುತ್ತದೆ. ಈ ಸಾಮಾನ್ಯ ನಿಯಮವನ್ನೇ ತಪ್ಪಾಗಿ ಗ್ರಹಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಪಿಹೆಚ್.ಡಿ ಪದವಿ



ಮೈಸೂರು, ಫೆ.24– ಡಾ. ಎನ್.ಎಸ್ ಹರಿನಾರಾಯಣ ಅವರ ಮಾರ್ಗದರ್ಶನದಲ್ಲಿ ಚಿಕ್ಕು ಬಾಲಚಂದ್ರನ್ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ, ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಇಲವಾಲದಲ್ಲಿ ಡಾ.ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ

ದಲಿತ ಸಮುದಾಯ ಮೊದಲಿನಿಂದಲೂ ನನ್ನ ಬೆಂಬಲಿಸಿಕೊಂಡು ಬಂದಿದೆ: ಜಿಟಿಡಿ ಕೃತಜ್ಞತೆ



ಮೈಸೂರು ತಾಲೂಕಿನ ಇಲವಾಲ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡರು ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು, ಫೆ.24(ಎಸ್‌ಬಿಡಿ)– ಎಲ್ಲರೂ ಜಾತಿ–ಧರ್ಮ ಮೀರಿ ಮನುಷ್ಯರಾಗಿ ಒಟ್ಟಾಗಿ ಸಾಗಬೇಕಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಆಶಿಸಿದರು.

ಮೈಸೂರು ತಾಲೂಕಿನ ಇಲವಾಲ ಗ್ರಾಮದಲ್ಲಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಎಲ್ಲರಿಗೂ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಕಲ್ಪಿಸಿಕೊಟ್ಟರು. ಅವರು ನೀಡಿದ ಜಗತ್ತಿನ ಅತ್ಯಂತ ಶ್ರೇಷ್ಠ ಸಂವಿಧಾನದ ಆಶ್ರಯದಲ್ಲೇ ಆಡಳಿತ ನಡೆಯುತ್ತಿದೆ. ಆದರೆ ಸ್ವಾತಂತ್ರ್ಯ ಬಂದು ಏಳೂವರೆ ದಶಕ ಕಳೆದರೂ 'ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು' ಸಾಧ್ಯವಾಗಿಲ್ಲ. ಈ ಆಶಯ ಸಾಕಾರವಾಗುವುದು ಎಲ್ಲರೂ ಜಾತಿ–ಧರ್ಮದ ಸಂಕೋಲೆಯಿಂದ ಹೊರಬಂದು ಸಾಮರಸ್ಯದಿಂದ ಜೀವನ ನಡೆಸಿದಾಗ ಮಾತ್ರ ಎಂದರು.

ನಾನು ಮೊದಲಿನಿಂದಲೂ ಗುಂಗ್ರಾಲ್ ಛತ್ರದ ಅಕ್ಕಪಕ್ಕದ ಗ್ರಾಮಗಳ ದಲಿತರೊಂದಿಗೆ ಆತ್ಮೀಯತೆ ಇಟ್ಟುಕೊಂಡು ಬಂದವನು. ಕೃಷಿ ಕೆಲಸಕ್ಕೆ ರಟ್ನಹಳ್ಳಿ ಗ್ರಾಮದ ದಲಿತರು ನೆರವಾಗುತ್ತಿದ್ದರು. ಚಿಕ್ಕಯ್ಯನ್ನು ಸೊಸೈಟಿ ನಿರ್ದೇಶಕನಾಗಿ ಮಾಡಿದೆ. ಆದರೂ ಆತ ಸಂಕೋಚಪಡುತ್ತಿದ್ದ. ಆಗ ಎಲ್ಲರ ಸಮಾನವಾಗಿ ಕೂರಿಸಿ, ಆತನ ಅಂಜಿಕೆ ಸ್ವಭಾವವನ್ನು ದೂರಾಗಿಸಲು ಪ್ರಯತ್ನಿಸಿದೆ. ಡಾ.ಅಂಬೇಡ್ಕರ್ ವಿಚಾರ ಧಾರೆಗಳನ್ನು ಇಂದಿನ ಯುವ ಜನರಿಗೆ ಮನವರಿಕೆ ಮಾಡಿಕೊಡಬೇಕು. ದಿವಂಗತ ವಿ.ಶ್ರೀನಿವಾಸಪ್ರಸಾದ್ ಅವರಿಗಿದ್ದ ದಲಿತರ ಮೇಲಿನ ಕಾಳಜಿ ಮರೆಯಲು ಸಾಧ್ಯವಿಲ್ಲ. ನಾವಿಬ್ಬರೂ ತುಂಬಾ ಆತ್ಮೀಯರಾಗಿದ್ದೆವು. ಅವರೊಂದಿಗೆ ಸಾಕಷ್ಟು ದಲಿತ ಪರವಾದ ಕೆಲಸ ಮಾಡಿದ್ದೇನೆ. ಕ್ಷೇತ್ರದ ದಲಿತ ಸಮುದಾಯ ಈವರೆಗೂ ನನ್ನನ್ನು ಆಶೀರ್ವದಿಸಿಕೊಂಡು ಬಂದಿದೆ ಎಂದು ಹೇಳಿದರು.

ವರ್ಷದೊಳಗೆ 24 ಗಂಟೆ ನೀರು: ಚಾಮುಂಡೇಶ್ವರಿ ಕ್ಷೇತ್ರದ ಜನ ಯಾವುದೇ ಕೆಲಸ ಹೇಳಿದರೂ ಅದಕ್ಕಾಗಿ ನಾನು ಸಿದ್ಧನಿರುತ್ತೇನೆ. ಕ್ಷೇತ್ರದ ಅಭಿವೃದ್ಧಿಗಾಗಿ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದೇನೆ. ದೊಡ್ಡ ಕ್ಷೇತ್ರವಾಗಿರುವುದರಿಂದ ಮೂಲಸೌಕರ್ಯಕ್ಕೆ ಹೆಚ್ಚು ಗಮನಹರಿಸಿದ್ದೇನೆ. ಖಾಸಗಿ ಬಡಾವಣೆಗಳಿಗೆ ಮುಡಾ ಅಥವಾ ನಗರಪಾಲಿಕೆಯಿಂದ ಮೂಲಸೌಲಭ್ಯ ಕಲ್ಪಿಸಿಲ್ಲ. ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ 52 ಹಳ್ಳಿಗಳಿಗೆ ನೀರು ಕೊಡಲು ಹಳೇ ಉಂಡುವಾಡಿ ಯೋಜನೆಯನ್ನು ರೂಪಿಸಲಾಗಿತ್ತು. ನಂತರ ಕ್ಷೇತ್ರದ ವ್ಯಾಪ್ತಿಯ 250 ಹಳ್ಳಿಗಳಿಗೆ ದಿನದ 24 ಗಂಟೆಗಳ ಕಾಲ ನೀರು ಒದಗಿಸುವ 595 ಕೋಟಿ ರೂ.ವೆಚ್ಚದ ಯೋಜನೆ ಪ್ರಗತಿಯಲ್ಲಿದ್ದು, ಇನ್ನೊಂದು ವರ್ಷದಲ್ಲಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಒಂದು ನಗರಸಭೆ, ನಾಲ್ಕು ಪಟ್ಟಣ ಪಂಚಾಯಿತಿ ಹಾಗೂ ಹಲವು ಗ್ರಾಮ ಪಂಚಾಯಿತಿಗಳನ್ನು ಸೇರಿಸಿಕೊಂಡು ಬೃಹತ್ ಮಹಾನಗರ ಪಾಲಿಕೆಯಾಗಿ ರೂಪಿಸಲು ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಕರೆದಿದ್ದ ಸಭೆಯಲ್ಲಿ ಕ್ಷೇತ್ರದ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿದ್ದೇನೆ. ಪ್ರಸ್ತುತ ವ್ಯವಸಾಯ ಕಡಿಮೆಯಾಗಿದೆ. ಸರಳ ಜೀವನಕ್ಕಿಂತ ವೈಭೋಗದ ಜೀವನ ಬಯಸುವವರು ಹೆಚ್ಚಾಗಿದ್ದಾರೆ. ನನ್ನ ಮಕ್ಕಳಿಗೆ ಸರಳ ವಿವಾಹ ಮಾಡಿಸಿದೆ. ಆದರೆ ಈಗ ಹಲವು ರೈತರು ಜಮೀನು ಮಾರಿ, ಅದ್ದೂರಿಯಾಗಿ ಮಕ್ಕಳ ಮದುವೆ ಮಾಡುತ್ತಿದ್ದಾರೆ. ಮನೆ ನಿರ್ಮಾಣ, ವಾಹನಗಳ ಖರೀದಿ ಇನ್ನಿತರ ಕಾರಣಗಳಿಗೆ ಮಾಡಿದ್ದ ಸಾಲ ತೀರಿಸಲು ಜಮೀನು ಕಳೆದುಕೊಳ್ಳುತ್ತಿದ್ದಾರೆ. ಆಮೇಲೆ ನನ್ನ ಮಗನಿಗೊಂದು ಕೆಲಸ ಕೊಡಿಸಿ ಅಂತ ಅರ್ಜಿ ಹಿಡಿದು ರಾಜಕಾರಣಿಗಳ ಹಿಂದೆ ಓಡಾಡುತ್ತಾರೆ. ಈ ಬಗ್ಗೆ ರೈತರು ಯೋಚಿಸಬೇಕು. ಜಮೀನನ್ನು ಕಳೆದುಕೊಳ್ಳದೆ ವ್ಯವಸಾಯ ಮುಂದುವರೆಸಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಮುಖಂಡರಾದ ನರೇಂದ್ರ, ನಾಗರಾಜು, ದೇವರಾಜು ಒಡೆಯರ್, ಗಂಗಾಧರಗೌಡ, ಡಾ.ಪ್ರಕಾಶ್, ಅರುಣ್ ಕುಮಾರ್, ಚಿಕ್ಕವೀರಯ್ಯ, ರವಿ, ವೈ.ಸಿ.ಸ್ವಾಮಿ, ಚಂದ್ರಗುಪ್ತ, ರಮೇಶ್, ಯಜಮಾನರಾದ ಕಾಳಯ್ಯ, ಗೋವಿಂದರಾಜು, ಶಿವಸ್ವಾಮಿ, ಈಶ್ವರ್, ಚೆಲುವರಾಜು, ಚಿಕ್ಕಚಲುವ, ಶ್ರೀನಿವಾಸ, ಮಹದೇವು ಮತ್ತಿತರರು ಉಪಸ್ಥಿತರಿದ್ದರು.

ಜಾರ್ಖಂಡ್‌ನಲ್ಲಿ ಬುಡಕಟ್ಟು ಬಾಲಕಿಯರ ಮೇಲೆ ಸಾಮೂಹಿಕ ಅತ್ಯಾಚಾರ!

ರಾಂಚಿ: ಫೆಬ್ರವರಿ 21 ರಂದು ತಡರಾತ್ರಿ ಜಾರ್ಖಂಡ್‌ನ ಖುಂಟಿ ರಾನಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಉಲಿಹಾಟು ಗ್ರಾಮದಲ್ಲಿ ಡಜನ್‌ಗಟ್ಟಲೆ ಅಪ್ರಾಪ್ತ ವಯಸ್ಕ ಯುವಕರು ಮೂವರು ಬುಡಕಟ್ಟು ಅಪ್ರಾಪ್ತ ಬಾಲಕಿಯರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ.

ಪೊಲೀಸರ ಪ್ರಕಾರ, ಉಲಿಹತುವಿನಿಂದ ನಿಚಿತ್‌ಪುರಕ್ಕೆ ಹೋಗುವ ದಾರಿಯಲ್ಲಿ ಕರೋ ನದಿಯ ಬಳಿ ಮದುವೆ ಸಮಾರಂಭದಲ್ಲಿ ಭಾಗವಹಿಸಿ ಮನೆಗೆ ಹಿಂತಿರುಗುತ್ತಿದ್ದ ಐದು ಹುಡುಗಿಯರನ್ನು ದಾರಿಯಲ್ಲಿ 18 ಅಪ್ರಾಪ್ತ ಬಾಲಕರು ತಡೆದಿದ್ದಾರೆ. ಅವರಲ್ಲಿ ಕೆಲವರು ಮೂವರು ಬಾಲಕಿಯರ ಮೇಲೆ ಅತ್ಯಾಚಾರ ಎಸಗಿದ್ದಾರೆ.

ಘಟನೆಯ ಬಗ್ಗೆ ಯಾರಿಗೂ ಹೇಳದಂತೆ ಹುಡುಗರು, ಬಾಲಕಿಯರಿಗೆ ಬೆದರಿಕೆ ಹಾಕಿದ್ದಾರೆ. ಹೇಗೋ ಹುಡುಗಿಯರು ಶನಿವಾರ ತಮ್ಮ ಮನೆಗೆ ತಲುಪಿ ತಮ್ಮ ಕುಟುಂಬಗಳಿಗೆ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ನಂತರ, ಕುಟುಂಬ ಸದಸ್ಯರು, ಗ್ರಾಮಸ್ಥರೊಂದಿಗೆ ಪೊಲೀಸರಿಗೆ ಮಾಹಿತಿ ನೀಡಿದ್ದು, ಮೂವರು ಬಾಲಕಿಯರು ನೀಡಿದ ಹೇಳಿಕೆ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

ಖುಂಟಿ ಎಸ್‌ಪಿ ಎಲ್ಲಾ 18 ಆರೋಪಿ ಅಪ್ರಾಪ್ತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಮೂವರು ಅಪ್ರಾಪ್ತ ಬುಡಕಟ್ಟು ಹುಡುಗಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ. ವಿಷಯದ ಗಂಭೀರತೆಯನ್ನು ಗಮನಿಸಿ, ತನಿಖೆಯನ್ನು ತೀವ್ರಗೊಳಿಸಲಾಗಿದೆ. ಪ್ರಕರಣದಲ್ಲಿ ಎಲ್ಲಾ 18 ಆರೋಪಿ ಅಪ್ರಾಪ್ತರನ್ನು ಬಂಧಿಸಲಾಗಿದೆ ಮತ್ತು ವಿಚಾರಣೆ ನಡೆಸಲಾಗುತ್ತಿದೆ ಎಂದು ಖುಂಟಿ ಎಸ್‌ಪಿ ಅಮನ್ ಕುಮಾರ್ ಹೇಳಿದ್ದಾರೆ.

ಆರೋಪಿಗಳು ಮತ್ತು ಸಂತ್ರಸ್ತ ಬಾಲಕಿಯರು ಇಬ್ಬರೂ ಒಂದೇ ಮದುವೆ ಸಮಾರಂಭದಿಂದ ಹಿಂತಿರುಗುತ್ತಿದ್ದರು ಎಂದು ಅವರು ತಿಳಿಸಿದ್ದಾರೆ.

ಬಹುಮಾನ ವಿತರಣೆ



ರೋಟರಿ ಕ್ಲಬ್ ಆಫ್ ಮೈಸೂರ್ ಅಂಬಾರಿ ವತಿಯಿಂದ ಆಯೋಜಿಸಿದ್ದ ಬ್ಯಾಡ್ಮಿಂಟನ್ ಹಾಗೂ ಕೇರಂ ಟೂರ್ನಮೆಂಟ್ ಸ್ಪರ್ಧೆಯ ವಿಜೇತರಿಗೆ ಜಿಲ್ಲಾ ಗವರ್ನರ್ ಯಶಸ್ವಿ ಸೋಮಶೇಖರ್, ಮೈಸೂರು ಮಹಾನಗರ ಪಾಲಿಕೆ ನಿಕಟಪೂರ್ವ ಸದಸ್ಯ ಎಸ್‌ಬಿಎಂ ಮಂಜು, ಸಹಾಯಕ ಗೌರ್ನರ್ ಕೇಶವ ಪ್ರಕಾಶ್ ಬಹುಮಾನವನ್ನು ವಿತರಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ಯದುಕೃಷ್ಣ, ಕಾರ್ಯಾಧ್ಯಕ್ಷ ಜಗದೀಶ್, ಹರೀಶ್, ಕಿರಣ್ ಕುಮಾರ್. ಎನ್.ಭರತ್ ಇನ್ನಿತರರು ಉಪಸ್ಥಿತರಿದ್ದರು

ವಿಜೃಂಭಣೆಯಿಂದ ಜರುಗಿದ ತೊಣಚಿಕೊಪ್ಪಲು

ಶ್ರೀ ಬಿಸಿಲು ಮಾರಮ್ಮ ಜಾತ್ರೆ

ಭಕ್ತಿಯ ಪರಾಕಾಷ್ಠೆ ಮೆರೆದ ಭಕ್ತ ಸಾಗರ





ಮೈಸೂರಿನ ತೊಣಚಿಕೊಪ್ಪಲಿನ ಶ್ರೀ ಬಿಸಿಲು ಮಾರಮ್ಮ ದೇವಸ್ಥಾನದ ಆವರಣದಲ್ಲಿ ಜಾತ್ರೆ ಪ್ರಯುಕ್ತ ಸೋಮವಾರ ಅಪಾರ ಸಂಖ್ಯೆಯಲ್ಲಿ ನೆರೆದಿರುವ ಭಕ್ತರು. ಮತ್ತೊಂದು ಚಿತ್ರದಲ್ಲಿ ಸೋಮವಾರ ರಾತ್ರಿ ಉತ್ಸವ ಮೂರ್ತಿಯ ಪಲ್ಲಕ್ಕಿ ಉತ್ಸವದ ಮೆರವಣಿಗೆ ನಡೆದಿದ್ದನ್ನು ಕಾಣಬಹುದು.

ಮೈಸೂರು, ಫೆ.24(ಪಿಎಂ)– ಮೈಸೂರಿನ ತೊಣಚಿಕೊಪ್ಪಲು ಶ್ರೀ ಬಿಸಿಲು ಮಾರಮ್ಮ ಜಾತ್ರೆ ಮಹೋತ್ಸವ ಸೋಮವಾರ ವಿಜೃಂಭಣೆಯಿಂದ ಜರುಗಿತು. ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡು ಭಕ್ತಿಯ ಪರಾಕಾಷ್ಠೆ ಮೆರೆದರು.

ಜಾತ್ರೆಯ ಕೇಂದ್ರಬಿಂದುವಾದ ತೊಣಚಿಕೊಪ್ಪಲಿನ ಶ್ರೀ ಬಿಸಿಲು ಮಾರಮ್ಮ ದೇವಸ್ಥಾನಕ್ಕೆ ಬೆಳಗ್ಗೆಯಿಂದ ಭಕ್ತರ ಸಾಗರ ಹರಿದು ಬಂದಿತ್ತು. ಬಿಸಿಲು ಮಾರಮ್ಮ ದೇವಸ್ಥಾನದಲ್ಲಿ ಬೆಳಗ್ಗೆ 4 ಗಂಟೆಗೆ ಹೋಮ ಸೇರಿದಂತೆ ಪೂಜಾ ಕೈಂಕರ್ಯ ನಡೆಯಿತು. ಬೆಳಗ್ಗೆ 5 ಗಂಟೆ ನಂತರ ಭಕ್ತರು ಮಾರಮ್ಮನ ದರ್ಶನ ಪಡೆಯಲು ಹಾಗೂ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು.


ನಂತರ ನಡೆದ ತಂಪಿನ ಮೆರವಣಿಗೆಯಲ್ಲಿ ಹೊಂಬಾಳೆ ಮತ್ತು ತಂಬಿಟ್ಟು ಹೊತ್ತ ಮಹಿಳೆಯರು ಹೆಜ್ಜೆ ಹಾಕಿದರು. ತೊಣಚಿಕೊಪ್ಪಲು ಗ್ರಾಮದ ಹುಚ್ಚಮ್ಮ ತಾಯಿ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆಯು, ಬಿಸಿಲು ಮಾರಮ್ಮನ ದೇವಸ್ಥಾನಕ್ಕೆ ಮಧ್ಯಾಹ್ನ ವೇಳೆಗೆ ಆಗಮಿಸಿತು. ಭಾನುವಾರವೇ ಗ್ರಾಮದ ಹುಚ್ಚಮ್ಮತಾಯಿ ದೇವಸ್ಥಾನದಿಂದ ಬಿಸಿಲು ಮಾರಮ್ಮನ ಉತ್ಸವ ಮೂರ್ತಿಯನ್ನು ತಂದು ಬಿಸಿಲು ಮಾರಮ್ಮ ದೇವಸ್ಥಾನದ ಗರ್ಭಗುಡಿಯ ಉದ್ಭವ ಮೂರ್ತಿ ಮುಂದೆ ಪ್ರತಿಷ್ಠಾಪಿಸಲಾಗಿತ್ತು.

ಇಂದು ರಾತ್ರಿ 8.30ರ ವೇಳೆಗೆ ಉತ್ಸವ ಮೂರ್ತಿಯ ಪಲ್ಲಕ್ಕಿ ಉತ್ಸವಕ್ಕೆ ಬಿಸಿಲು ಮಾರಮ್ಮ ದೇವಸ್ಥಾನದ ಆವರಣದಲ್ಲಿ ಚಾಲನೆ ದೊರೆಯಿತು. ಇಲ್ಲಿಂದ ಹೊರಟ ಉತ್ಸವ ಮೂರ್ತಿಯ ಪಲ್ಲಕ್ಕಿ ಉತ್ಸವವು ಗಂಗೋತ್ರಿ ಬಡಾವಣೆ ಹಾಗೂ ತೊಣಚಿಕೊಪ್ಪಲಿನ ಪ್ರಮುಖ ಬೀದಿಯಲ್ಲಿ ಸಾಗಿತು. ಅಂತಿಮವಾಗಿ ತೊಣಚಿಕೊಪ್ಪಲಿನ ಹುಚ್ಚಮ್ಮತಾಯಿ ದೇವಸ್ಥಾನಕ್ಕೆ ಪಲ್ಲಕ್ಕಿ ಉತ್ಸವ ತಲುಪಿ ಅಂತ್ಯಗೊಂಡಿತು. ಇದೇ ವೇಳೆ ಉತ್ಸವ ಮೂರ್ತಿಯನ್ನು ಹುಚ್ಚಮ್ಮ ತಾಯಿ ದೇವಸ್ಥಾನದಲ್ಲಿ ಇರಿಸಲಾಯಿತು.

ಶಿವರಾತ್ರಿ ಹಬ್ಬದಂದು ಅನ್ನಸಂತರ್ಪಣೆ: ಫೆ.26ರ ಶಿವರಾತ್ರಿ ಹಬ್ಬದ ದಿನದಂದು ಊರಿನ ಎಲ್ಲಾ ದೇವಸ್ಥಾನಗಳ ದೇವರ ಉತ್ಸವ ಮೂರ್ತಿಗಳು ಹಾಗೂ ದೇವರ ಸಾಮಗ್ರಿಗಳನ್ನು ಪೆಟ್ಟಿಗೆಗಳಲ್ಲಿ ತುಂಬಿಕೊಂಡು ಪಾದಯಾತ್ರೆ ಮೂಲಕ ಕಾವೇರಿ ತೀರದ ಪವಿತ್ರ ಯಾತ್ರಾಸ್ಥಳವಾದ ಬಲಮುರಿಗೆ ಗ್ರಾಮದ ನೂರಾರು ಮಂದಿ ತೆರಳಲಿದ್ದಾರೆ. ಅಲ್ಲಿ ಉತ್ಸವ ಮೂರ್ತಿಗಳು, ದೇವರ ಸಾಮಗ್ರಿಗಳನ್ನು ಶುಚಿಗೊಳಿಸಿ ನಂತರ ಅವುಗಳಿಗೆ ವಿಶೇಷ ಪೂಜೆ ಮತ್ತು ಹೋಮ ನೆರವೇರಿಸಿ ಕಾಲ್ನಡಿಗೆ ಮೂಲಕವೇ ಅದೇ ದಿನ ಮಧ್ಯಾಹ್ನ 3 ಗಂಟೆ ವೇಳೆಗೆ ತೊಣಚಿಕೊಪ್ಪಲಿನ ಬಿಸಿಲು ಮಾರಮ್ಮ ದೇವಸ್ಥಾನಕ್ಕೆ ಮರಳಲಾಗುತ್ತದೆ. ಬಳಿಕ ಇದೇ ದೇವಸ್ಥಾನದ ಆವರಣದಲ್ಲಿ ಅನ್ನ ಸಂತರ್ಪಣೆಗೆ ಚಾಲನೆ ದೊರೆಯಲಿದೆ.

ಐಎಂಎ ಬಹುಕೋಟಿ ವಂಚನೆ ಪ್ರಕರಣ

ಕೊನೆಗೂ ಹಣ ಕಳೆದುಕೊಂಡವರಿಗೆ ರಂಜಾನ್‌ಗೂ ಮುನ್ನ ಸಿಗಲಿದೆ ಪರಿಹಾರ



ಬೆಂಗಳೂರು, ಫೆ.24– ಐಎಂಎ (ಐ–ಮಾನಿಟರಿ ಅಡ್ವೈಸರಿ) ಬಹುಕೋಟಿ ವಂಚನೆ ಪ್ರಕರಣದಿಂದಾಗಿ ಹಣ ಕಳೆದುಕೊಂಡ ಎಲ್ಲಾ ಠೇವಣಿದಾರರಿಗೂ ರಂಜಾನ್ ಹಬ್ಬಕ್ಕೂ ಮುನ್ನ ನಿಗದಿತ ಪರಿಹಾರದ ಹಣವನ್ನು ನೀಡಲು ಕ್ರಮವಹಿಸಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ಭರವಸೆ ನೀಡಿದರು.

ಈ ವರೆಗೆ ಈ ಸಂಸ್ಥೆಯ ಎಷ್ಟು ಕೋಟಿ ಮೌಲ್ಯದ ಸ್ಥಿರಾಸ್ತಿ/ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ, ಕಳೆದ ಏಳು ವರ್ಷದಲ್ಲಿ ಈ ಕಂಪೆನಿಯಲ್ಲಿ ಹಣ ಹೂಡಿ ಕಳೆದುಕೊಂಡ ಎಷ್ಟು ಜನರಿಗೆ ಎಷ್ಟು ಪ್ರಮಾಣದಲ್ಲಿ ಹಣ ಹಿಂತಿರುಗಿಸಲಾಗಿದೆ ಮತ್ತು ಉಳಿದ ಸಂತ್ರಸ್ತರಿಗೆ ಯಾವಾಗ ಮತ್ತು ಹೇಗೆ ಹಣ ಹಿಂತಿರುಗಿಸಬೇಕು? ಎಂಬ ಕುರಿತು ಸೋಮವಾರ ವಿಕಾಸಸೌಧ ಕಚೇರಿಯಲ್ಲಿ ಸಭೆ ನಡೆಸಿ ಚರ್ಚಿಸಲಾಯಿತು.

ಈ ಸಭೆಯಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್, ಶಾಸಕ ರಿಜ್ವಾನ್ ಅರ್ಷದ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಜೊತೆ ಐಎಂಎ ಹಗರಣದಿಂದ ಹಣ ಕಳೆದುಕೊಂಡ ಹಲವರು ಭಾಗಿಯಾಗಿದ್ದರು. ಈ ವೇಳೆ ಸಂತ್ರಸ್ತರಿಗೆ ಭರವಸೆ ನೀಡಿದ ಸಚಿವ ಕೃಷ್ಣ ಬೈರೇಗೌಡ, ರಂಜಾನ್ ಹಬ್ಬಕ್ಕೂ ಹತ್ತು ದಿನ ಮೊದಲೇ ಐಎಂಎನಲ್ಲಿ ಹಣ ಹೂಡಿ ಮೋಸ ಹೋದವರಿಗೆ ಅವರ ಹೂಡಿಕೆಯ ಅನುಪಾತದ ಆಧಾರದಲ್ಲಿ ಪರಿಹಾರ ನೀಡಲು ಕ್ರಮವಹಿಸಲಾಗುವುದು ಎಂದರು.

ಹಣ ಡಬ್ಲಿಂಗ್ ಆಸೆಯಿಂದಾಗಿ ಸುಮಾರು ಒಂದು ಲಕ್ಷಕ್ಕೂ ಅಧಿಕ ಠೇವಣಿದಾರರು 3213.58 ಕೋಟಿ ರೂ.ಗಳನ್ನು ಐಎಂಎ ಕಂಪೆನಿಯಲ್ಲಿ ಹೂಡಿಕೆ ಮಾಡಿ ಮೋಸ ಹೋಗಿದ್ದಾರೆ. ಕಂಪೆನಿಯ ಒಟ್ಟು ಠೇವಣಿದಾರರ ಸಂಖ್ಯೆ 69069. ಈ ಪೈಕಿ 1,400 ಕೋಟಿ ರೂ.ಗಳನ್ನು ಲಾಭಾಂಶದ ಮಾದರಿಯಲ್ಲಿ ಐಎಂಎ ಕಾಲಕಾಲಕ್ಕೆ ಠೇವಣಿದಾರರಿಗೆ ನೀಡುತ್ತಾ ಬಂದಿದೆ. ಹಗರಣ ಬೆಳಕಿಗೆ ಬಂದ ನಂತರ ವಿಶೇಷ ನ್ಯಾಯಾಲಯದ ಆದೇಶದಂತೆ ಕಂಪೆನಿ ಖಾತೆಯಲ್ಲಿದ್ದ 19.12 ಕೋಟಿ ರೂ.ಗಳನ್ನು 50,000 ರೂ.ಗಳಂತೆ 6,858 ಸಂತ್ರಸ್ತರ ಖಾತೆಗಳಿಗೆ 2022 ಏಪ್ರಿಲ್‌ನಲ್ಲಿ ಜಮೆ ಮಾಡಲಾಗಿತ್ತು.



ವಿಕಾಸಸೌಧ ಕಚೇರಿಯಲ್ಲಿ ಐಎಂಎ ಬಹುಕೋಟಿ ವಂಚನೆ ಪ್ರಕರಣ ಸಂಬಂಧ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಭೆ ನಡೆಸಿದರು.

66.66 ಕೋಟಿ ರೂ.ಗಳನ್ನು 53,142 ಸಂತ್ರಸ್ತರ ಖಾತೆಗಳಿಗೆ 2023ರ ನವೆಂಬರ್ 8ರಂದು ಜಮೆ ಮಾಡಲಾಗಿತ್ತು. 1.28 ಕೋಟಿ ರೂ.ಗಳನ್ನು 626 ಸಂತ್ರಸ್ತರ ಖಾತೆಗಳಿಗೆ 2024ರ ಮೇ 23ರಂದು ಜಮೆ ಮಾಡಲಾಗಿತ್ತು. 276 ಸಂತ್ರಸ್ತರಿಗೆ 36.14 ಲಕ್ಷ ರೂ.ಗಳನ್ನು 2024ರ ನವೆಂಬರ್ 7ರಂದು ಜಮೆ ಮಾಡಲಾಗಿತ್ತು. ಒಟ್ಟಾರೆ ಈವರೆಗೆ 87.43 ಕೋಟಿ ರೂ.ಗಳನ್ನು 60,902 ಸಂತ್ರಸ್ತರ ಖಾತೆಗಳಿಗೆ ಜಮೆ ಮಾಡಲಾಗಿದೆ ಎಂದು ಸಭೆಯಲ್ಲಿ ಮಾಹಿತಿ ಹಂಚಿಕೊಳ್ಳಲಾಯಿತು.

ಐಎಂಎ ಕಂಪೆನಿಗೆ ಸಂಬಂಧಿಸಿದ ಹತ್ತಕ್ಕೂ ಹೆಚ್ಚು ಆಸ್ತಿಗಳನ್ನು ಈಗಾಗಲೇ ಸರ್ಕಾರ ವಶಕ್ಕೆ ಪಡೆದಿದೆ. ಚರಾಸ್ಥಿಗಳ ಮೌಲ್ಯ 106.92 ಕೋಟಿ ಹಾಗೂ ಸ್ಥಿರಾಸ್ತಿಗಳ ಮೌಲ್ಯ 401.92 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಇದಲ್ಲದೆ, ಕಂಪೆನಿಗೆ ಸಂಬಂಧಿಸಿದ ವಿವಿಧ ಬ್ಯಾಂಕ್ ಖಾತೆಗಳಿಂದ 2.88 ಕೋಟಿ ರೂ., ನಗದು ಹಣ 11.72 ಕೋಟಿ ರೂ., ಹೂಡಿಕೆ ಪತ್ರ 11.06 ಕೋಟಿ ರೂ. ಸೇರಿದಂತೆ ಒಟ್ಟಾರೆ 534.5 ಕೋಟಿ ರೂ.ಗಳನ್ನು ಸರ್ಕಾರ ಮುಟ್ಟುಗೋಲು ಹಾಕಿದೆ. ನ್ಯಾಯಮೂರ್ತಿ ಜಸ್ಟೀಸ್ ನಾಗಪ್ರಸನ್ನ ಪೀಠದ ಆದೇಶದಂತೆ ಶೀಘ್ರವೇ ಈ ಆಸ್ತಿಗಳನ್ನು ಹರಾಜಿಗೊಳಪಡಿಸಿ ಇದರಿಂದ ಬಂದ ಹಣವನ್ನು ಹೂಡಿಕೆದಾರರಿಗೆ ಹಿಂತಿರುಗಿಸಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ಸಭೆಯಲ್ಲಿ ತಿಳಿಸಿದರು.

ಐಎಂಎ ಹಗರಣ ಬೆಳಕಿಗೆ ಬಂದಾಗಲೇ ಸರ್ಕಾರ ಸಂತ್ರಸ್ತರನ್ನು ಗುರುತಿಸಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಕಾಶ ನೀಡಿತ್ತು. ಈ ವೇಳೆ ಐಎಂಎ ಜೊತೆ ಆರ್ಥಿಕ ವ್ಯವಹಾರ ಮಾಡಿದ ಬ್ಯಾಂಕ್ ಖಾತೆ ಚಾಲ್ತಿಯಲ್ಲಿದ್ದರೆ ಅದನ್ನೇ ಅಧಿಕೃತ ಎಂದು ಪರಿಗಣಿಸಲಾಯಿತು. ಒಂದು ವೇಳೆ ಖಾತೆ ನಿಷ್ಕ್ರಿಯವಾಗಿದ್ದರೆ ಠೇವಣಿಪತ್ರ, ಷೇರುಪ್ರಮಾಣ ಪತ್ರದಂತಹ ದಾಖಲಾತಿಗಳನ್ನು ಕೋರಿತ್ತು.

ಅರ್ಜಿ ಸಲ್ಲಿಸುವವರ ಮಾಹಿತಿಗಳನ್ನು ಐಎಂಎ ಸಂಸ್ಥೆಯಲ್ಲಿರುವ ದತ್ತಾಂಶಗಳೊಂದಿಗೆ ಹೊಂದಾಣಿಕೆ ಮಾಡಿ ಹಾಗೂ ಆಧಾರ್ ಕಾರ್ಡ್, ಇತರ ಮಾಹಿತಿಗಳನ್ನು ಸಮೀಕರಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಲಾಗಿದೆ. ಒಂದು ವೇಳೆ ಫಲಾನುಭವಿಗಳು ಮೃತಪಟ್ಟಿದ್ದರೆ ಠೇವಣಿದಾರರು ಸೂಚಿಸಿರುವ ನಾಮನಿರ್ದೇಶಿತ ವ್ಯಕ್ತಿಗಳಿಗೆ ಆ ಹಣವನ್ನು ನೀಡಲು ಕ್ರಮವಹಿಸಲಾಗಿದೆ.

ಅತ್ಯಾಚಾರ ದೂರು ಕೊಡಲು ಬಂದ ಅಪ್ರಾಪ್ತೆಯನ್ನು ಮತ್ತೆರಡು ಬಾರಿ ರೇಪ್ ಮಾಡಿದ ಪೊಲೀಸ್ ಕಾನ್‌ಸ್ಟೇಬಲ್!

ಬೆಂಗಳೂರು, ಫೆ.24– ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ತನ್ನನ್ನು ಪ್ರೀತಿಸಿ, ಮದುವೆ ಮಾಡಿಕೊಳ್ಳುವುದಾಗಿ ನಂಬಿಸಿ ಯುವಕನೊಬ್ಬ ಅತ್ಯಾಚಾರ ಮಾಡಿದ್ದಾನೆ ಎಂದು ದೂರು ಕೊಡಲು ಹೋದ ಅಪ್ರಾಪ್ತೆಯನ್ನು ಪೊಲೀಸ್ ಕಾನ್‌ಸ್ಟೆಬಲ್ ನ್ಯಾಯ ಕೊಡಿಸುವುದಾಗಿ ನಂಬಿಸಿ ಮತ್ತೆ ಎರಡು ಬಾರಿ ಅತ್ಯಾಚಾರ ಮಾಡಿದ ಘಟನೆ ಬೆಳಕಿಗೆ ಬಂದಿದೆ.

ಬೆಂಗಳೂರಿನ ಮೈಕೋ ಲೇಔಟ್‌ನಲ್ಲಿ 17 ವರ್ಷದ ಅಪ್ರಾಪ್ತ ಬಾಲಕಿಯನ್ನು ಪ್ರೀತಿಸುವ ನಾಟಕವಾಡಿ, ಮದುವೆಯಾಗುವುದಾಗಿ ಪುಸಲಾಯಿಸಿದ ಯುವಕನೊಬ್ಬ ಆಕೆ ಮೇಲೆ ಕಳೆದ ನಾಲ್ಕೈದು ತಿಂಗಳಿಂದ ನಿರಂತರವಾಗಿ ಅತ್ಯಾಚಾರ ಮಾಡಿದ್ದಾನೆ. ಇದಾದ ನಂತರ ತಾನು ಪ್ರೀತಿಸಿದ ಯುವಕನಿಗೆ ಈಗಾಗಲೇ ಮದುವೆ ಆಗಿದ್ದು, ತಾನು ಮೋಸ ಹೋಗಿದ್ದೇನೆ ಎಂದು ತಿಳಿದ ಬಾಲಕಿ ಆತನ ಮೇಲೆ ಅತ್ಯಾಚಾರದ ದೂರು ದಾಖಲು ಮಾಡಲು ಪೊಲೀಸ್ ಠಾಣೆಗೆ ಬಂದಿದ್ದಾಳೆ.

ಆದರೆ, ಬೊಮ್ಮನಹಳ್ಳಿ ಠಾಣೆಯ ಕಾನ್‌ಸ್ಟೇಬಲ್ ತಾನು ನ್ಯಾಯ ಕೊಡಿಸುವುದಾಗಿ ಬಾಲಕಿಯನ್ನು ಪುಸಲಾಯಿಸಿ, ಕೆಲಸ ಕೊಡಿಸುವ ಭರವಸೆ ನೀಡಿದ್ದಾನೆ. ಇದಾದ ನಂತರ ವಿಚಾರಣೆಗೆ ಹೋಗೋದಿದೆ ಎಂದು ಒಯೋ ಲಾಡ್ಜ್‌ಗೆ ಕರೆದೊಯ್ದು, ಆಕೆ ಅಪ್ರಾಪ್ತೆ ಎಂಬುದನ್ನೂ ನೋಡದೇ, ನೀಚ ಕೃತ್ಯ ಎಸಗಿದ್ದಾನೆ.

ಇದಾದ ನಂತರ ಬಾಲಕಿ ಈ ವಿಚಾರವನ್ನು ಪೋಷಕರಿಗೆ ಹೇಳುವುದಾಗಿ ತಿಳಿಸಿದಾಗ ನಿನ್ನೊಂದಿಗೆ ಖಾಸಗಿಯಾಗಿ ಕಳೆದ ಫೋಟೋ ಮತ್ತು ವಿಡಿಯೋಗಳು ನನ್ನ ಬಳಿ ಇದ್ದು, ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ಸೋಶಿಯಲ್ ಮೀಡಿಯಾದಲ್ಲಿ ಶೇರ್ ಮಾಡಿ ನಿನ್ನ ಮತ್ತು ನಿಮ್ಮ ಕುಟುಂಬದ ಮಾನ ಹರಾಜು ಹಾಕುವುದಾಗಿ ಪೊಲೀಸ್ ಕಾನ್‌ಸ್ಟೇಬಲ್ ಬೆದರಿಕೆ ಹಾಕಿದ್ದಾನೆ. ನಂತರ, ಅತ್ಯಾಚಾರ ಆರೋಪಿಗೆ ಶಿಕ್ಷೆ ಕೊಡಿಸುವುದಾಗಿ ಪುಸಲಾಯಿಸಿ ಮತ್ತೊಮ್ಮೆ ಒಯೋ ಲಾಡ್ಜ್‌ಗೆ ಕರೆದೊಯ್ದು, ಆಕೆಯ ವಿಡಿಯೋ ವೈರಲ್ ಮಾಡುವುದಾಗಿ ಬೆದರಿಕೆ ಹಾಕಿ ಅತ್ಯಾಚಾರ ಮಾಡಿದ್ದಾನೆ. ನ್ಯಾಯ ಕೇಳಲು ಹೋಗಿ ಮತ್ತೊಮ್ಮೆ ಅನ್ಯಾಯಕ್ಕೆ ಒಳಗಾಗಿದ್ದರಿಂದ ಜರ್ಜರಿತಳಾಗಿದ್ದಾಳೆ. ಇದಾದ ನಂತರ ಎಲ್ಲ ಘಟನೆಯನ್ನು ಯುವತಿ ತನ್ನ ತಾಯಿಗೆ ತಿಳಿಸಿದ್ದಾಳೆ. ಈ ಬಗ್ಗೆ ಯುವತಿ ತಾಯಿ ನೀಡಿದ ದೂರಿನ ಮೇರೆಗೆ ಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿಕೊಳ್ಳಲಾಗಿದ್ದು, ಅತ್ಯಾಚಾರ ಆರೋಪಿಯಾದ ಪ್ರಿಯಕರ ವಿಕ್ಕಿ ಹಾಗೂ ನ್ಯಾಯ ಕೊಡಿಸುವುದಾಗಿ ಅತ್ಯಾಚಾರ ಮಾಡಿದ ಪೊಲೀಸ್ ಕಾನ್‌ಸ್ಟೇಬಲ್ ಅರುಣ್ ಇಬ್ಬರನ್ನೂ ಬಂಧಿಸಲಾಗಿದೆ.

ಮೈಸೂರು ಮಿತ್ರ

ಮೀಸಲಾಗಿದ್ದ ಜಾಗ ಸರ್ಕಾರದಿಂದ ಭೂ ಸ್ವಾಧೀನ ಗಾಳಿಸುದ್ದಿ ಹಿನ್ನೆಲೆ

ರಾತ್ರಿ-ಹಗಲು ಕಾವಲು ಕಾಯುತ್ತಿರುವ ಮಾದಿಗ ಸಮುದಾಯ

ತಿ.ನರಸೀಪುರ, ಫೆ.24– ಮಾದಿಗ ಸಮುದಾಯಕ್ಕೆ ಮೀಸಲಾಗಿದ್ದ ಜಾಗವನ್ನು ಸರ್ಕಾರದಿಂದ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂಬ ಗಾಳಿಸುದ್ದಿ ಹಿನ್ನೆಲೆ ಯಲ್ಲಿ ಆತಂಕಕ್ಕೊಳಗಾದ ಗೋಪಾಲಪುರ ಗ್ರಾಮದ ಮಾದಿಗ ಸಮಾಜದವರು ಸರ್ವೇ ನಂ.7 ರಲ್ಲಿ ಗುಡಿಸಲನ್ನು ನಿರ್ಮಿಸಿ ಜಾಗವನ್ನು ರಾತ್ರಿ ಇಡೀ ಕಾವಲು ಕಾಯುತ್ತಿದ್ದಾರೆ.

ತಿ.ನರಸೀಪುರ-ಮೈಸೂರು ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುವ ಗೋಪಾಲಪುರ ಗ್ರಾಮದ ಸರ್ವೇ ನಂ.7 ರಲ್ಲಿರುವ 6.03 ಎಕರೆ ಜಮೀನು ದಲಿತ ಸಮುದಾಯಕ್ಕೆ ಮೀಸಲಿಡಲಾಗಿದ್ದು, ಕಳೆದ 60 ವರ್ಷಗಳಿಂದ ವಾಸ ಮಾಡುತ್ತಾ ಬಂದಿದ್ದಾರೆ. ಅಲ್ಲದೇ ಮಾದಿಗ ಸಮುದಾಯದವರಿಗೆ ಪ್ರಸಕ್ತ ನಿವೇಶನಗಳನ್ನು ಹಂಚುವ ಪ್ರಕ್ರಿಯೆಗೆ ಕೆಲ ವರ್ಷಗಳ ಹಿಂದೆ ಚಾಲನೆ ದೊರಕಿತ್ತಾದರೂ ಕೆಲ ಗೊಂದಲಗಳಿಂದ ಹಂಚಿಕೆ ಪ್ರಕ್ರಿಯೆಗೆ ತಡೆಯುಂಟಾಗಿತ್ತು. ಇತ್ತೀಚೆಗೆ ಉದ್ದೇಶಿತ ಜಮೀನನ್ನು ಸರ್ಕಾರಿ ಆಸ್ಪತ್ರೆ ನಿರ್ಮಾಣಕ್ಕೆ ಭೂ ಸ್ವಾಧೀನ ಮಾಡಿಕೊಳ್ಳಲಾಗಿದೆ ಎಂಬ ಗಾಳಿ ಸುದ್ದಿ ಹರಡುತ್ತಿದ್ದಂತೆ ಗೋಪಾಲಪುರ ಗ್ರಾಮದ ನೂರಾರು ಮಾದಿಗ ಸಮುದಾಯದ ರಾತ್ರೋರಾತ್ರಿ ಗುಡಿಸಲುಗಳನ್ನು ನಿರ್ಮಿಸಿ ಜಾಗವನ್ನು ಮೀಸಲಿರಿಸಿಕೊಂಡು ಅಲ್ಲೇ ಕಾವಲು ಕಾಯುತ್ತಿದ್ದಾರೆ. ಸೋಮವಾರವೂ ಕಾವಲು ಕಾರ್ಯ ಮುಂದುವರೆದಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಕೀಲ ಪ್ರಕಾಶ್, ಕಳೆದ 60 ವರ್ಷಗಳಿಂದ ಈ ಜಾಗದಲ್ಲಿ ಮಾದಿಗ ಸಮುದಾಯದವರಿದ್ದಾರೆ. ಮೂಲ ಸೌಕರ್ಯಗಳಿಲ್ಲದಿದ್ದರೂ ಜನರು ಪಶು, ಪ್ರಾಣಿಗಳಂತೆ ಬದುಕುತ್ತಿದ್ದರೂ ಕೂಡ ಯಾವುದೇ ಸೌಲಭ್ಯ ಕಲ್ಪಿಸಿಕೊಡದೇ ಈ ಜಾಗ ಪುರಸಭೆಯಿಂದ ಭೂ ಸ್ವಾಧೀನವಾಗಿದೆ ಎನ್ನುವ ಮೂಲಕ ಜನರ ಕಣ್ಣಿಗೆ ಮಣ್ಣೆರಚುವ ಕೆಲಸ ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.



ಪತ್ರಿಕಾಗೋಷ್ಠಿಯಲ್ಲಿ ವಕೀಲ ಪ್ರಕಾಶ್ ಮಾತನಾಡಿದರು.

ನಾವು ದಾಖಲಾತಿ ಸರಿಪಡಿಸಲಾಗಿ ಅಶ್ವಿನ್ ಕುಮಾರ್ ಶಾಸಕರಾಗಿದ್ದ ವೇಳೆ ಜಮೀನು ಭೂ ಸ್ವಾಧೀನದ ಬಗ್ಗೆ ವಿಧಾನಸಭೆಯಲ್ಲಿ ಪ್ರಶ್ನೆ ಮಾಡಿದ್ದ ವೇಳೆ ಆಗ ಕಂದಾಯ ಸಚಿವರಾಗಿದ್ದ ಆರ್.ಅಶೋಕ್ ತಿ.ನರಸೀಪುರ ತಾಲೂಕು ಭೈರಾಪುರ ಗ್ರಾಮದ ಸರ್ವೇ ನಂ.55/1, 57/1, 57/2, 57/3 ರಲ್ಲಿನ 5.29 ಗುಂಟೆ ಜಮೀನು ಆಸ್ಪತ್ರೆ ಕಟ್ಟಡಕ್ಕಾಗಿ ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ಹೊರತು ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಸರ್ವೇ ನಂ.7 ರಲ್ಲಿನ ಜಮೀನು ಭೂ ಸ್ವಾಧೀನವಾಗಿರುವುದಿಲ್ಲ ಎಂದು ಸ್ಪಷ್ಟನೆ ಕೊಟ್ಟಿರುತ್ತಾರೆ. ನಂತರ 2022ರ ಡಿ.27ರಂದು ಉಪವಿಭಾಗಾಧಿಕಾರಿ ಜಿಲ್ಲಾಧಿಕಾರಿಯವರಿಗೆ ಇದೇ ಮಾಹಿತಿ ನೀಡಿದ್ದಾರೆ. ನಂತರದಲ್ಲಿ ತಹಸೀಲ್ದಾರ್ ರವರು ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ನೀಡುವ ವೇಳೆ ಭೈರಾಪುರ ವ್ಯಾಪ್ತಿಯ ಸರ್ವೇ ನಂ.7ರ 6.03 ಗುಂಟೆ ಮೂಲತಃ ಹಿಡುವಳಿ ಜಮೀನಾಗಿದ್ದು, ಮುನ್ಸಿಪಲ್‌ನಲ್ಲಿ 57 ವರ್ಷಗಳಿಂದಲೂ ಕಂದಾಯ ದಾಖಲೆಯಲ್ಲಿ ಮುಂದುವರೆದಿದೆ. ಈ ಬಗ್ಗೆ ಪರಿಹಾರ ಪಾವತಿಯಾಗಲಿ, ಭೂ ಸ್ವಾಧೀನದ ಬಗ್ಗೆಯಾಗಲೀ ತಾಲೂಕು ಕಚೇರಿಯಲ್ಲಿ ಯಾವುದೇ ದಾಖಲೆ ಲಭ್ಯವಿಲ್ಲ ಎಂದಿದ್ದಾರೆ. ಹಾಗಾಗಿ ಸದರಿ ಜಮೀನು ಯಾವುದೇ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಗಾಗಿರುವುದಿಲ್ಲ. ಇಲ್ಲ ಸಲ್ಲದ ಗಾಳಿ ಸುದ್ದಿ ಹಬ್ಬಿಸಿ ಜನರನ್ನು ದಾರಿ ತಪ್ಪಿಸುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆ ಸದಸ್ಯ ಎಲ್.ಮಂಜುನಾಥ್ ಮಾತನಾಡಿ, ಭೂ ಸ್ವಾಧೀನ ಬಗ್ಗೆ ಆರ್‌ಟಿಸಿಯಲ್ಲಿ ಗೊಂದಲವಿದೆ. ಪ್ರವಾಹ ಸಂತ್ರಸ್ತರ ವಿತರಣ ಭೂ ಸ್ವಾಧೀನ ಎಂದು ದಾಖಲಾಗಿದೆ. ಈ ಸಂಬಂಧ ಸೆಕ್ರೆಟ್ರಿಯೆಟ್ ನಲ್ಲೂ ಯಾವುದೇ ದಾಖಲೆಗಳಿಲ್ಲ. ಅನೇಕ ವರ್ಷಗಳಿಂದಲೂ ಇಲ್ಲಿ ಮಾದಿಗ ಸಮಾಜದವರೇ ವಾಸವಿದ್ದು, ಸ್ವಾಧೀನಾನುಭವದಲ್ಲಿರುವುದರಿಂದ ಶೀಘ್ರದಲ್ಲೇ ಇವರಿಗೆ ಹಕ್ಕುಪತ್ರ ವಿತರಿಸಿ ಮೂಲಸೌಕರ್ಯ ಕಲ್ಪಿಸಿ ಕೊಟ್ಟು ಬದುಕಲು ಅವಕಾಶ ಮಾಡಿಕೊಡಬೇಕಿದೆ ಎಂದರು. ಈ ವೇಳೆ ಮಾದಿಗ ಸಂಘಟನೆ ಹೋರಾಟಗಾರ ರಾಚಪ್ಪ, ದಸಂಸಮಿತಿ ಸಂಚಾಲಕ ಬೆಳ್ಳಿಯಪ್ಪ, ಯುವ ಮುಖಂಡ ಶ್ರೀಧರ್, ಎಂ.ಎಸ್.ರವೀಂದ್ರ, ಬಿ.ಮಂಜುನಾಥ್ ಸೇರಿದಂತೆ ಮಹಿಳಾ ಸಂಘದ ಪದಾಧಿಕಾರಿಗಳು ಹಾಜರಿದ್ದರು.

> ಆಸ್ಪತ್ರೆ ನಿರ್ಮಾಣಕ್ಕೆ ಭೂ ಸ್ವಾಧೀನವಾಗಿರುವ ಜಮೀನು ಬೇರೆ. ಭೈರಾಪುರ ಗ್ರಾಪಂ ವ್ಯಾಪ್ತಿಯ ಸರ್ವೇ ನಂ.7ರ 6.03 ಗುಂಟೆ ಜಮೀನು ಭೂ ಸ್ವಾಧೀನವಾಗಿಲ್ಲ. ಈ ಬಗ್ಗೆ ಸ್ಪಷ್ಟವಾದ ದಾಖಲೆಗಳಿವೆ. ಇಲ್ಲಿ ಕಳೆದ 60 ವರ್ಷಗಳಿಂದಲೂ ಮಾದಿಗ ಸಮಾಜದವರೇ ವಾಸ ಮಾಡುತ್ತಾ ಬಂದಿದ್ದಾರೆ. ಆದರೆ ಇಲ್ಲಿ ಮೂಲ ಸೌಕರ್ಯಗಳಿಲ್ಲ. ನ್ಯಾಯಯುತವಾಗಿ ಈ ಜಾಗ ಮಾದಿಗ ಸಮುದಾಯದವರಿಗೆ ಸೇರಬೇಕಾಗಿದೆ. ಸರ್ಕಾರ ಈ ಸಂಬಂಧ ಶೀಘ್ರ ನಿರ್ಧಾರ ಕೈಗೊಂಡು ಇವರಿಗೆ ನಿವೇಶನ ಹಸ್ತಾಂತರ ಮಾಡಿ ಅವರಿಗೆ ಬದುಕುಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು. ಜೊತೆಗೆ ಮೂಲ ಸೌಕರ್ಯ ಕಲ್ಪಿಸಿಕೊಡಬೇಕು.
>
> -ಎಂ.ರಾಘವೇಂದ್ರ, ಪುರಸಭೆ ಮಾಜಿ ಸದಸ್ಯ.

ಹಾಡ್ಯ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ಕೆ.ಆರ್.ನಗರ, ಫೆ.24– ಸಾಲಿಗ್ರಾಮ ತಾಲೂಕಿನ ಹಾಡ್ಯ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಹೆಚ್.ಆರ್. ಚಂದ್ರಶೇಖರ್, ಉಪಾಧ್ಯಕ್ಷರಾಗಿ ಕೆಂಪೇಗೌಡ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತು ಪಡಿಸಿ ಬೇರಾರು ನಾಮಪತ್ರ ಸಲ್ಲಿಸಿದ ಕಾರಣ ಚುನಾವಣಾಧಿಕಾರಿ ಸಹಕಾರ ಇಲಾಖೆ ಅಧಿಕಾರಿ ಗಿರೀಶ್ ಅವಿರೋಧ ಆಯ್ಕೆ ಪ್ರಕಟಿಸಿದರು.

ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ಹೆಚ್.ಡಿ.ವೀರಭದ್ರಪ್ಪ, ಹೆಚ್.ಸಿ.ಮಹದೇವಪ್ಪ, ಶಂಕರ್, ಕೆಂಪೇಗೌಡ, ವೃಷಭೇಂದ್ರಪ್ಪ, ಎಂ.ಈರಯ್ಯ, ಕೃಷ್ಣ, ಎ.ಜೆ.ಹರೀಶ, ಕೆ.ಟಿ.ರಾಮಕೃಷ್ಣ, ಎಸ್.ಕವಿತಾ, ಕಾತ್ಯಾಯಿಣಿ, ಸಿಇಓ ಅನಂತ ಇದ್ದರು.

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ವಿತರಿಸಿ ಶಾಸಕ ಡಿ.ರವಿಶಂಕರ್ ಅವರಿಗೆ ಜೈಕಾರ ಕೂಗಿ ಸಂಭ್ರಮಿಸಿದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್.ಸಿ.ಪ್ರಸಾದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ಗ್ರಾಪಂ ಮಾಜಿ ಅಧ್ಯಕ್ಷ ಬೀರೇಗೌಡ, ಮಾಜಿ ಸದಸ್ಯರಾದ ಮಲ್ಲಿಕಾರ್ಜುನ, ರಘು, ಮುಖಂಡರಾದ ಷಣ್ಮುಖ, ಯತೀಶ್, ಮಹದೇವ್, ಜಲೇಂದ್ರ, ದೊಡ್ಡೇಗೌಡ, ಸುರೇಶ್, ರವಿ, ರಾಜಯ್ಯ, ಹೇಮಂತ, ಅಶ್ವಥ್, ನಾಗೇಶ್, ಪವನ್, ಹೆಚ್.ಎ.ಗಂಗಾಧರ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಬಹು ವಾರ್ಷಿಕ ಮೇವಿನ ಬೆಳೆಯಿಂದ ರೈತರಿಗೆ ಅನುಕೂಲ



ರೈತರಿಗೆ ಟಾರ್ಪಲ್, ಬಿತ್ತನೆಯ ಮುಸುಕಿನ ಜೋಳ, ಕುಡುಗೋಲು ವಿತರಿಸಲಾಯಿತು.

ಹೆಚ್.ಡಿ.ಕೋಟೆ, ಫೆ.24– ಬಹು ವಾರ್ಷಿಕ ಮೇವಿನ ಬೆಳೆ ಬೆಳೆಯುವುದರಿಂದ ರೈತರಿಗೆ ಅನುಕೂಲ ಎಂದು ವಲಯ ಕೃಷಿ ಸಂಶೋಧನಾ ಕೇಂದ್ರ ವಿ.ಸಿ.ಫಾರಂನ ಪ್ರಾಧ್ಯಾಪಕ ಡಾ.ಬಿ.ಜಿ.ಶೇಖರ್ ತಿಳಿಸಿದರು.

ತಾಲೂಕಿನ ಚಿಕ್ಕಕೆರೆಯೂರು ಗ್ರಾಮದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ವಲಯ ಸಂಶೋಧನಾ ಕೇಂದ್ರ ವಿ.ಸಿ.ಫಾರಂ ಮಂಡ್ಯ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಹೆಚ್.ಡಿ.ಕೋಟೆ ಸಹಭಾಗಿತ್ವದಲ್ಲಿ ಪರಿಶಿಷ್ಟ ಜಾತಿ ವಿಶೇಷ ಉಪಯೋಜನೆ ಅಡಿ ನಡೆದ ಮೇವಿನ ಬೆಳೆಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ಮತ್ತು ಹೈನುಗಾರಿಕೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಹೈನುಗಾರಿಕೆಯಲ್ಲಿ ಮೇವು ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಮೇವು ಬೆಳೆಯಾದ ಮುಸುಕಿನ ಜೋಳವನ್ನು ಹೈನುಗಾರಿಕೆಯಲ್ಲಿ ಶೇ.90ರಷ್ಟು ಬಳಸಲಾಗುವುದು ಎಂದ ಅವರು ಮೇವಿನ ಬೆಳೆಗಳ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳ ಬಗ್ಗೆ ತಿಳಿಸಿದರು.

ವಲಯ ಕೃಷಿ ಸಂಶೋಧನಾ ಕೇಂದ್ರ ವಿ.ಸಿ.ಫಾರಂನ ಪ್ರಾಧ್ಯಾಪಕ ಡಾ.ಪಿ.ಮಹದೇವು ಮಾತನಾಡಿ, ಸಾಮಾನ್ಯವಾಗಿ ಬೆಳೆಯುವ ಮೇವಿನ ಬೆಳೆಗಳಾದ ಅಲಸಂದೆ, ಕುದುರೆ ಮಸಾಲೆ, ಹುರುಳಿ, ಏಕದಳ ಮೇವು, ಮೇವಿನ ಜೋಳ ಮತ್ತು ಮೇವಿನ ಸಜ್ಜೆ, ಹುಲ್ಲು ಮೇವು ನೇಪಿಯರ್, ಗಿನಿ ಹುಲ್ಲು, ಪ್ಯಾರಾ ಹುಲ್ಲು, ಮರದ ಮೇವು, ನುಗ್ಗೆ, ಅಗಸೆ, ಗ್ಲಿರಿಸಿಡಿಯಾ, ಪಾರಿವಾಳ ಹುಲ್ಲು, ಹಾರವಾಣ, ಬೆಳೆ ಬೆಳೆಯುವ ಹಾಗೂ ಸುಧಾರಿತ ಮೇವಿನ ತಳಿಗಳು ಹಾಗೂ ಬೀಜೋತ್ಪಾದನೆಯ ಬಗ್ಗೆ ರೈತರಿಗೆ ತಿಳಿಸಿದರು.

ಇದೇ ವೇಳೆ 80 ರೈತರಿಗೆ ಉಚಿತವಾಗಿ ಟಾರ್ಪಲ್, ಬಿತ್ತನೆ ಮುಸುಕಿನ ಜೋಳ, ಕುಡುಗೋಲು ಅನ್ನು ವಿತರಿಸಿ ಡಾ.ನಾಗೇಶ್ ಚಿಕ್ಕರೂಗಿ ಅವರು ಮೇವಿನ ಬೆಳಗಳ ಕೀಟಗಳು ಹಾಗೂ ಅವುಗಳ ನಿರ್ವಹಣೆ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೃಷಿ ಮೇಲ್ವಿಚಾರಕ ರಾಜು ಬಿ.ಜೆ., ಯಂತ್ರಶ್ರೀ ನಾಟಿ ಯಂತ್ರ ಬ್ಯಾಂಕ್‌ನ ಕೃಷಿ ಮೇಲ್ವಿಚಾರಕ ನವೀನ್ ಕುಮಾರ್, ಚಿಕ್ಕಕೆರೆಯೂರು ಗ್ರಾಪಂ ಸದಸ್ಯರಾದ ಮಹೇಶ್.ಸಿ.ಟಿ, ಮಲ್ಲೇಶ್, ಗ್ರಾಪಂ ಮಾಜಿ ಅಧ್ಯಕ್ಷ ರವಿ, ಊರಿನ ಯಜಮಾನ ರವಿ, ಸೇವಾ ಪ್ರತಿನಿಧಿ ರೇಖಾ ಉಪಸ್ಥಿತರಿದ್ದರು.

ಅರ್ಹರಿಗೆ ಗ್ಯಾರಂಟಿ ಯೋಜನೆಗಳನ್ನು ತಲುಪಿಸಿ



ಪ್ರಗತಿ ಪರಿಶೀಲನಾ ಸಭೆಯ ನಂತರ ಶಾಸಕ ದರ್ಶನ್ ಮಾತನಾಡಿದರು.

ನಂಜನಗೂಡು, ಫೆ.24– ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿದ್ದು, ಅರ್ಹ ಫಲಾನುಭವಿಗಳಿಗೆ ಯೋಜನೆಗಳು ತಲುಪುವಂತೆ ಕ್ರಮ ವಹಿಸಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು ಚುನಾವಣಾ ಪೂರ್ವ ನೀಡಿದ್ದ ಭರವಸೆಯಂತೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದ ಸರ್ಕಾರ ಎನಿಸಿದೆ. ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆ, ಯುವನಿಧಿ, ಅನ್ನಭಾಗ್ಯ ಯೋಜನೆಗಳು ಬಡವರು ಮತ್ತು ಜನಸಾಮಾನ್ಯರ ಜೀವನ ಬದಲಾಯಿಸುವ ಗುರಿ ಹೊಂದಿದೆ. ಆದ್ದರಿಂದ ಈ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಕ್ರಮವಹಿಸಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತು ಗ್ಯಾರಂಟಿ ಅನುಷ್ಠಾನ ಸಮಿತಿಯ ಸದಸ್ಯರು, ಕ್ಷೇತ್ರಾದ್ಯಂತ ಗ್ರಾಮಗಳ ಪ್ರವಾಸ ಮಾಡಿ ಪ್ರತಿ ಮನೆ ಮನೆಗೆ ತೆರಳಿ ಗ್ಯಾರಂಟಿ ಯೋಜನೆಗಳು ತಲುಪಿದೆಯೇ ಎಂಬುದನ್ನು ಖಾತ್ರಿ ಪಡಿಸಿ ಕೊಂಡು, ತಲುಪದಿರುವ ಅರ್ಹ ಫಲಾನುಭವಿಗಳ ಪಟ್ಟಿ ಮಾಡಿ ಅವರ ಸಮಸ್ಯೆಗಳನ್ನು ಆಲಿಸಿ ಗ್ಯಾರಂಟಿ ಯೋಜನೆಗಳು ತ್ವರಿತವಾಗಿ ತಲುಪುವಂತೆ ಮಾಡಬೇಕು ಎಂದು ಸೂಚನೆ ನೀಡಿದರು.

ಇದೇ ವೇಳೆ ತಾಪಂನಲ್ಲಿರುವ ಶಾಸಕರ ಕಚೇರಿಯಲ್ಲಿ ಸಾರ್ವಜನಿಕರ ಮತ್ತು ಮುಖಂಡರ ಜನ ಸಂಪರ್ಕ ಸಭೆ ನಡೆಸಿ ಅಹವಾಲುಗಳನ್ನು ಆಲಿಸಿದರು. ಸ್ಥಳದಲ್ಲೇ ಬಗೆಹರಿಯುವ ಸಮಸ್ಯೆಗಳನ್ನು ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಶೀಘ್ರ ಬಗೆಹರಿಸುವಂತೆ ನಿರ್ದೇಶಿಸಿದರು. ಈ ಸಂದರ್ಭ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ತಾಪಂ ಇಓ ಜೆರಾಲ್ಡ್ ರಾಜೇಶ್, ಸೆಸ್ಕ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ದೇವರಾಜಯ್ಯ, ಕಿರಣ್ ಕುಮಾರ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಇತರರಿದ್ದರು.

ವಿಜೃಂಭಣೆಯ ಶ್ರೀಇಂದ್ರಾಣಿ ಅಮ್ಮನವರ ವರ್ಧಂತೋತ್ಸವ

ಸರಗೂರು, ಫೆ.24– ಪಟ್ಟಣದಲ್ಲಿ ಶ್ರೀಇಂದ್ರಾಣಿ ಅಮ್ಮನವರ 25ನೇ ಬೆಳ್ಳಿಹಬ್ಬದ ವರ್ಧಂತೋತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ವರ್ಧಂತಿ ಅಂಗವಾಗಿ ಪಟ್ಟಣದ 5ನೇ ವಾರ್ಡ್‌ನಲ್ಲಿ ತಳಿರು ತೋರಣ ಕಟ್ಟಿ, ರಂಗೋಲಿ ಬಿಡಿಸಿ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ದೇವಾಲಯದಲ್ಲಿ ಮುಂಜಾನೆಯಿಂದಲೇ ಗಣಪತಿ ಹೋಮ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ಅರ್ಚಕರಾದ ಮಹದೇವಪ್ಪ, ವಿನಯ್ ನೆರವೇರಿಸಿದರು.



ಇಂದ್ರಾಣಿ ಅಮ್ಮನವರ 25ನೇ ಬೆಳ್ಳಿ ಹಬ್ಬದ ವರ್ಧಂತೋತ್ಸವ ನಡೆಯಿತು.

ಬಳಿಕ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ, ಪೂರ್ಣಕುಂಭ ಕಳಸವನ್ನು ಮಂಗಳ ವಾದ್ಯ, ನಂದಿ ಕಂಬ, ಸತ್ತಿಗೆ, ವೀರಗಾಸೆ ಕುಣಿತ, ಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ ದೇವಾಲಯಕ್ಕೆ ತಂದು ತಾಯಿಗೆ ವಿಶೇಷ ಪೂಜೆ ನಡೆಸಿ, ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ಭಕ್ತರಿಗೆ ಅನ್ನ ಸಂತರ್ಪಣೆ ನಡೆಸಲಾಯಿತು. ಮೆರವಣಿಗೆಯಲ್ಲಿ ಹೆಣ್ಣು ಮಕ್ಕಳು 101 ಪೂರ್ಣಕುಂಭ ಕಳಸ ಹೊತ್ತು ಹರಕೆ ತೀರಿಸಿದರು. ಈ ವೇಳೆ ಪಪಂ ಅಧ್ಯಕ್ಷೆ ರಾದಿಕಾ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ನೂರಾಳ ಸ್ವಾಮಿ, ದಿವ್ಯ, ಉಮಾ, ಯಜಮಾನರಾದ ತಮ್ಮಣ್ಣಗೌಡ್ರು, ನರಸಿಂಹೇಗೌಡ್ರು, ಮುಖಂಡರಾದ ರಂಗಸ್ವಾಮಿ, ಲೋಕೇಶ್, ರಾಜೇಶ್, ಪುಟ್ಟರಾಜು, ರವಿಗೌಡ್ರು ಇಂದ್ರಾಣಿ ಅಮ್ಮನವರ ದೇವಸ್ಥಾನದ ಭಕ್ತ ಮಂಡಳಿ ಸದಸ್ಯರು ಹಾಗೂ ಸಾರ್ವಜನಿಕರು ಹಾಜರಿದ್ದರು.

ರತ್ನಪುರಿಯಲ್ಲಿ ಅದ್ಧೂರಿ ಜಮಾಲ್ ಬಿಬಿ ಉರುಸ್

ಹುಣಸೂರು, ಫೆ.24– ತಾಲೂಕಿನ ರತ್ನಪುರಿ ಗ್ರಾಮದಲ್ಲಿ ಕೋಮು ಸೌಹಾರ್ದಕ್ಕೆ ಹೆಸರಾಗಿರುವ ಶ್ರೀಆಂಜನೇಯ ಸ್ವಾಮಿ ಹಾಗೂ ಜಮಾಲ್ ಬಿಬಿ ಜಾತ್ರೆ ಅಂಗವಾಗಿ ಭಾನುವಾರ ರಾತ್ರಿ ನಡೆದ ಜಮಾಲ್ ಬಿಬಿ ಅಮ್ಮನವರ ಉರುಸ್ (ಗಂಧೋತ್ಸವ) ಅದ್ಧೂರಿಯಾಗಿ ನಡೆಯಿತು.

ಭಾನುವಾರ ರಾತ್ರಿ ಹುಣಸೂರಿನ ಧರ್ಮಗುರು ಮುರ್ಷದ್ ನೇತೃತ್ವದಲ್ಲಿ ಕುಡಿನೀರು ಮುದ್ದನಹಳ್ಳಿ, ಹುಣಸೂರಿನಿಂದ ಗಂಧವನ್ನು ತಂದು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಈ ವೇಳೆ ಇಸ್ಲಾಂ ಧರ್ಮ ಗುರುಗಳು ಹಾಗೂ ಹರಕೆ ಹೊತ್ತ ಭಕ್ತರು ಕಬ್ಬಿಣದ ಆಯುಧಗಳನ್ನು ಮೈಗೆ ಚುಚ್ಚಿಕೊಂಡು ಅಚ್ಚರಿ ಮೂಡಿಸಿದರು. ಇದೇ ವೇಳೆ ಜಮಾಲ್ ಬಿಬಿ ದರ್ಗಾದಲ್ಲಿ ಹಿಂದೂ ಧರ್ಮದವರು ಚಾದರ್ ಹೊದಿಸಿ ಹರಕೆ ಸಲ್ಲಿಸಿದರು.

ಸಿಹಿ ತಿಂಡಿ ಹರಕೆ ಸಲ್ಲಿಕೆ: ಹರಕೆ ಹೊತ್ತ ಮುಸ್ಲಿಂ ಹಾಗೂ ಹಿಂದೂ ಧರ್ಮದವರು ಬೂಂದಿ ಮತ್ತು ಹೂವನ್ನು ಜಮಾಲ್ ಬಿಬಿ ಅಮ್ಮನವರ ಸನ್ನಿಧಾನಕ್ಕೆ ನೀಡಿ ಹರಕೆ ತೀರಿಸುವುದು ವಾಡಿಕೆ. ಅದರಂತೆ ಹರಕೆ ಹೊತ್ತ ಭಕ್ತರು ಹೂ, ಬೂಂದಿ ಅಂಗಡಿಗಳ ಬಳಿ ಸರತಿ ಸಾಲಿನಲ್ಲಿ ನಿಂತು ಖರೀದಿಸಿ ಹರಕೆ ತೀರಿಸಿದರು.



ರತ್ನಪುರಿ ಗ್ರಾಮದಲ್ಲಿ ಜಮಾಲ್ ಬಿಬಿ ಅಮ್ಮನವರ ಉರುಸ್ ನಡೆಯಿತು.

ಕುಡಿನೀರು ಮುದ್ದನಹಳ್ಳಿ, ಹಳ್ಳದಕೊಪ್ಪಲು, ನಂಜಾಪುರ, ಗೌರಿಪುರ, ಸಿಬಿಟಿ ಕಾಲೋನಿ, ಧರ್ಮಾಪುರ, ಸಂತೆಕೆರೆ ಕೋಡಿ, ತರಿಕಲ್ಲು, ಗದ್ದಿಗೆ, ಉದ್ದೂರು, ವಿನೋಬ ಕಾಲೋನಿ ಸೇರಿದಂತೆ ತಾಲೂಕು ಹಾಗೂ ರಾಜ್ಯದ ಹಲವು ಜಿಲ್ಲೆಗಳಿಂದ ಭಕ್ತರು ಆಗಮಿಸಿ ಜಮಾಲ್ ಬಿಬಿ ಅಮ್ಮನವರ ದರ್ಶನ ಪಡೆದರು.

ಇದೇ ವೇಳೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಆಂಜನೇಯಸ್ವಾಮಿ ಉತ್ಸವ ಹಾಗೂ ಜಮಾಲ್ ಬಿಬಿ ಅಮ್ಮನವರ ಉರುಸ್ ನೋಡಲು ಒಂದು ದಿನ ಮುಂಚಿತವಾಗಿ ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಭಕ್ತರು ಹಿಂದೂ-ಮುಸ್ಲಿಂ ಎಂಬ ಭೇದವಿಲ್ಲದೆ ಸೌಹಾರ್ದದಿಂದ ಜಾತ್ರೆಯಲ್ಲಿ ಭಾಗವಹಿಸುತ್ತಾರೆ ಎಂದು ಗ್ರಾಪಂ ಸದಸ್ಯ ಅಲ್ತಾಫ್ ಷರೀಫ್ ತಿಳಿಸಿದರು.

ಗಂಧೋತ್ಸವದಲ್ಲಿ ಜಾಮಿಯಾ ಕಮಿಟಿ ಅಧ್ಯಕ್ಷ ಎಸ್.ಪಿ.ಚಾಂದ್, ಕಾರ್ಯದರ್ಶಿ ಇರ್ಷಾದ್ ಅಲಿ ಖಾನ್, ಮುಖಂಡರಾದ ಅಜ್ಗರ್ ಪಾಷ, ವಿಜೇಂದ್ರಕುಮಾರ್, ನೂರ್ ಅಹಮದ್, ಬಷೀರ್ ಅಹಮದ್, ಅನ್ವರ್ ಪಾಷ, ಸಾದಿಕ್, ಮಹಮದ್ ಚಾಂದ್ ಸೇರಿದಂತೆ ಗಣ್ಯರು ಭಾಗವಹಿಸಿದ್ದರು.

ಸಿಎಂ ಆರೋಗ್ಯ ವಿಚಾರಿಸಿದ ಮಾಜಿ ಸಚಿವ



ಬೆಂಗಳೂರಿನ ಮುಖ್ಯಮಂತ್ರಿಗಳ ನಿವಾಸಕ್ಕೆ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅವರು ಭೇಟಿ ನೀಡಿ ಸಿಎಂ ಸಿದ್ದರಾಮಯ್ಯನವರ ಆರೋಗ್ಯ ವಿಚಾರಿಸಿದರು.

ಭಕ್ತರಿಗೆ ಕುಡಿಯುವ ನೀರು, ಮಜ್ಜಿಗೆ, ಕಿತ್ತಳೆ ಹಣ್ಣು ವಿತರಣೆ

ತಿ.ನರಸೀಪುರ, ಫೆ.24– ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿಗಳ ಬಳಗದ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಯು.ಅಭಿಲಾಷ್ ನೇತೃತ್ವದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡಿರುವ ಭಕ್ತರಿಗೆ ಕುಡಿಯುವ ನೀರು, ಮಜ್ಜಿಗೆ ಹಾಗೂ ಕಿತ್ತಳೆ ಹಣ್ಣು ವಿತರಿಸಲಾಯಿತು. ನಂತರ ಮಾತನಾಡಿದ ಯು.ಅಭಿಲಾಷ್ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿಗಳ ಬಳಗದ ತಲಾ 5 ಸಾವಿರ ನೀರು, ಮಜ್ಜಿಗೆ ಹಾಗೂ ಕಿತ್ತಲೆ ಹಣ್ಣು ವಿತರಿಸಲಾಗಿದ್ದು, ಶ್ರೀಮಲೆ ಮಹದೇಶ್ವರಸ್ವಾಮಿಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡಿರುವ ಭಕ್ತ ಪಾದಯಾತ್ರೆ ಯಶಸ್ವಿಯಾಗಲಿ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ನೆರವು ನೀಡಲು ಸಿದ್ಧರಾಗದ್ದೇವೆ ಎಂದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಮೆಲ್ಲಹಳ್ಳಿ ರವಿ ಎನ್ ಗೌಡ, ಟಿ.ಕೆ.ಲೇಔಟ್ ಕುಮಾರ್, ನಾಗರಾಜ್, ಅಪ್ಪು, ಸಂಜು, ವಿನೋದ್, ಪವನ್, ಯುವರಾಜ್, ರಕ್ಷಿತ್ ಹಾಗೂ ಯುವ ಮುಖಂಡರು ಹಾಜರಿದ್ದರು.



ಪಾದಯಾತ್ರೆ ಕೈಗೊಂಡಿರುವ ಭಕ್ತರಿಗೆ ಕುಡಿಯುವ ನೀರು, ಮಜ್ಜಿಗೆ ಹಾಗೂ ಕಿತ್ತಳೆ ಹಣ್ಣು ವಿತರಿಸಲಾಯಿತು.

ನಾಲೆ ನಿರ್ಮಾಣ ನೆಪದಲ್ಲಿ ಜಮೀನು ಸ್ವಾಧೀನಕ್ಕೆ ಮುಂದಾದರೆ

ನೀರಾವರಿ ಇಲಾಖೆ ಅಧಿಕಾರಿಗಳ ವಿರುದ್ಧ ಉಗ್ರ ಪ್ರತಿಭಟನೆ

ರೈತ ಸಂಘದ ತಾಲೂಕು ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ ಎಚ್ಚರಿಕೆ

ತಿ.ನರಸೀಪುರ, ಫೆ.24– ನಾಲೆ ನಿರ್ಮಾಣ ನೆಪದಲ್ಲಿ ರೈತರ ಬೆಲೆ ಬಾಳುವ ಜಮೀನು ಸ್ವಾಧೀನಪಡಿಸಿಕೊಳ್ಳಲು ಮುಂದಾದರೆ ನೀರಾವರಿ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ವಿರುದ್ಧ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ರೈತ ಸಂಘದ ತಾಲೂಕು ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಬೂದಹಳ್ಳಿಯಲ್ಲಿ ಕಳೆದ 28 ವರ್ಷಗಳ ಹಿಂದೆ ಭೂ ಸ್ವಾಧೀನ ಪ್ರಕ್ರಿಯೆ ನಡೆಸಿ ಭೂಮಿ ಪಡೆಯದ ಸರ್ಕಾರ ಇಂದು ಅಕ್ರಮ ಪ್ರವೇಶ ಮಾಡಿ ರೈತರ ಭೂಮಿ ಮೇಲೆ ನಾಲೆ ನಿರ್ಮಿಸಲು ಮುಂದಾಗಿರುವುದು ಅವೈಜ್ಞಾನಿಕ ಕ್ರಮ. ಚಾನಲ್ ಇದ್ದರೂ ಕೂಡ ನೀರನ್ನಾಗಲೀ, ಉಳುಮೆಗಾಗಲೀ, ರೈತರ ಬದುಕು ಕಟ್ಟಿಕೊಳ್ಳಲು ಯಾವುದೇ ಕ್ರಮ ಕೈಗೊಳ್ಳದ ನೀರಾವರಿ ಇಲಾಖೆ ಅಧಿಕಾರಿಗಳು ಈಗ ಚಾನಲ್ ಮಾಡುತ್ತೇವೆಂದು ಹೊರಟಿರುವುದು ಸರಿಯಲ್ಲ. ಚಾನಲ್ ಇದ್ದರೂ ನೀರು ಬಿಡದೇ ರೈತ ವ್ಯವಸಾಯ ಮಾಡಲು ಸಾಧ್ಯವಾಗದ ಪರಿಸ್ಥಿತಿಗೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

28 ವರ್ಷಗಳಿಂದ ಇಲ್ಲದ ಪ್ರಕ್ರಿಯೆಗೆ ಈಗ ಚಾಲನೆ ನೀಡಿರುವ ನೀರಾವರಿ ಅಧಿಕಾರಿಗಳು ಯಾವುದೋ ಒತ್ತಡಕ್ಕೆ ಮಣಿದು ಬೂದಹಳ್ಳಿ ಗ್ರಾಮದ ರೈತರನ್ನು ಕರೆದು ಭೂ ಸ್ವಾಧೀನ ಪ್ರಕ್ರಿಯೆ ಸಹಕಾರ ನೀಡಿ, ಜಲ ನಿರ್ಧರಣಾ ಸಮಿತಿ ಕರೆದು ಭೂಮಿ ಬೆಲೆ ನಿರ್ಧರಿಸುತ್ತೇವೆ ಎಂದಿರುವುದು ಸರಿಯಲ್ಲ. ಇದನ್ನು ರೈತ ಸಂಘ ಖಂಡಿಸುತ್ತದೆ. ಪೂರ್ವ ಸಮ್ಮತಿ ಇಲ್ಲದೇ ಬೂದಹಳ್ಳಿ ಗ್ರಾಮದ ರೈತರ ಸಮಕ್ಷಮದಲ್ಲಿ ಚರ್ಚೆಯಾಗಬೇಕು. ಏಕಾಏಕಿ ಅತಿಕ್ರಮಣ ಪ್ರವೇಶ ಸಲ್ಲದು. ಇದಕ್ಕೆ ರೈತ ಸಂಘ ಆಸ್ಪದ ನೀಡುವುದಿಲ್ಲ. 28 ವರ್ಷಗಳಿಂದ ರೈತರ ಬದುಕನ್ನು ನಾಶ ಮಾಡಿದ್ದು ಸಾಕು. ಈಗ ಗ್ರಾಮದ ರೈತರು ಸಾಲ ಸೋಲ ಮಾಡಿ ಜಮೀನಿನಲ್ಲಿ 20 ರಿಂದ 30 ಲಕ್ಷ ರೂ. ಖರ್ಚು ಮಾಡಿ ಮನೆ ನಿರ್ಮಿಸಿಕೊಂಡಿದ್ದಾರೆ. ಅವೈಜ್ಞಾನಿಕ ನೀತಿಯಡಿ ಚಾನಲ್ ನಿರ್ಮಿಸಿ ಪುನಃ ರೈತರ ಬದುಕು ಸರ್ವನಾಶ ಮಾಡಬೇಡಿ. ಯಾವುದೇ ಕಾರಣಕ್ಕೂ ರೈತರು ತಮ್ಮ ಜಮೀನನ್ನು ಸ್ವಾಧೀನ ಪ್ರಕ್ರಿಯೆಗೆ ನೀಡಲು ಸಿದ್ದರಿಲ್ಲ. ಒಂದು ವೇಳೆ ರೈತರಿಗೆ ತೊಂದರೆ ಕೊಟ್ಟರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.



ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಕುಮಾರಸ್ವಾಮಿ ಮಾತನಾಡಿದರು.

ಹೋಬಳಿ ಅಧ್ಯಕ್ಷ ರಮೇಶ್ ಮಾತನಾಡಿ, 28 ವರ್ಷಗಳ ಹಿಂದೆ ಚಾನಲ್ ಮಾಡಿದ್ದು ನಿಜ. ಆದರೆ ನೀರು, ಪರಿಹಾರ ಕೊಟ್ಟಿಲ್ಲ. ದಾಖಲೆ ಸಹ ಕೊಟ್ಟಿಲ್ಲ ಎಂದು ನಮ್ಮ ಜಮೀನಿನಲ್ಲಿ ವ್ಯವಸಾಯಕ್ಕೆ ಮುಂದಾದೆವು. ಇದೀಗ ನಾವು ನಿಮ್ಮ ಜಮೀನು ಖರೀದಿಸುತ್ತೇವೆ. ಬೆಲೆ ನಿಗದಿ ಜೊತೆಗೆ ಪರಿಹಾರ ಕೊಡುತ್ತೇವೆಂದು ಬಂದಿದ್ದಾರೆ. ಆದರೆ ನಮಗೀಗ ಪರಿಹಾರದ ಅವಶ್ಯಕತೆ ಇಲ್ಲ. 28 ವರ್ಷಗಳಿಂದ ಅನುಭವಿಸಿದ್ದು ಸಾಕು. ಈಗ ಇವರು ಪರಿಹಾರ ಕೊಟ್ಟು ನೀರು ಕೊಡುತ್ತಾರೆಂಬ ಭರವಸೆ ಸಹ ನಮಗಿಲ್ಲ. ಅಲ್ಲದೇ ಚಾನಲ್‌ಗೆ ನಮ್ಮ ಜಮೀನು ಬಿಟ್ಟು ಕೊಡಲು ನಾವು ಸಿದ್ಧರಿಲ್ಲ ಎಂದರು.

ನೀರಾವರಿ ಇಲಾಖೆ ಅಧಿಕಾರಿಗಳು ಮಾಡಬೇಕಾದ ಕೆಲಸ ಮಾಡುತ್ತಿಲ್ಲ. ಮೊದಲು ಆರ್‌ಐ/ವಿಎ ಅವರನ್ನು ಕರೆದು ಯಾವ ರೈತರ ಜಮೀನು ಎಷ್ಟು ಹೋಗಿದೆ ಎಂಬುದನ್ನು ಗುರುತಿಸುವ ಕೆಲಸ ಮಾಡಿ ರೈತರ ಒಪ್ಪಿಗೆ ಪಡೆಯಬೇಕು. ಅದನ್ನು ಮಾಡದೇ ತಹಸೀಲ್ದಾರ್ ಗಮನಕ್ಕೂ ತರದೇ ಏಕಾಏಕಿ ನೋಟಿಸ್ ನೀಡಿ ಜಿಲ್ಲಾಧಿಕಾರಿಗಳ ಕಚೇರಿಗೆ ಬರುವಂತೆ ಹೇಳುತ್ತಿರುವುದು ಸರಿಯಲ್ಲ. ನೋಟೀಸ್ ಪಡೆದಿರುವವರು ಮೂಲ ದಾಖಲಾತಿ ಇರುವ ರೈತರಲ್ಲ. ಅವರ ಅಭಿಪ್ರಾಯ ಕೇಳಿ ಮಾಡುವುದಾದರೂ ಏನಿದೆ. ತಮಗಿಷ್ಟ ಬಂದವರೊಂದಿಗೆ ಚರ್ಚಿಸಿದರೆ ಜಮೀನಿನ ಮೂಲ ದಾಖಲಾತಿ ಇರುವ ರೈತ ಏನು ಮಾಡಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭೂಮಿ ಕಳೆದುಕೊಂಡಿರುವ ನಾಲ್ವರು ರೈತರು ಜಿಲ್ಲಾಧಿಕಾರಿ ಕಚೇರಿಗೆ ಹೋಗಿಲ್ಲ. ತಮಗಿಷ್ಟ ಬಂದವರನ್ನು ಕರೆದು ಬೆಲೆ ನಿಗದಿ ಬಗ್ಗೆ ಮಾತನಾಡಿದರೆ ಪ್ರಯೋಜನ ಏನು ಎಂದು ಪ್ರಶ್ನಿಸಿದ ಅವರು ನೀರಾವರಿ ಇಲಾಖೆಯವರು ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ರೈತರಿಗೆ ಕಿರುಕುಳ ನೀಡುತ್ತಿದ್ದಾರೆ. ನಾವು ಯಾವುದೇ ಕಾರಣಕ್ಕೂ ನಮ್ಮ ಜಮೀನು ಬಿಟ್ಟುಕೊಡಲು ಸಿದ್ದರಿಲ್ಲ. ನಮಗೆ ಚಾನಲ್‌ನ ಅವಶ್ಯಕತೆ ಸಹ ಇಲ್ಲ. ಒಂದು ವೇಳೆ ಕಿರುಕುಳ ನೀಡಿದರೆ ನ್ಯಾಯಕ್ಕಾಗಿ ಒತ್ತಾಯಿಸಿ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾ ಸಮಿತಿ ಸದಸ್ಯ ಈ.ರಾಜು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸುಜ್ಜಲೂರು ಚಂದ್ರಶೇಖರ್, ಬೂದಹಳ್ಳಿ ಗ್ರಾಮದ ರೈತರಾದ ಎಂ.ದಿನೇಶ್, ಮಹದೇವ, ರತ್ನಮ್ಮ, ಮಣಿಯಮ್ಮ, ಬಿ.ಮಲ್ಲೇಶ್, ಶಿವಣ್ಣ, ಎಂ.ಮಹದೇವಸ್ವಾಮಿ, ಮಲ್ಲೇಶ್ ಹಾಜರಿದ್ದರು.

ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ

ಆರೋಪಿಗಳ ಬಂಧಿಸದಂತೆ ಸಿಎಂ ಸಿದ್ದರಾಮಯ್ಯ, ಗೃಹ ಸಚಿವ ಡಾ.ಪರಮೇಶ್ವರ್ ತಾಕೀತು ಮಾಡಿದ್ದಾರ...?

●ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ಮಾರ್ಮಿಕ ಪ್ರಶ್ನೆ ●ಘಟನೆ ಸಂಬಂಧ ಕೋರ್ಟ್ ಅನುಮತಿಯಂತೆ 'ಮೈಸೂರು ಚಲೋ' ●ನಾವೇನು ಭಾರತದಲ್ಲಿದ್ದೇವೋ ಪಾಕಿಸ್ತಾನದಲ್ಲಿದ್ದೇವೋ...



ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮೈಸೂರು ಚಲೋ ಪ್ರತಿಭಟನಾ ಸಭೆಯಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್, ಸಮಿತಿ ಸಂಚಾಲಕ ಕೆ.ಟಿ.ಉಲ್ಲಾಸ್ ಮಾತನಾಡಿದರು.

ಮೈಸೂರು, ಫೆ.24(ಎಂಕೆ)– ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸದಂತೆ ಸಿದ್ದರಾಮಯ್ಯ ಮತ್ತು ಗೃಹ ಸಚಿವರು ತಾಕೀತು ಮಾಡಿದ್ದಾರಾ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ಪ್ರಶ್ನಿಸಿದರು.

ಮೈಸೂರು ಮಹಾರಾಜ ಕಾಲೇಜಿನ ಫುಟ್ಬಾಲ್ ಮೈದಾನದಲ್ಲಿ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ ಸಂಬಂಧ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮೈಸೂರು ಚಲೋ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ಕಿಡಿಗೇಡಿಗಳು ಕಲ್ಲು ತೂರಾಟ ಮಾಡಿದ್ದಾರೆ. ಘಟನೆ ಸಂಬಂಧ ಆರೋಪಿ ಸತೀಶ್‌ನನ್ನು ನಮ್ಮ ಕೈಗೆ ಕೊಡಿ ಎನ್ನುತ್ತಾರೆ ಎಂದರೆ, ನಾವೇನು ಭಾರತದಲ್ಲಿದ್ದೇವೋ, ಪಾಕಿಸ್ತಾನದಲ್ಲಿದ್ದೇವೋ. ಪೊಲೀಸ್ ಇಲಾಖೆಗೆ ಆರೋಪಿಗಳನ್ನು ಬಂಧಿಸಬಾರದು ಎಂದು ಸಿಎಂ ಸಿದ್ದರಾಮಯ್ಯ ಮತ್ತು ಗೃಹ ಸಚಿವರು ತಾಕೀತು ಮಾಡಿದ್ದಾರಾ ಎಂದರು.

ಎಫ್ಐಆರ್ ಮಾಡಿರುವ ಒಂದು ಸಾವಿರ ಆರೋಪಿಗಳ ಪೈಕಿ 23 ಜನರನ್ನು ಮಾತ್ರ ಬಂಧಿಸಲಾಗಿದೆ. ಉಳಿದ ಆರೋಪಿಗಳನ್ನು ಯಾವಾಗ ಬಂಧಿಸ್ತೀರಾ? ಈ ದೇಶದ ಸಂವಿಧಾನಕ್ಕೆ ನಾವು ಗೌರವ ಕೊಡ್ತೇವೆ. ಈ ಕಾರಣಕ್ಕಾಗಿಯೇ ನಾವು ನ್ಯಾಯಾಲಯದಲ್ಲಿ ಅನುಮತಿ ಪಡೆದು ಪ್ರತಿಭಟನೆ ಮಾಡುತ್ತಿದ್ದೇವೆ. ಓಲೈಕೆ ರಾಜಕಾರಣಕ್ಕೆ ಮುಂದಾಗಿರುವ ಸಿದ್ದರಾಮಯ್ಯನವರೇ ಇದು ರೀ ಬೌನ್ಸ್ ಆಗುತ್ತದೆ ಎಂದು ಎಚ್ಚರಿಸಿದರು.

ಯಾರದೋ ಕೈವಾಡವಿದೆ: ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ಸಂಚಾಲಕ ಕೆ.ಟಿ.ಉಲ್ಲಾಸ್ ಮಾತನಾಡಿ, ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟವನ್ನು ಸಾಮಾನ್ಯ ಮುಸ್ಲಿಂ ವ್ಯಕ್ತಿ ಮಾಡಿರುವುದಲ್ಲ. ಈ ಘಟನೆಯ ಹಿಂದೆ ಯಾರದೋ ಕೈವಾಡ ಇದೆ. ಈ ಕಲ್ಲುಗಳು ಎಲ್ಲಿಂದ ಬಂತು, ಹೇಗೆ ಬಂತು. ಮಂಗಳೂರಿನಲ್ಲೂ ಇಂತಹದ್ದೇ ಘಟನೆ ನಡೆದಿತ್ತು. ಪೊಲೀಸರ ಮೇಲೆ ಹಲ್ಲೆ ಮಾಡಲಿಕ್ಕೆ ಮುಂದಾಗಿದ್ದಾರೆ. ಆದ್ದರಿಂದ ಪ್ರಕರಣದ ಸಮಗ್ರ ತನಿಖೆಯನ್ನು ಎನ್ಐಎ(ರಾಷ್ಟ್ರೀಯ ತನಿಖಾ ದಳ) ಮೂಲಕ ನಡೆಸಬೇಕು. ಬಂಧಿತ ಆರೋಪಿಗಳ ಮೇಲೆ ಕಾನೂನು ಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) (UAPA) ಕಾಯ್ದೆ ಅಡಿಯಲ್ಲಿ ಕೇಸನ್ನು ದಾಖಲಿಸಬೇಕೆಂದು ಆಗ್ರಹಿಸಿದರು.

ಗಡಿಯಲ್ಲಿ ಕನ್ನಡಿಗರಿಗೆ ಕಿರುಕುಳ; ಕ್ರಮಕ್ಕೆ ಆಗ್ರಹ

ಮೈಸೂರು, ಫೆ.24(ಎಂಕೆ)– ರಾಜ್ಯದ ಗಡಿ ಭಾಗದಲ್ಲಿ ಕನ್ನಡಿಗರಿಗೆ ಕಿರುಕುಳ ನೀಡುತ್ತಿದ್ದು, ಕರ್ನಾಟಕ, ಮಹಾರಾಷ್ಟ್ರ ಹಾಗೂ ಕೇಂದ್ರ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ಹೇಳಿದರು.

ಮೈಸೂರು ಮಹಾರಾಜ ಕಾಲೇಜಿನ ಫುಟ್ಬಾಲ್ ಮೈದಾನದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ರಾಜ್ಯದ ಗಡಿ ಭಾಗದಲ್ಲಿ ಕನ್ನಡಿಗರ ಮೇಲೆ ಹಲ್ಲೆ ನಡೆದಿದೆ. ಇದನ್ನು ಕರ್ನಾಟಕ, ಮಹಾರಾಷ್ಟ್ರ ಹಾಗೂ ಕೇಂದ್ರ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು. ವೋಟ್ ಬ್ಯಾಂಕ್ ಗೋಸ್ಕರ ಓಲೈಕೆ ರಾಜಕಾರಣ ಮಾಡುವುದನ್ನು ಕೈ ಬಿಡಬೇಕು. ಗೃಹ ಇಲಾಖೆ ನಿಭಾಯಿಸುವಲ್ಲಿ ಸಚಿವ ಡಾ.ಪರಮೇಶ್ವರ್ ವಿಫಲರಾಗಿದ್ದಾರೆ. ಅವರಿಗೆ ಗೃಹ ಇಲಾಖೆಯನ್ನು ನಿಭಾಯಿಸಲು ಸಾಧ್ಯವಿಲ್ಲವಾದರೆ ರಾಜೀನಾಮೆ ನೀಡಲಿ ಎಂದರು.

ನ್ಯಾಯಾಲಯದ ನಿರ್ದೇಶನದ ಮೇರೆಗೆ ಮೈಸೂರು ಚಲೋ ನಡೆದಿದೆ...

ನ್ಯಾಯಾಲಯದ ನಿರ್ದೇಶನದ ಮೇರೆಗೆ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿಯ ವತಿಯಿಂದ ಮೈಸೂರು ಚಲೋ ಕಾರ್ಯಕ್ರಮ ನಡೆದಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು. ಪೊಲೀಸ್ ಠಾಣೆಯ ಮೇಲೆ ನಡೆದ ದಾಳಿ ಖಂಡಿಸಿ ಈ ಕಾರ್ಯಕ್ರಮ ನಡೆಸಲಾಗಿದೆ. ಸಾರ್ವಜನಿಕರಿಗೆ ರಕ್ಷಣೆ ನೀಡಬೇಕಾದ ಪೊಲೀಸರಿಗೆ ಇದೀಗ ರಕ್ಷಣೆ ಇಲ್ಲದಂತಾಗಿದೆ. ಹಾಗಾಗಿ ಪೊಲೀಸರಿಗೆ ಆತ್ಮಸ್ಥೈರ್ಯ ತುಂಬುವ ಸಲುವಾಗಿ ಮೈಸೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಎಂದರು.

ರಾಜ್ಯ ಸರ್ಕಾರ ಒಂದು ಸಮುದಾಯದ ಓಲೈಕೆ ರಾಜಕಾರಣ ಮಾಡುತ್ತಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ರಾಜ್ಯದ ಗಡಿ ಜಿಲ್ಲೆ ಬೆಳಗಾವಿ ಹಾಗೂ ಮಹಾರಾಷ್ಟ್ರದಲ್ಲಿ ಕನ್ನಡಿಗರ ಮೇಲೆ ನಡೆದಿರುವ ಹಲ್ಲೆಯ ಬಗ್ಗೆ ಆ ಭಾಗದ ಸಚಿವರು ಯಾವುದೇ ಪ್ರತಿಕ್ರಿಯೆ ನೀಡದೇ ಮೌನವಾಗಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬೆಂಬಲವಷ್ಟೇ ಮಾತಿಲ್ಲ: ನ್ಯಾಯಾಲಯದ ನಿರ್ದೇಶನದ ಮೇರೆಗೆ ಮಧ್ಯಾಹ್ನ 3 ಗಂಟೆ ಸುಮಾರಿಗೆ ಆರಂಭವಾದ ಮೈಸೂರು ಚಲೋ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಸಂಸದ ಪ್ರತಾಪ್‌ಸಿಂಹ, ಮಾಜಿ ಶಾಸಕ ಬಾಲರಾಜ್ ಇನ್ನಿತರ ಬಿಜೆಪಿ ನಾಯಕರು ಕಾರ್ಯಕರ್ತರಂತೆ ನಿಂತು ಪ್ರತಿಭಟನಾ ಸಭೆಗೆ ಬೆಂಬಲ ನೀಡಿದರೆ, ಹೊರತು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಇನ್ನೂ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಭಟನಾ ಸಭೆಯಿಂದ ದೂರ ಉಳಿದರು.

ಉದಯಗಿರಿ ಗಲಾಟೆ ಖಂಡಿಸಿ 'ಮೈಸೂರು ಚಲೋ'ಗೆ ಬಂದ ಬಿಜೆಪಿ ನಾಯಕರು ಹೋಟೆಲ್‌ನಲ್ಲಿ ಕಾಲ ಕಳೆದು ವಾಪಸ್ಸಾದರು...!?

ಕೋರ್ಟ್ ಅನುಮತಿಗೆ ಕಾಯುತ್ತಿದ್ದವರು ಅವಕಾಶ ಸಿಕ್ಕರೂ ಪ್ರತಿಭಟನೆಗಿಳಿಯಲಿಲ್ಲ!!





ಮೈಸೂರು–ಬೆಂಗಳೂರು ರಸ್ತೆಯ, ರಿಂಗ್‌ರೋಡ್ ಜಂಕ್ಷನ್‌ನಲ್ಲಿ ಪೊಲೀಸರು ರಸ್ತೆಗೆ ಬ್ಯಾರಿಕೇಡ್ ಅಳವಡಿಸಿ ಭದ್ರತೆ ಕೈಗೊಂಡಿರುವುದು. ಮತ್ತೊಂದು ಚಿತ್ರದಲ್ಲಿ ಖಾಸಗಿ ಹೋಟೆಲಿನಲ್ಲಿದ್ದ ಬಿಜೆಪಿ ನಾಯಕರನ್ನು ಕಾಣಬಹುದು

ಮೈಸೂರು,ಫೆ.24(ಎಂಟಿವೈ)– ಪೊಲೀಸರ ಅನುಮತಿ ನಿರಾಕರಣೆ ಹಾಗೂ ನಿಷೇಧಾಜ್ಞೆ ನಡುವೆಯೂ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 'ಮೈಸೂರು ಚಲೋ' ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಳ್ಳಲೆಂದು ಬಂದಿದ್ದ ಬಿಜೆಪಿ ನಾಯಕರು, ನಗರದ ಹೊರವಲಯದ ಹೋಟೆಲ್‌ನಲ್ಲೇ ಕಾಲ ಕಳೆದು ಹೋದರು.

ನಗರದ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಹಾಗೂ ಹಿಂಸಾಚಾರ ಖಂಡಿಸಿ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ವತಿಯಿಂದ ನಡೆಸಲುದ್ದೇಶಿಸಿದ್ದ 'ಮೈಸೂರು ಚಲೋ' ಮೆರವಣಿಗೆ ಹಾಗೂ ಸಮಾವೇಶದಲ್ಲಿ ಭಾಗವಹಿಸಲೆಂದು ಸೋಮವಾರ ಬೆಳಗ್ಗೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್ ಇನ್ನಿತರ ನಾಯಕರು, ಮೈಸೂರು–ಬೆಂಗಳೂರು ಹೆದ್ದಾರಿಯ ರಿಂಗ್ ರಸ್ತೆ ಜಂಕ್ಷನ್ ಬಳಿಯ ಖಾಸಗಿ ಹೋಟೆಲ್‌ಗೆ ತೆರಳಿದರು.

ಅಲ್ಲಿ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ ಸಿಂಹ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಹಿಂದುಳಿದ ವರ್ಗಗಳ ಮೋರ್ಚಾದ ರಘು ಆರ್.ಕೌಟಿಲ್ಯ, ಮಾಜಿ ಶಾಸಕ ಎನ್.ಮಹೇಶ್, ಮಾಜಿ ಮೇಯರ್ ಸಂದೇಶಸ್ವಾಮಿ ಇನ್ನಿತರ ಮುಖಂಡರೊಂದಿಗೆ ಸಮಾಲೋಚನೆ ನಡೆಸಿದರಲ್ಲದೆ, ಅನುಮತಿ ನಿರಾಕರಿಸಿದ್ದ ಪೊಲೀಸರ ಕ್ರಮ ವಿರೋಧಿಸಿ ರಾಷ್ಟ್ರ ಸುರಕ್ಷಾ ಸಮಿತಿ ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಹಾಕಿದ್ದರಿಂದ ನ್ಯಾಯಾಲಯದ ಆದೇಶಕ್ಕಾಗಿ ಎದುರು ನೋಡುತ್ತಿದ್ದರು.

ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿಯ ಅರ್ಜಿ ಪುರಸ್ಕರಿಸಿದ ನ್ಯಾಯಾಲಯ, ಮಹಾರಾಜ ಮೈದಾನದ ಫುಟ್‌ಬಾಲ್ ಅಂಗಣದಲ್ಲಿ ಮಧ್ಯಾಹ್ನ 1 ರಿಂದ ಸಂಜೆ 5 ಗಂಟೆಯೊಳಗೆ ಒಂದು ಗಂಟೆ ಕಾಲ ಮಾತ್ರ ಶಾಂತಿಯುತವಾಗಿ ಪ್ರತಿಭಟನೆ ನಡೆಸಲು ಅನುಮತಿ ನೀಡಿತ್ತು. ನ್ಯಾಯಾಲಯದ ಆದೇಶದ ಬಳಿಕ ಪೊಲೀಸ್ ಆಯುಕ್ತರೂ ನಿಷೇಧಾಜ್ಞೆ ಪರಿಷ್ಕೃತಗೊಳಿಸಿದ್ದರು. ಆದರೆ ಬಿ.ವೈ.ವಿಜಯೇಂದ್ರ, ಆರ್.ಅಶೋಕ್ ಸೇರಿದಂತೆ ಹಲವು ಮುಖಂಡರು ಪ್ರತಿಭಟನಾ ಸ್ಥಳಕ್ಕೆ ಮುಖಮಾಡಲಿಲ್ಲ. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ನೇತೃತ್ವದಲ್ಲಿ ಸ್ಥಳೀಯ ನಾಯಕರು ಹಾಗೂ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ಸದಸ್ಯರು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ, ತೆರಳಿದರು. ವೀರಾವೇಶದಿಂದ ಮೈಸೂರಿಗೆ ದಾಂಗುಡಿ ಇಟ್ಟ ನಾಯಕರ ಅನುಪಸ್ಥಿತಿ ಬಗ್ಗೆ ಯಾರೂ ತುಟಿ ಬಿಚ್ಚಲಿಲ್ಲ.

ಅನುಮತಿ ನಿರಾಕರಣೆ: ನಗರದ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಹಾಗೂ ಹಿಂಸಾಚಾರ ಖಂಡಿಸಿ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ವತಿಯಿಂದ 'ಮೈಸೂರು ಚಲೋ' ಮೆರವಣಿಗೆ ಹಾಗೂ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಮತ್ತೊಂದೆಡೆ ರಾಜಕೀಯ ಲಾಭಕ್ಕಾಗಿ ಬಿಜೆಪಿಯವರು ಸಾಮರಸ್ಯ ಹಾಳುಮಾಡುತ್ತಿದ್ದಾರೆ ಎಂದು ದಲಿತ ಮಹಾಸಭಾ ಹಾಗೂ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಸಹಯೋಗದಲ್ಲಿ ಮೌನ ಮೆರವಣಿಗೆ ಹಾಗೂ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಆದರೆ ಈ ಎರಡೂ ಪ್ರತ್ಯೇಕ ಮೆರವಣಿಗೆ ಆರಂಭವಾಗುವ ಸ್ಥಳ, ಮಾರ್ಗ ಹಾಗೂ ಸಮಾವೇಶ ನಡೆಸಲುದ್ದೇಶಿಸಿದ್ದ ಸ್ಥಳ, ಅಲ್ಲದೆ ನಿಗದಿಪಡಿಸಿದ್ದ ಸಮಯವೂ ಒಂದೇ ಆಗಿತ್ತು.

ಎರಡು ಪ್ರತ್ಯೇಕ ಮೆರವಣಿಗೆ ಹಾಗೂ ಸಮಾವೇಶಕ್ಕೆ ಅನುಮತಿ ಕೋರಿ ಪೊಲೀಸರಿಗೆ ಸಲ್ಲಿಸಿದ್ದ ಮನವಿಯಲ್ಲಿ ಗನ್‌ಹೌಸ್ ವೃತ್ತದಿಂದ ಬೆಳಗ್ಗೆ 11 ಗಂಟೆಗೆ ಮೆರವಣಿಗೆ ಆರಂಭಿಸಿ, ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಸಮಾವೇಶ ನಡೆಸಲಾಗುವುದು ಎಂದು ನಮೂದಿಸಲಾಗಿತ್ತು. ಈ ಎರಡೂ ಮೆರವಣಿಗೆ ಹಾಗೂ ಸಮಾವೇಶಕ್ಕೆ ಅವಕಾಶ ನೀಡಿದರೆ ಘರ್ಷಣೆ ಉಂಟಾಗಿ ಕಾನೂನು–ಸುವ್ಯವಸ್ಥೆಗೆ ಭಂಗವಾಗಬಹುದು ಎಂದು ಗುಪ್ತಚರ ಇಲಾಖೆ ವರದಿ ನೀಡಿದ ಹಿನ್ನೆಲೆಯಲ್ಲಿ ಎರಡೂ ಮೆರವಣಿಗೆ ಹಾಗೂ ಸಮಾವೇಶಕ್ಕೆ ಅನುಮತಿ ನಿರಾಕರಿಸಲಾಗಿತ್ತು. ಅಲ್ಲದೆ ಮುಂಜಾಗ್ರತಾ ಕ್ರಮವಾಗಿ ನಗರದಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶಿಸಿದ್ದರು.

ಬಿಗಿ ಬಂದೋಬಸ್ತ್: ನಿಷೇಧಾಜ್ಞೆ ಇದ್ದರೂ 'ಮೈಸೂರು ಚಲೋ' ಮೆರವಣಿಗೆ ನಡೆಸಲು ಯೋಜಿಸಲಾಗಿತ್ತು. ಇದಕ್ಕಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಬಿಜೆಪಿಯ ಹಲವು ನಾಯಕರು ಮೈಸೂರಿಗೆ ಆಗಮಿಸುವ ಮಾಹಿತಿ ತಿಳಿದ ಪೊಲೀಸರು, ಕಟ್ಟೆಚ್ಚರ ವಹಿಸಿದ್ದರು. ಎಲ್ಲೆಡೆ ಸಿಬ್ಬಂದಿಯನ್ನು ನಿಯೋಜಿಸಿ, ನಿಗಾ ವಹಿಸಲಾಗಿತ್ತು. ಯಾವ ಮುಖಂಡರೂ ನಗರ ಪ್ರವೇಶಿಸದಂತೆ ಮೈಸೂರು–ಬೆಂಗಳೂರು ಹೆದ್ದಾರಿಯ ರಿಂಗ್ ರಸ್ತೆ ಜಂಕ್ಷನ್‌ನಲ್ಲೇ ಬ್ಯಾರಿಕೇಡ್ ಅಳವಡಿಸಿ, 50ಕ್ಕೂ ಹೆಚ್ಚು ಪೊಲೀಸರು ಮೊಕ್ಕಾಂ ಹೂಡಿದ್ದರು.

ಮೆರವಣಿಗೆ ಆರಂಭಿಸಲು ಉದ್ದೇಶಿಸಿದ್ದ ಗನ್‌ಹೌಸ್ ವೃತ್ತದಲ್ಲೂ ಪೊಲೀಸರು ಭಾರಿ ಸಂಖ್ಯೆಯಲ್ಲಿ ಬಿಗಿ ಬಂದೋಬಸ್ತ್ ಮಾಡಿದ್ದರು. ನಿಯಮ ಉಲ್ಲಂಘಿಸಿ ಪ್ರತಿಭಟನೆಗೆ ಮುಂದಾದರೆ ಬಂಧಿಸಿ ಕರೆದೊಯ್ಯಲು ವಾಹನ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದರು. ಸಮಾವೇಶಕ್ಕೆ ಉದ್ದೇಶಿಸಿದ್ದ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿಯೂ ಭಾರಿ ಬಂದೋಬಸ್ತ್ ಮಾಡಲಾಗಿತ್ತು. ದೇವಾಲಯಕ್ಕೆ ಹೋಗುತ್ತಿದ್ದ ಭಕ್ತರ ಮೇಲೂ ಹದ್ದಿನಕಣ್ಣಿಡಲಾಗಿತ್ತು.

ದಲಿತ ಸಿಎಂ ಆಗಲೇಬೇಕು: ಜ್ಞಾನಪ್ರಕಾಶ ಸ್ವಾಮೀಜಿ ಆಗ್ರಹ

ಬೆಂಗಳೂರು, ಫೆ.24– ಕಾಂಗ್ರೆಸ್‌ನಲ್ಲಿ ದಲಿತ ಸಿಎಂ ಚರ್ಚೆ ಬೆನ್ನಲ್ಲೇ, ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿಯವರು ದಲಿತ ಸಿಎಂ ಆಗಲೇಬೇಕು ಎಂದು ಆಗ್ರಹಿಸಿದ್ದಾರೆ.

ಕಾವೇರಿ ನಿವಾಸದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಬಳಿಕ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು. ಈ ವೇಳೆ, ಖಂಡಿತವಾಗಿಯೂ ದಲಿತ ಸಿಎಂ ಆಗಲೇಬೇಕು. ಪ್ರಜಾಪ್ರಭುತ್ವದಲ್ಲಿ ಶೋಷಿತ ಸಮುದಾಯದವರು ಮುಖ್ಯಮಂತ್ರಿ ಸ್ಥಾನಕ್ಕೆ ಹೋಗದೇ ಇದ್ದರೆ ಇದಕ್ಕಿಂತ ಹೀನಾಯ ಸ್ಥಿತಿ ಮತ್ತೊಂದಿಲ್ಲ. ಸಾಮಾಜಿಕ ನ್ಯಾಯ ಸಿಗಲಿ ಅನ್ನೋದೇ ನಮ್ಮ ಉದ್ದೇಶ. ಶೋಷಿತ ಸಮುದಾಯದವರು ಯಾರೇ ಆದರೂ ಸಿಎಂ ಆಗಲಿ ಎಂದಿದ್ದಾರೆ.

ಇದೇ ವೇಳೆ ಜಾತಿಗಣತಿ ಬಿಡುಗಡೆ ಆಗಲೇಬೇಕು ಎಂದು ಅವರು ಆಗ್ರಹಿಸಿದ್ದಾರೆ. ಸಾಮಾಜಿಕ ನ್ಯಾಯ ಸಿಗಬೇಕಾದರೆ, ಜಾತಿಗಣತಿ ವರದಿ ಬಿಡುಗಡೆ ಆಗಬೇಕು. ಗ್ರಾಮ ಪಂಚಾಯಿತಿ ಸದಸ್ಯರಾಗದಿರುವ ಸಮುದಾಯವೂ ಇದೆ. ಉಳ್ಳವರು, ಬಲಿಷ್ಠರ ಕೈಯ್ಯಲ್ಲಿ ಆಡಳಿತ ಸಿಕ್ಕಿಹಾಕಿಕೊಂಡರೆ ಕಷ್ಟ. ಹಾಗಾಗಿ ಜಾತಿಗಣತಿ ಜಾರಿಯಾಗಲೇಬೇಕು. ಸಿಎಂಗೆ ಈ ಬಗ್ಗೆ ಮನವಿ ಮಾಡಿದ್ದೇವೆ. ಅತ್ಯಂತ ಕಟ್ಟಕಡೆಯ ವ್ಯಕ್ತಿಗೂ ರಾಜಕೀಯ ಹಕ್ಕು, ಅಧಿಕಾರ ಸಿಗಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಕಂಡಕ್ಟರ್ ಮೇಲೆ ಶಿವಸೇನೆ ಕಾರ್ಯಕರ್ತರ ಹಲ್ಲೆ

ಮಹಾರಾಷ್ಟ್ರದೊಂದಿಗೆ ಮಾತುಕತೆಗೆ ಸಾರಿಗೆ ಇಲಾಖೆ ಕಾರ್ಯದರ್ಶಿಗೆ ಸೂಚನೆ

ಬೆಂಗಳೂರು: ಮಹಾರಾಷ್ಟ್ರದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ಮೇಲೆ ದಾಳಿ ನಡೆಸಿದ ಘಟನೆಗಳ ಕುರಿತು ಪ್ರತಿಕ್ರಿಯಿಸಿದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಈ ಕುರಿತು ಮಹಾರಾಷ್ಟ್ರದ ತಮ್ಮ ಸಹೋದ್ಯೋಗಿಂರೊಂದಿಗೆ ಮಾತನಾಡಲು ಸಾರಿಗೆ ಇಲಾಖೆ ಕಾರ್ಯದರ್ಶಿಗೆ ಸೂಚಿಸಿರುವುದಾಗಿ ಸೋಮವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮರಾಠಿ ಬರುವುದಿಲ್ಲ ಕನ್ನಡದಲ್ಲಿ ಮಾತನಾಡಿ ಎಂದು ಕೇಳಿದ



ಕಾರಣಕ್ಕೆ ಬೆಳಗಾವಿಯಲ್ಲಿ ವಾಯುವ್ಯ ಸಾರಿಗೆ ಸಂಸ್ಥೆ ಬಸ್ ಕಂಡಕ್ಟರ್ ಮೇಲೆ ಹಲ್ಲೆ ನಡೆಸಿದ ಘಟನೆಯಿಂದಾಗಿ ಕನ್ನಡಪರ ಸಂಘಟನೆಗಳು ಚಿತ್ರದುರ್ಗದಲ್ಲಿ ಮಹಾರಾಷ್ಟ್ರದ ಸಾರಿಗೆ ಸಂಸ್ಥೆಯ ನಾಲ್ಕೈದು ಬಸ್‌ಗಳಿಗೆ ಕಪ್ಪು ಬಣ್ಣ ಬಳಿದಿದ್ದಾರೆ' ಎಂದರು.

'ನಮ್ಮ ಇಲಾಖೆಯ ಕಾರ್ಯದರ್ಶಿಗೆ ಮಹಾರಾಷ್ಟ್ರದಲ್ಲಿರುವ ಅವರ ಸಹವರ್ತಿಯೊಂದಿಗೆ ಮಾತನಾಡಲು ಸೂಚಿಸಲಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವೆ ಪ್ರತಿನಿತ್ಯ ಸಾವಿರಾರು ಜನರು ಸಂಚರಿಸುತ್ತಿದ್ದು, ಇಂತಹ ಘಟನೆಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿದೆ. ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲು ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದೇನೆ ಎಂದು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ತಂಡೆಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗೇಮ್ ಚೇಂಜರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ನಿಲವುಕು ಎನಮೇಲ್ ಎನ್ನಡಿ ಕೋಪಂ(ತ)	4 ಪ್ರದರ್ಶನಗಳು
ಸಂಗಂ	
ವಿಷ್ಣುಪ್ರಿಯ (ಕ)	4 ಪ್ರದರ್ಶನಗಳು
ಲಿಡೋ	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಇದಮೊಯರ್ಚಿ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿಡ್ಡಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.


ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಾಂಗ್ರೆಸ್‌ನದು ಬರೀ ವೋಟ್ ಪಾಲಿಟಿಕ್ಸ್ !

ಮೈಸೂರು,ಫೆ.24(ಎಂಟಿವೈ)– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲ್ಲೆಲ್ಲಾ ಮುಸ್ಲಿಮರ ಓಲೈಕೆಗೆ ಮುಂದಾಗುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.




ಮೈಸೂರಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಅಲ್ಪಸಂಖ್ಯಾತರ ಮತಕ್ಕಾಗಿ ಏನು ಬೇಕಾದರೂ ಮಾಡುತ್ತದೆ. ನಮಗೆ ವೋಟು ಹಾಕಿ, ನೀವು ಏನು ಬೇಕಾದರೂ ಮಾಡಿ ಎಂಬ ಸಂದೇಶವನ್ನು ಮುಸ್ಲಿಂ ಸಮುದಾಯಕ್ಕೆ ನೀಡುತ್ತಿದೆ. ಆ ಕಾರಣದಿಂದಲೇ ಉದಯಗಿರಿ ಗಲಭೆ ಪ್ರಕರಣ ನಡೆದಿದೆ. ಮುಸ್ಲಿಮರ ಮತಕ್ಕಾಗಿ ಕಾಂಗ್ರೆಸ್ ಯಾವ ಹಂತಕ್ಕೆ ಬೇಕಾದರೂ ಇಳಿಯುತ್ತದೆ. ಅವರ ಓಲೈಕೆಯಷ್ಟೇ ಕಾಂಗ್ರೆಸ್ ಉದ್ದೇಶ ಎಂದು ಆರೋಪಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲ್ಲೆಲ್ಲಾ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ. ಈ ಸರ್ಕಾರವನ್ನು ಕಿತ್ತೊಗೆಯುವುದೇ ನಮ್ಮ ಉದ್ದೇಶ. ನಮ್ಮ ಹೋರಾಟವನ್ನು ಹತ್ತಿಕ್ಕಲು ಮೈಸೂರಿನಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ ಎಂದು ತಿಳಿಸಿದರು.

ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಿಕೆ ಹತ್ತಿಕ್ಕಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹ

ಮೈಸೂರು,ಫೆ.24(ಎಂಟಿವೈ)–ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಕ್ಕೆ ಕಡಿವಾಣ ಹಾಕಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬೆಳಗಾವಿಯಲ್ಲಿ ಇತ್ತೀಚೆಗೆ ಮರಾಠಿಗರ ಪುಂಡಾಟ ಹೆಚ್ಚಾಗುತ್ತಿದೆ. ರಾಜ್ಯ ಸರ್ಕಾರ ಕೂಡಲೇ ಅದನ್ನು ಹತ್ತಿಕ್ಕಬೇಕು. ಕನ್ನಡಿಗರು ಗಲಾಟೆ ಮಾಡಿದರೆ ಅವರಿಗಿಂತ ಜೋರಾಗಿ ಗಲಾಟೆ ಮಾಡುತ್ತೇವೆ. ನಮಗೆ ಪುಂಡಾಟಿಕೆ ಇಷ್ಟ ಇಲ್ಲ ಅಷ್ಟೇ. ರಾಜ್ಯ ಸರ್ಕಾರ ಕನ್ನಡಿಗರ ವಿಚಾರದಲ್ಲಿ ರಾಜಕಾರಣ ಮಾಡುವುದಿಲ್ಲ ಎಂದುಕೊಂಡಿದ್ದೇನೆ. ಮರಾಠಿ ಪುಂಡರಿಗೆ ತಕ್ಕಪಾಠ ಕಲಿಸಲೇಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ಗ್ಯಾರಂಟಿ ಹೆಸರಿನಲ್ಲಿ ಜನರ ಕಿವಿಗೆ ಹೂ ಮುಡಿಸುತ್ತಿದೆ. ಒಂದು ಗ್ಯಾರಂಟಿ ಯೋಜನೆಯೂ ಫಲಾನುಭವಿಗಳಿಗೆ ಸರಿಯಾಗಿ ತಲುಪಿಲ್ಲ. ಸುಮ್ಮನೆ ಗ್ಯಾರಂಟಿ... ಗ್ಯಾರಂಟಿ... ಎಂದು ಓಡಾಡುತ್ತಿದ್ದಾರೆ. ಕೆಎಸ್‌ಆರ್‌ಟಿಸಿಯನ್ನು ಹಾಳು ಮಾಡಿದ್ದಾಯಿತು. ಈಗ ವಿದ್ಯುತ್ ನಿಗಮವನ್ನೂ ಹಾಳು ಮಾಡುತ್ತಿದ್ದಾರೆ ಎಂದು ದೂರಿದರು.

ಮುನಿಸು ಮರೆತರು: ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಮಾಜಿ ಸಂಸದ ಪ್ರತಾಪ ಸಿಂಹ ಭೇಟಿ ಮಾಡಿ ಕುತೂಹಲ ಮೂಡಿಸಿದರು. ಕೆಲ ತಿಂಗಳಿಂದ ಬಿಜೆಪಿಯ ಕೆಲ ನಾಯಕರ ಮೇಲೆ ಮುನಿಸಿಕೊಂಡು ಬಂಡಾಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಜೊತೆ ಗುರುತಿಸಿಕೊಂಡಿದ್ದ ಪ್ರತಾಪ ಸಿಂಹ ಇಂದು ಬಿ.ವೈ.ವಿಜಯೇಂದ್ರ ಅವರನ್ನು ಭೇಟಿ ಮಾಡಿ, ಅಚ್ಚರಿ ಮೂಡಿಸಿದರು. ವಿಜಯೇಂದ್ರ ಪಕ್ಕದಲ್ಲೇ ಕುಳಿತು ಮಾತುಕತೆ ನಡೆಸಿದರು.



ವಾರಣಾಸಿಯ 'ಕಾಶಿ ವಿಶ್ವನಾಥ ಮಂದಿರದ ಮಾದರಿ ಪ್ರತಿರೂಪ' ಅನಾವರಣ

ಮೈಸೂರಲ್ಲೇ ಕಾಶಿ ವಿಶ್ವನಾಥನ ದರ್ಶಿಸುವ ಸದವಕಾಶ!

ಮಹಾಶಿವರಾತ್ರಿ ಪ್ರಯುಕ್ತ ಪ್ರಜಾಪಿತ ಈಶ್ವರೀಯ ವಿವಿಯಿಂದ ಕಣ್ಮನ ಸೆಳೆಯುವ ಪ್ರತಿರೂಪ ನಿರ್ಮಾಣ



21 ಅಡಿ ಎತ್ತರದ ರೂಬಿ ಕಲ್ಲಿನ ಮಾದರಿಯ ಶಿವಲಿಂಗ



'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ದ ಪ್ರವೇಶ ದ್ವಾರ.



ರೋಬೋಟಿಕ್ ಕುಂಭಕರ್ಣನಿಂದ ಧರ್ಮೋಪದೇಶ ನೀಡುವ ಮೂರ್‍ನಾಲ್ಕು ನಿಮಿಷದ 'ರೂಪಕ'ದ ದೃಶ್ಯ

ಮೈಸೂರು, ಫೆ.24(ಎಸ್‌ಪಿಎನ್)– ಮೈಸೂರು–ಹುಣಸೂರು ರಸ್ತೆಯ ಭಾರತೀಯ ವಿದ್ಯಾಭವನ ಮುಂಭಾಗದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ ಮೈಸೂರು ಘಟಕದ ವತಿಯಿಂದ ಆಯೋಜಿಸಿರುವ ವಾರಣಾಸಿಯ 'ಕಾಶಿ ವಿಶ್ವನಾಥ ಮಂದಿರದ ಮಾದರಿ ಪ್ರತಿರೂಪ' ಅನಾವರಣಗೊಂಡಿದ್ದು, ಇದು ದಿನನಿತ್ಯ ಸಾವಿರಾರು ಶಿವನ ಭಕ್ತರನ್ನು ಆಕರ್ಷಿಸುತ್ತಿದೆ.

ತ್ರಿಮೂರ್ತಿ ಶಿವಜಯಂತಿ ಮಹೋತ್ಸವದ ಪ್ರಯುಕ್ತ 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ವನ್ನು ಮಾ.2ರವರೆಗೆ ಪ್ರಜಾಪಿತ ಈಶ್ವರೀಯ ವಿವಿ ವತಿಯಿಂದ ಆಯೋಜಿಸಲಾಗಿದ್ದು, ಈ ವೇಳೆ ವಿಶೇಷ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು ಅನಾವರಣಗೊಳ್ಳಲಿವೆ. ಇದನ್ನು ದೂರದಿಂದ ಭಕ್ತರು ನೋಡಿದರೆ ಕಾಶಿ ವಿಶ್ವನಾಥ ದೇವಾಲಯವೇ ಮೈಸೂರಿನಲ್ಲಿ ತಲೆಯೆತ್ತಿದೆ ಎಂಬಂತೆ ಭಾಸವಾಗುತ್ತಿದೆ.

ಕಾಶಿ ವಿಶ್ವನಾಥನ ಮಂದಿರ ಆಕರ್ಷಣೆ: 150 ಅಡಿ ಉದ್ದ ಮತ್ತು 50 ಅಡಿ ಎತ್ತರದ ಭವ್ಯ ಕಾಶಿ ವಿಶ್ವನಾಥ ಮಂದಿರದ ಮಾದರಿ ನಿರ್ಮಾಣಗೊಂಡಿದೆ. ದೇವಸ್ಥಾನದ ಗೋಪುರಗಳು, ಸುಖಾನಾಸಿನಿ, ಗರ್ಭಗೃಹದ ಮಾದರಿಯನ್ನು ನಿರ್ಮಾಣ ಮಾಡಲಾಗಿದ್ದು, ಗರ್ಭಗೃಹದಲ್ಲಿ ಲಿಂಗ ರೂಪಿ ಕಾಶಿ ವಿಶ್ವನಾಥ ಮೂರ್ತಿಯ ಪ್ರತಿರೂಪವನ್ನು ಸ್ಥಾಪಿಸಿ, ನಂದಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ದೇವಾಲಯದ ಪ್ರತಿರೂಪದ ಸುತ್ತ ಬಣ್ಣ–ಬಣ್ಣದ ವಿದ್ಯುತ್ ದೀಪಗಳನ್ನು ಅಲಂಕಾರಗೊಳಿಸಿದ್ದು, ರಾತ್ರಿವೇಳೆ ಕಾಶಿವಿಶ್ವನಾಥ ಮಂದಿರದ ಪ್ರತಿರೂಪ ಕಂಗೊಳಿಸುತ್ತಿದೆ.

ಭಕ್ತರ ಕಣ್ಮನ ಸೆಳೆಯುತ್ತಿದೆ ಶಿವಲಿಂಗ: ಭಕ್ತರು ಈ ಆವರಣಕ್ಕೆ ಪ್ರವೇಶಿಸುತ್ತಿದ್ದಂತೆ ಮೊದಲಿಗೆ 21 ಅಡಿ ಎತ್ತರದ ರೂಬಿ ಕಲ್ಲಿನ ಮಾದರಿಯ ಶಿವಲಿಂಗ ಭಕ್ತರ ಸೆಳೆಯುತ್ತಿದೆ. ಬೃಹದಾಕಾರದ ರೂಬಿ ಶಿವಲಿಂಗವು ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿದೆ. ಇದನ್ನು ನೋಡಲು ಬರುವ ಭಕ್ತರು, ಕ್ಷಣಕಾಲ ಅಲ್ಲೇ ನಿಂತು ಭಕ್ತಿಯಿಂದ ಶಿವಲಿಂಗಕ್ಕೆ ನಮಿಸಿ ಮುಂದೆ ಸಾಗುತ್ತಾರೆ. ಇನ್ನು ಕೆಲವರು ಶಿವಲಿಂಗದ ಮುಂದೆ ನಿಂತು ನೆನಪಿಗಾಗಿ ತಮ್ಮ ಮೊಬೈಲ್‌ನಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ.

ರೋಬೋಟಿಕ್ ಕುಂಭಕರ್ಣ: ಜಗತ್ತಿನಲ್ಲಿ ಅಜ್ಞಾನದ ಅಂಧಕಾರವನ್ನು ಮೈಗೂಡಿಸಿಕೊಂಡು ಕುಂಭಕರ್ಣನಂತೆ ಗಾಢ ನಿದ್ರೆಯಲ್ಲಿ ಮಲಗಿದ್ದು, ಆತನಿಗೆ ಜ್ಞಾನದ ಬೆಳಕನ್ನು ನೀಡಿ, ಧರ್ಮೋಪದೇಶ ನೀಡುವ ಮೂರ್‍ನಾಲ್ಕು ನಿಮಿಷದ 'ರೂಪಕ' ಭಕ್ತರ ಹೃದಯಕ್ಕೆ ನಾಟುತ್ತಿದೆ. ವ್ಯಸನಗಳಿಂದ ತುಂಬಿರುವ ಜಗತ್ತನ್ನು ನಾಶದ ಅಂಚಿಗೆ ತೆಗೆದುಕೊಂಡು ಹೋಗುವ ಬದಲು ಧ್ಯಾನ– ಯೋಗದಿಂದ ಭಕ್ತರ ಮನಸ್ಸನ್ನು ಜಾಗೃತಗೊಳಿಸಿ, ಆರೋಗ್ಯವಂತರಾಗಿ ಬದುಕಲು ಯಾವ ಜೀವನ ಸೂತ್ರಗಳನ್ನು ಅನುಸರಿಸಬೇಕು ಎಂಬುದನ್ನು ಈ ರೂಪಕದಲ್ಲಿ ಅಳವಡಿಸಲಾಗಿದೆ.

ಈ ರೂಪಕಕ್ಕೆ ರೋಬೋಟಿಕ್ ಕುಂಭಕರ್ಣನನ್ನು ಬಳಸಿಕೊಂಡಿದ್ದು, ಇದಲ್ಲದೇ ಮನಸ್ಸಿಗೆ ಮಸಾಜ್ ಮಾಡುವ 7 ನಿಮಿಷಗಳ ಕಂಪ್ಯೂಟರ್ ಪ್ರೋಗ್ರಾಮಿಂಗ್ ಮಾಡಿ, ಕಿವಿಗೆ ಹೆಡ್‌ಫೋನ್ ಹಾಕಿಕೊಂಡು ಈ ಮಸಾಜ್ ಪ್ರಕ್ರಿಯೆಗೆ ಒಳಗಾಗಬಹುದು. ಜನರು ಸಾಮರಸ್ಯ ಹಾಗೂ ಆರೋಗ್ಯಪೂರ್ಣ ಜೀವನ ಸಾಗಿಸಲು ಚಿತ್ರ ಪ್ರದರ್ಶನವನ್ನು ಆಯೋಜಿಸಲಾಗಿದೆ. ದ್ವಾದಶ ಜ್ಯೋತಿರ್ಲಿಂಗಗಳ ಪ್ರತಿರೂಪದ 12 ಜ್ಯೋತಿರ್ಲಿಂಗ ದರ್ಶನವೂ ಇಲ್ಲಿ ಆಗಲಿದೆ. ಇದರ ಜೊತೆಗೆ ನವಚೈತನ್ಯ ದೇವಿಯರ ದರ್ಶನ, ಆಧ್ಯಾತ್ಮದಲ್ಲಿ ಧ್ಯಾನ–ಜ್ಞಾನ, ಯೋಗದ ಮಹತ್ವವನ್ನು ಭಕ್ತರಿಗೆ ಚಿತ್ರ ಸಮೇತ ವಿವರಣೆ ನೀಡಲಾಗುತ್ತಿದೆ.

ಫೆ.19ರಿಂದ ಆರಂಭಗೊಂಡಿರುವ 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ವನ್ನು, ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಅವರು ಚಾಲನೆ ನೀಡಿದ್ದು, ಫೆ.20ರಂದು 'ಮೌಲ್ಯಾಧಾರಿತ ಜೀವನದ ಒಳಗುಟ್ಟು' ವಿಷಯ ಕುರಿತು ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಸಂದೇಶ ನೀಡಿದ್ದಾರೆ. ಫೆ. 21ರಂದು ಪ್ರೊ.ಎಂ.ಕೃಷ್ಣೇಗೌಡ ಅವರು 'ಸಂತೋಷವೆಂಬ ಔಷಧ' ವಿಷಯ ಕುರಿತು, ಫೆ.22ರಂದು ಸುರೇಶ್ ಎನ್.ಋಗ್ವೇದಿ ಅವರು ಆಧ್ಯಾತ್ಮ ಮತ್ತು ರಾಷ್ಟ್ರೀಯ ಮೌಲ್ಯಗಳು, ಫೆ.23ರಂದು ಮೊಣ್ಣಂಡ ಶೋಭಾ ಸುಬ್ಬಯ್ಯ ಅವರು, ನಾ ಕಂಡಂತೆ ರಾಮಾಯಣ' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ್ದಾರೆ ಎಂದು ಪ್ರಜಾಪಿತ ಈಶ್ವರೀಯ ವಿವಿ ಮೈಸೂರು ವಲಯದ ಮುಖ್ಯಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ ಮಾಹಿತಿ ನೀಡಿದರು.

ಅಂತೆಯೇ ಫೆ.25ರಂದು ಡಾ.ಎಚ್.ಆರ್. ಅಭಿಜಿತ್ ಅವರಿಂದ ಆಧ್ಯಾತ್ಮ ಮತ್ತು ಮಾನಸಿಕ ಆರೋಗ್ಯ ಹಾಗೂ ಫೆ.26ರಂದು ಮಹಾಶಿವರಾತ್ರಿ ಪ್ರಯುಕ್ತ ಖ್ಯಾತ ನೃತ್ಯಪಟು ಡಾ.ವಸುಂಧರಾ ದೊರೆಸ್ವಾಮಿ ತಂಡದಿಂದ ಭರತನಾಟ್ಯ, ಬಿ.ಕೆ.ತಿಪ್ಪಯ್ಯ ತಂಡದಿಂದ ಆಧ್ಯಾತ್ಮ ಗೀತೆಗಳು, ಕುಮಾರ್ ಪ್ರದರ್ಶಕ ಕಲಾ ಕೇಂದ್ರದಿಂದ ಶಿವಾಮೃತ ನೃತ್ಯ ರೂಪ ನಡೆಸಿಕೊಡಲಿದ್ದಾರೆ ಎಂದರು.

> “ 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ಕ್ಕೆ ಮೈಸೂರು ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಯ ಭಕ್ತರು ಪ್ರತಿದಿನ ಸಂಜೆ ಅಧಿಕ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಆಧ್ಯಾತ್ಮ ಕುರಿತು ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಉಪನ್ಯಾಸ ಸಭೆಯಲ್ಲೂ ಭಾಗವಹಿಸುತ್ತಾರೆ. ಒತ್ತಡ ರಹಿತ, ಆರೋಗ್ಯ ಮುಕ್ತ ಜೀವನ ರೂಪಿಸಿಕೊಳ್ಳುವ ಹಂಬಲ ಭಕ್ತರಲ್ಲಿ ಕಂಡುಬರುತ್ತಿದೆ.
> –ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ, ಮುಖ್ಯ ಸಂಚಾಲಕಿ, ಮೈಸೂರು ವಲಯ ಪ್ರಜಾಪಿತ ಈಶ್ವರೀಯ ವಿವಿ

ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಅದೆಷ್ಟೋ ಮಂದಿ ತೆರೆಮರೆಯಲ್ಲಿದ್ದಾರೆ

ಅವರ ಗುರುತಿಸಿ, ಗೌರವಿಸುವ ಕೆಲಸ ಆಗಬೇಕಿದೆ: ಡಾ.ರಂಗನಾಥ್



ಹಿರಿಯ ಲೇಖಕ ಡಾ.ವಿ.ರಂಗನಾಥ್ ಮಾತನಾಡುತ್ತಿರುವುದು

ಮೈಸೂರು: ನಮಗೆ ಸ್ವಾತಂತ್ರ್ಯ ತಂದುಕೊಡಲು ಹೋರಾಡಿದ ಮಹನೀಯರ ತ್ಯಾಗ–ಬಲಿದಾನವನ್ನು ಎಂದಿಗೂ ಮರೆಯಬಾರದು ಎಂದು ಹಿರಿಯ ಲೇಖಕ ಡಾ.ವಿ.ರಂಗನಾಥ್ ಅಭಿಪ್ರಾಯಪಟ್ಟರು. ಭಾರತೀಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ ವಿಷಯ ಕುರಿತು ಮಾತನಾಡಿದ ಅವರು, ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವತಿಯಿಂದ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ 150 ಮಂದಿ ಪತ್ತೆ ಮಾಡಲಾಗಿದೆ. ಈ ಕುಟುಂಬಗಳು ಸ್ವಾತಂತ್ರ್ಯ ಹೋರಾಟದ ನೆಪದಲ್ಲಿ ಸರ್ಕಾರಿ ಸವಲತ್ತು ಪಡೆಯಲು ಮುಂದೆ ಬಂದಿಲ್ಲ. ಹಾಗಾಗಿ ಈ ಕುಟುಂಬಗಳು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿವೆ ಎಂಬುದು ದಾಖಲಾಗಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ಸರ್ಕಾರಿ ದಾಖಲೆ ಪತ್ರಗಳಲ್ಲಿ ಇರುವವರು ಮಾತ್ರ ಸ್ವಾತಂತ್ರ್ಯ ಹೋರಾಟ ಮಾಡಿಲ್ಲ. ಇನ್ನು ಕೆಲವರು ಎಲೆ ಮರೆಕಾಯಿಯಂತಿದ್ದು, ಇವರನ್ನು ಗುರುತಿಸುವ ಕೆಲಸವಾಗಬೇಕು. ಅಲ್ಲದೆ, ನಮ್ಮ ಹಿಂದಿನ ಆಚರಣೆಗಳನ್ನು ಮುಂದಿನ ಪೀಳಿಗೆಗೂ ಪರಿಚಯಿಸುವ ಅಗತ್ಯತೆ ಇದೆ ಎಂದು ಕೆಲ ಪ್ರಸಂಗಗಳನ್ನು ಉಲ್ಲೇಖಿಸಿದರು.

ರಾಹುಲ್ ಆಪ್ತ ಪಿತ್ರೋಡಾ ವಿರುದ್ಧ ಬೃಹತ್ ಭೂ ಹಗರಣ ಆರೋಪ

ಬೆಂಗಳೂರಿನಲ್ಲಿ 12 ಎಕ್ರೆ ಜಾಗ ಗುತ್ತಿಗೆ, 29 ವರ್ಷಗಳಿಂದ ಕೋಟ್ಯಂತರ ಲಾಭ

- ಲೋಕಾಯುಕ್ತ, ಇಡಿಗೆ ಪಿತ್ರೋಡಾ ಸೇರಿ 6 ಮಂದಿ ವಿರುದ್ಧ ಎನ್‌ಆರ್ ರಮೇಶ್ ದೂರು
- ಗುತ್ತಿಗೆ ಅವಧಿ ಮುಕ್ತಾಯವಾಗಿದ್ದರೂ ಇನ್ನೂ ಸರ್ಕಾರದ ವಶಕ್ಕೆ ಬಂದಿಲ್ಲ



ಪಿತ್ರೋಡಾ

ಬೆಂಗಳೂರು: ರಾಹುಲ್ ಗಾಂಧಿ ಅತ್ಯಾಪ್ತ ಹಾಗೂ ಕಾಂಗ್ರೆಸ್ ಪಕ್ಷದ ಸಾಗರೋತ್ತರ ಘಟಕದ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಅವರು ಬೃಹತ್ ಭೂ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿ ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಲೋಕಾಯುಕ್ತ ಮತ್ತು ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಿದ್ದಾರೆ.

ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ಸುಮಾರು 150 ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಅತ್ಯಮೂಲ್ಯ ಸರ್ಕಾರಿ ಸ್ವತ್ತನ್ನು ಸ್ಯಾಮ್ ಪಿತ್ರೋಡಾರವರು ಕಾನೂನು ಬಾಹಿರವಾಗಿ ಕಳೆದ 14 ವರ್ಷಗಳಿಂದ ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಆ ಸ್ವತ್ತಿನಲ್ಲಿ ಪ್ರತೀ ವರ್ಷ ಕೋಟ್ಯಂತರ ರೂಪಾಯಿ ಆದಾಯ ಗಳಿಸುತ್ತಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ದೂರಿನಲ್ಲಿ ಏನಿದೆ: ಒಡಿಶಾ ಮೂಲದ ಸ್ಯಾಮ್ ಪಿತ್ರೋಡಾ ಅಲಿಯಾಸ್ ಸತ್ಯನಾರಾಯಣ್ ಗಂಗಾರಾಂ ಪಿತ್ರೋಡಾ ಮುಂಬೈ ಮಹಾನಗರದ ರಿಜಿಸ್ಟ್ರಾರ್ ಆಫ್ ಕೋ– ಆಪರೇಟಿವ್ ಸೊಸೈಟೀಸ್ ಕಚೇರಿಯಲ್ಲಿ ಅಕ್ಟೋಬರ್ 23, 1991 ರಂದು "Foundation for Revitalisation of Local Health Traditions" (FRLHT) ಎಂಬ ಸಂಸ್ಥೆಯನ್ನು ನೋಂದಣಿ ಮಾಡಿಸುತ್ತಾರೆ ಹಾಗೂ ಖುದ್ದು ಸ್ಯಾಮ್ ಪಿತ್ರೋಡಾ ಅವರ ಲಿಖಿತ ರೂಪದ ಮನವಿಯಂತೆ FRLHT ಸಂಸ್ಥೆಯ ನೋಂದಣಿಯನ್ನು 2010ರಲ್ಲಿ ರದ್ದುಗೊಳಿಸಲಾಗುತ್ತದೆ.

ಇದಾದ ನಂತರ 2008 ರಲ್ಲಿ ಬೆಂಗಳೂರಿನ ಬ್ಯಾಟರಾಯನಪುರ ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ "Foundation for Revitalisation of Local Health Traditions" ಹೆಸರಿನ Trust Deed ಅನ್ನು ಸೆಪ್ಟಂಬರ್ 05, 2008 ರಂದು ನೋಂದಣಿ ಮಾಡಿಸುತ್ತಾರೆ. ಇದರ ನಡುವೆ "ಗಿಡ ಮೂಲಿಕೆ ಔಷಧಿ ಸಸಿಗಳ ಸಂರಕ್ಷಣೆ ಮತ್ತು ಸಂಶೋಧನೆ ಕಾರ್ಯ"ಕ್ಕೆ ಮೀಸಲು ಅರಣ್ಯ ಪ್ರದೇಶವನ್ನು ಗುತ್ತಿಗೆಗೆ ನೀಡುವಂತೆ 1996 ರಲ್ಲಿ ಸ್ಯಾಮ್ ಪಿತ್ರೋಡಾ ಮನವಿ ಸಲ್ಲಿಸುತ್ತಾರೆ.

ಸ್ಯಾಮ್ ಪಿತ್ರೋಡಾ ಅವರ ಮನವಿಯಂತೆ ಅವರ ಅಧ್ಯಕ್ಷತೆಯ FRLHT ಸಂಸ್ಥೆಗೆ ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯು ಬೆಂಗಳೂರಿನ ಯಲಹಂಕ ಬಳಿಯ ಜಾರಕಬಂಡೆ ಕಾವಲ್‌ನ 'ಬಿ' ಬ್ಲಾಕ್‌ನಲ್ಲಿ 5 ಹೆಕ್ಟೇರ್ (12.35 ಎಕರೆ) ವಿಸ್ತೀರ್ಣದ ಮೀಸಲು ಅರಣ್ಯ ಪ್ರದೇಶವನ್ನು 5 ವರ್ಷಗಳ ಗುತ್ತಿಗೆಗೆ ನೀಡುತ್ತದೆ. ಇದಕ್ಕೆ ಕೇಂದ್ರದ ಅರಣ್ಯ ಮತ್ತು ಪರಿಸರ ವಿಜ್ಞಾನ ಇಲಾಖೆಯೂ ಸಹ ಅನುಮೋದನೆ ನೀಡಿರುತ್ತದೆ.

ಸದರಿ FRLHT ಸಂಸ್ಥೆಗೆ ನೀಡಿದ್ದ 5 ವರ್ಷಗಳ ಗುತ್ತಿಗೆ ಅವಧಿಯು ಮುಕ್ತಾಯವಾಗಿದ್ದರಿಂದ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯು 2001ರಲ್ಲಿ 10 ವರ್ಷಗಳ ಅವಧಿಗೆ ಗುತ್ತಿಗೆಯನ್ನು ಮುಂದುವರೆಸಿ ಆದೇಶಿಸಿರುತ್ತದೆ. ಡಿಸೆಂಬರ್ 02, 2011ಕ್ಕೆ ಸ್ಯಾಮ್ ಪಿತ್ರೋಡಾ ಅವರ FRLHT ಸಂಸ್ಥೆಗೆ ನೀಡಿದ್ದ ಗುತ್ತಿಗೆ ಅವಧಿಯು ಮುಕ್ತಾಯಗೊಂಡಿರುತ್ತದೆ ಹಾಗೂ ಇದಾದ ನಂತರ ಗುತ್ತಿಗೆ ಅವಧಿಯನ್ನು ವಿಸ್ತರಿಸಲಾಗಿರುವುದಿಲ್ಲ. FRLHT ಸಂಸ್ಥೆಗೆ ನೀಡಿದ್ದ ಗುತ್ತಿಗೆ ಅವಧಿಯು ಮುಕ್ತಾಯಗೊಂಡ ನಂತರ 150 ಕೋಟಿ ರೂ. ಗಳಿಗೂ ಹೆಚ್ಚು ಮೌಲ್ಯದ 12.35 ಎಕರೆ ವಿಸ್ತೀರ್ಣದ ಈ ಅತ್ಯಮೂಲ್ಯ ಸರ್ಕಾರಿ ಸ್ವತ್ತನ್ನು ರಾಜ್ಯ ಅರಣ್ಯ ಇಲಾಖೆಯು ತನ್ನ ವಶಕ್ಕೆ ಪಡೆದುಕೊಳ್ಳಬೇಕಿತ್ತು.